Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-35 | ಆಗಸ್ಟ್ 25-31, 2025 | ಪುಟ 16 | ರೂ.10
Volume-19 | Issue-35 | Aug 25-31, 2025 | Pages 16 | Price 10/-

ನ್ಯಾ. ನಾಗಮೋಹನ್ ದಾಸ್ ವರದಿಯಲ್ಲಿ ಬಹಿರಂಗ



ಪರಿಶಿಷ್ಟ ಜಾತಿಗಳ ಶೇ. 85 ಜನರಿಗೆ ಭೂ ಒಡೆತನವಿಲ್ಲ

ಚುನಾವಣಾ ಆಯೋಗ: ವಿಶ್ವಾಸಾರ್ಹತೆ ಬಿಕ್ಕಟ್ಟಿನಲ್ಲಿ

ಧರ್ಮಸ್ಥಳ ಭೂ ಕಬಳಿಕೆ, ಮೈಕ್ರೋ ಫೈನಾನ್ಸ್, ಅಸಹಜ ಸಾವುಗಳ ಸಮಗ್ರ ತನಿಖೆಗೆ

ಎಡಪಕ್ಷಗಳ ಆಗ್ರಹ



ಅಲೆಮಾರಿ ಸಮುದಾಯ ಮತ್ತು ಅತಿ ಹಿಂದುಳಿದ ಜಾತಿಗಳಿಗೆ ಒಳಮೀಸಲಾತಿ: ಮತ್ತೊಂದು ವರ್ಗೀಕರಣ ಬೇಕು



ಫಿಡೆಲ್ ನಿನ್ನ ಹೆಸರದು ಸಿಡಿಲ್ ಸದ್ದು

ಮತದಾನದ ಹಕ್ಕಿಗಾಗಿ ಜಗತ್ತಿನ ಮೊದಲ ಕಾರ್ಮಿಕ ಆಂದೋಲನ

ಚಾರ್ಟಿಸ್ಟ್ ಚಳುವಳಿ



ಜೆ.ಎನ್. ಕಾಲಂ

ಭಾಗ 36

ಮತದಾನದ ಹಕ್ಕಿಗಾಗಿ 1831ರಲ್ಲಿ ನಡೆದ ಹೋರಾಟ ಹಲವು ಪ್ರದೇಶಗಳಲ್ಲಿ ದಂಗೆಯ ಸ್ವರೂಪ ತಳೆಯಿತು. ಇಂತಹ ವ್ಯಾಪಕ ಪ್ರತಿಭಟನೆಗಳ ನಂತರವೂ ಚುನಾವಣಾ ಸುಧಾರಣಾ ಕಾನೂನು ಅಂಗೀಕರಿಸುವುದಕ್ಕೆ ರಾಜ ಮತ್ತು ಲಾರ್ಡ್ಸ್‌ಗಳ ಸಭೆ ಬದ್ಧ ವಿರೋಧ ವ್ಯಕ್ತಪಡಿಸಿತು. ಮತ್ತೆ 1832ರ ಮೇನಲ್ಲಿ ಮತ್ತೆ ಪ್ರತಿಭಟನೆಗಳು ಪುಟಿದೆದ್ದವು. ಇವು 1831ರ ದಂಗೆಗಳಿಗೆ ಹೋಲಿಸಿದರೆ ಶಾಂತಿಯುತವಾಗಿದ್ದವು. ಆದರೆ ಬ್ರಿಟನ್ನಿನಾದ್ಯಂತ ಇಪ್ಪತ್ತು ಲಕ್ಷದಷ್ಟು ದೊಡ್ಡ ಪ್ರಮಾಣದಲ್ಲಿ ಜನಸಮೂಹಗಳನ್ನು ಒಳಗೊಂಡಿದ್ದವು ಮತ್ತು ಪರಿಣಾಮಕಾರಿ ವಿಧಾನಗಳನ್ನು ರೂಪಿಸಿಕೊಂಡವು.

ಈ ಬಾರಿ ಹಲವು ತೀವ್ರ ಪ್ರತಿಭಟನಾಕಾರರು ರಾಜಪ್ರಭುತ್ವವನ್ನೇ ಕೊನೆಗೊಳಿಸಬೇಕು, ನೋಬಲ್‌ಗಳೆಂಬ ರಾಜಮನ್ನಣೆಯ ಪ್ರದ್ಧತಿಯನ್ನೇ ಕಿತ್ತುಹಾಕಬೇಕೆಂಬ ದನಿ ಎತ್ತಿದರು. ಇದು 1640–49ರ ನಡುವಣ ರಾಜಪ್ರಭುತ್ವ ವಿರೋಧಿ ಯುದ್ಧದ ವಿಚಾರಗಳ ಪ್ರತಿಫಲನವಾಗಿ ಕಂಡು ರಾಜಪ್ರಭುತ್ವಕ್ಕೆ ಆತಂಕ ಮೂಡಿಸಿತು. ಅದರ ಜೊತೆಗೆ ಕರನಿರಾಕರಣೆ ಮತ್ತು ಬ್ಯಾಂಕುಗಳಿಂದ ಹಣ ಹಿಂತೆಗೆಯುವ ಕರೆ ಕೊಡಲಾಯಿತು. ಇದರ ಪರಿಣಾಮವಾಗಿ ಕೆಲವೇ ದಿನಗಳಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ (ಅಂದು ಬ್ರಿಟನ್‌ನ ರಿಸರ್ವ್ ಬ್ಯಾಂಕ್ ಸ್ವರೂಪದ ಬ್ಯಾಂಕ್)ನ ಒಟ್ಟು ಡೆಪಾಸಿಟ್‌ನ ಕಾಲು ಭಾಗದಷ್ಟು ಹಣವನ್ನು ಹಿಂತೆಗೆಯಲಾಯಿತು. ಇಂತಹ ಕ್ರಮಗಳು ಮತ್ತಷ್ಟು ಬೆಳೆಯುವುದನ್ನು ತಡೆಹಾಕುವ ಜರೂರು ರಾಜರು, ಲಾರ್ಡ್ಸ್‌ಗಳಿಗೆ (ಪಾಳೆಯಗಾರಿ ಜಹಗೀರುದಾರರು) ಉಂಟಾಯಿತು.

ಗ್ರೇಟ್ ರೆಫಾರ್ಮ್ಸ್ ಆಕ್ಟ್ (ಮಹಾ ಸುಧಾರಣೆಗಳ ಕಾಯಿದೆ) 1832 ಅಂಗೀಕಾರವಾಗಿ ಕಾನೂನಾಯಿತು. ಆದರೆ ಇದು ಎಷ್ಟರಮಟ್ಟಿಗೆ "ಮಹಾ ಸುಧಾರಣೆ" ಎಂಬುದನ್ನು ನೋಡೋಣ.

ಈ "ಮಹಾ ಸುಧಾರಣೆ" ಮತದಾನದ ಹಕ್ಕು ಹೊಂದಿರುವ ಬ್ರಿಟಿಷ್ ಪ್ರಜೆಗಳ ಪ್ರಮಾಣವನ್ನು ಕೇವಲ ಶೇ. 1.5ರಿಂದ ಶೇ. 3ಕ್ಕೆ ಮಾತ್ರ ಏರಿಸಿತು. ಹಳ್ಳಿಗಳಲ್ಲಿ ವಾರ್ಷಿಕ 40 ಪೌಂಡ್‌ನಷ್ಟು (ಬ್ರಿಟನ್‌ನ ಹಣ) ಆದಾಯ ಉಳ್ಳ ಸ್ವತಂತ್ರ ರೈತರು, ನಗರಗಳ ಆಸ್ತಿವಂತರು ಮಾತ್ರ ಮತದಾನದ ಹಕ್ಕು ಪಡೆದಿದ್ದ ಬ್ರಿಟನ್‌ನಲ್ಲಿ, 1832ರ ನಂತರ ಅದು ವಾರ್ಷಿಕ 10 ಪೌಂಡ್ ಆದಾಯ ಉಳ್ಳ ಖಾಯಂ ಗೇಣಿದಾರರು. 60 ವರ್ಷದಷ್ಟು ದೀರ್ಘ ಕಾಲದ ಆದಾಯ ಉಳ್ಳ ಭೂಮಿ ಲೀಸ್ ಪಡೆದವರಿಗೆ ಇನ್ನೂ ಹೆಚ್ಚಿನ ಆದಾಯ ಪಡೆದ ಇನ್ನೂ ಕೆಲವರಿಗೆ ವಿಸ್ತರಿಸಿತು. ಹಾಗೆಯೇ ನಗರ ಪಟ್ಟಣಗಳಲ್ಲಿ ಸ್ವಂತ ಆಸ್ತಿ ಹೊಂದಿಲ್ಲದ, ಆದರೆ ಹತ್ತು ಪೌಂಡ್ ಬಾಡಿಗೆ ನೀಡುವ ಮನೆಗಳ, ಅಂಗಡಿಗಳು ಮತ್ತಿತರ ಕಟ್ಟಡಗಳ ಬಾಡಿಗೆದಾರರಿಗೂ ವಿಸ್ತರಿಸಿತು. ಇದು ಕೇವಲ ಪುರುಷರಿಗೆ ಮಾತ್ರ ಅನ್ವಯಿಸುತ್ತಿತ್ತು. ಅದರ ಜೊತೆಗೆ ಪ್ರತಿ ಮತದಾರನೂ ಶುಲ್ಕ ತುಂಬಿ ತನ್ನ ಮತದಾರಿಕೆಯನ್ನು ನೋದಾಯಿಸಬೇಕಾಗುತ್ತಿತ್ತು.

ಈ ಮತದಾನದ ಹಕ್ಕು ಆರಂಭದಲ್ಲಿ ಕೇವಲ ಶೇ. 3ರಷ್ಟು ಮಾತ್ರ ಇದ್ದು, ಆರ್ಥಿಕತೆ ಬೆಳೆದಂತೆ, ನಗರಗಳು, ಕೈಗಾರಿಕಾ ಪ್ರದೇಶಗಳು ವಿಸ್ತರಿಸಿದಂತೆ, ಭೂಮಿ, ಕಟ್ಟಡಗಳ ಬೆಲೆ ಹೆಚ್ಚಿದಂತೆ ಹೆಚ್ಚಾಗುತ್ತಾ ಶೇ. 7ಕ್ಕೆ ಮಾತ್ರ ಮುಟ್ಟಿತು.

ಜನರಲ್ಲಿ ಕೇವಲ ಶೇ. 3 ರಿಂದ 7 ರಷ್ಟು ಎಂಬ ಸೀಮಿತ ಮತದಾನದ ಹಕ್ಕು ಗೇಣಿದಾರರಲ್ಲಿ ಸುಸ್ಥಿತಿವಂತರನ್ನು, ನಗರಗಳ ಸಣ್ಣ ವ್ಯಾಪಾರಿಗಳನ್ನು ಒಳಗೊಂಡರೂ, ಸಾರಾಸಗಟಾಗಿ ಎಲ್ಲ ಕಾರ್ಮಿಕರನ್ನು, ಕೂಲಿಕಾರರು, ಜೀತಗಾರರು ಮತ್ತು ಇತರ ದುಡಿಮೆಗಾರರನ್ನು ಹೊರಗಿಟ್ಟಿತು.

ಮತದಾನದ ಹಕ್ಕಿಗಾಗಿ ಕಾರ್ಮಿಕರ ಚಾರ್ಟಿಸ್ಟ್ ಆಂದೋಲನ

19ನೆಯ ಶತಮಾನದ ಆರಂಭದಿಂದ ಹಲವು ಬಾರಿ ಮತದಾನದ ಹಕ್ಕಿಗಾಗಿ ವಿಗ್ ಪಕ್ಷದ ಬಂಡವಾಳಶಾಹಿಗಳ ನೇತೃತ್ವದಲ್ಲಿ ಸಂಘರ್ಷ ನಡೆಸಿದ್ದ, ನೂರಾರು ಜನರ ಸಾವು, ಸಾವಿರಾರು ಜನರ ತೀವ್ರ ಗಾಯ, ಬಡತನ, ಹಸಿವನ್ನು ಅನುಭವಿಸಿದ್ದ ಕಾರ್ಮಿಕ, ದುಡಿಯುವ ಜನ ವಿಭಾಗದಲ್ಲಿ ಬಂಡವಾಳಶಾಹಿಗಳು ಮಾಡಿದ ಈ ವಂಚನೆಯಿಂದ ಬಹು ದೊಡ್ಡ ಪ್ರಮಾಣದಲ್ಲಿ ಅತೃಪ್ತಿ ಸಿಡಿದೆದ್ದಿತು. ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕ ನಾಯಕರುಗಳು ಮತದಾನದ ಹಕ್ಕಿನ ಮೋಸದ ಬಗ್ಗೆ ಕಾರ್ಮಿಕರ ಸಭೆಗಳಲ್ಲಿ ಮಾತನಾಡಲಾರಂಭಿಸಿದರು. ಅದೇ ಸಮಯದಲ್ಲಿ ಕಾರ್ಮಿಕರ ವೇತನ, ಮೊದಲಾದ ಪ್ರಶ್ನೆಗಳ ಮೇಲೆ ಮುಷ್ಕರಗಳೂ, ಇತರ ಸಂಘರ್ಷಗಳೂ 1824ರಿಂದಲೇ ಬೆಳೆಯುತ್ತಿದ್ದವು. ಸುಧಾರಣಾ ಕಾಯಿದೆಯ ನಂತರ ಬಂಡವಾಳಶಾಹಿಗಳು ಸಂಸತ್ತಿನಲ್ಲಿ, ತಮ್ಮ ಹೆಚ್ಚಿದ ಬಲವನ್ನು ಬಳಸಿ 1834ರಲ್ಲಿ ಒಂದು ಹೊಸ ಬಡವರ ಕಾನೂನನ್ನು ಅಂಗೀಕರಿಸಿದರು. ಇದು ಕೆಲಸ ದೊರೆಯದ ಬಡಜನರ ತಲೆಯ ಮೇಲೆ ಚಪ್ಪಡಿ ಎಳೆದಂತಾಯಿತು. ಅವರ ಕುಟುಂಬಗಳಿಗೆ ನೀಡುತ್ತಿದ್ದ ಅಲ್ಪ ಸ್ವಲ್ಪ ಸಹಾಯವನ್ನು ನಿಲ್ಲಿಸಿತು. ಕುಟುಂಬಗಳನ್ನು ಒಡೆದು ಮಕ್ಕಳನ್ನು, ತಂದೆಯನ್ನು, ತಾಯಿಯನ್ನು ಬೇರೆ ಬೇರೆ ವರ್ಕ್ ಹೌಸ್‌ಗಳೆಂಬ ಕ್ರೌರ್ಯದ ಕಾರ್ಯಾಗಾರಗಳಿಗೆ ಸೇರಿಸಿದರು. ಅಲ್ಲಿ ಸಣ್ಣ ಮಕ್ಕಳನ್ನು ಹೊರತುಪಡಿಸಿ ಉಳಿದೆಲ್ಲರನ್ನು ನಿಷ್ಕರುಣೆಯಿಂದ ದಿನಕ್ಕೆ ಹನ್ನೆರಡು ಗಂಟೆಗಳಿಗಿಂತ ಹೆಚ್ಚು ದುಡಿಸಿಕೊಂಡರು. (ಇಂತಹ ಕಾರ್ಯಾಗಾರಗಳ ಕ್ರೌರ್ಯಗಳ ಬಗ್ಗೆ ಚಾರ್ಲ್ಸ್ ಡಿಕನ್ಸ್ ತನ್ನ ಕಾದಂಬರಿಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಈ ಲೇಖನ ಮಾಲೆಯಲ್ಲಿ ಹಿಂದೆಯೇ ಈ ಬಗ್ಗೆ ವಿವರಗಳನ್ನು ನೀಡಲಾಗಿದೆ.)

ಈ ಕಾಯಿದೆಯ ಅಂಗೀಕಾರ ಕಾರ್ಮಿಕರ ರೋಷವನ್ನು ಮತ್ತಷ್ಟು ಹೆಚ್ಚಿಸಿತು. ತಮಗೆ ಮತದಾನದ ಹಕ್ಕನ್ನು ವಂಚಿಸಿ ಪಡೆದ ಹೆಚ್ಚಿನ ಸ್ಥಾನಗಳ ಬಲದಿಂದಲೇ ಇಂತಹ ಕಾಯಿದೆಯನ್ನು ತರಲು ಸಾಧ್ಯವಾಯಿತು. ಆದ್ದರಿಂದ ತಾವೂ ಮತದಾನದ ಹಕ್ಕನ್ನು ಪಡೆಯಬೇಕು, ಸಂಸತ್ತನ್ನು ಪ್ರವೇಶಿಸಬೇಕು, ಆಗ ತಾವು ಕಾರ್ಮಿಕರಿಗೆ, ಇತರ ದುಡಿಯುವ ಜನರಿಗೆ ಅನುಕೂಲವಾಗಿ ಕಾನೂನುಗಳು, ಆಡಳಿತ, ತೆರಿಗೆ ಮುಂತಾದವನ್ನು ಜಾರಿಗೆ ತರುವುದಕ್ಕೆ ಸಾಧ್ಯ ಎಂಬ ಭಾವನೆ ಬಲಿಯಿತು.

ಈ ಎಲ್ಲಾ ಅನ್ಯಾಯಗಳು, ಕಾರ್ಮಿಕರು ತಾವು ಅಲ್ಲಲ್ಲಿ ಪ್ರತ್ಯೇಕವಾಗಿ ಒಂದೊಂದು ಕಾರ್ಖಾನೆಯಲ್ಲಿ ಸ್ಥಾಪಿಸಿ ಕೊಂಡಿದ್ದ ಕಾರ್ಮಿಕ ಸಂಘಗಳನ್ನು 1834ರಲ್ಲಿ ಒಟ್ಟಾಗಿಸಿ 'ಗ್ರಾಂಡ್ ನ್ಯಾಷನಲ್ ಕನ್ಸಾಲಿಡೇಟೆಡ್ ಟ್ರೇಡ್ ಯೂನಿಯನ್' ಎಂಬ ಒಕ್ಕೂಟವನ್ನು ಸ್ಥಾಪಿಸಿ ಕೊಳ್ಳಲು ಪ್ರೇರಣೆ ನೀಡಿತು. ನೇಕಾರರು, ಕಟ್ಟಡ ಕಾರ್ಮಿಕರು, ಕುಂಬಾರರು, ಟೈಲರ್‌ಗಳು, ಉಣ್ಣೆ ಕಾರ್ಮಿಕರು, ಕೃಷಿ ಕೂಲಿಕಾರರ ಸಂಘಗಳೆಲ್ಲ ಸೇರಿ ಐದು ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ಈ ಒಕ್ಕೂಟಕ್ಕೆ ಸೇರಿದ್ದರು.

1936ರಲ್ಲಿ ವಿಲಿಯಂ ಲೋವೆಟ್ ಎಂಬುವರ ನೇತೃತ್ವದಲ್ಲಿ ಲಂಡನ್‌ನ ಕುಶಲ ಕರ್ಮಿಗಳ ಜನರಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದಿತು. 1837, 38ರಲ್ಲಿ ಕಾರ್ಮಿಕರು ಕಾರ್ಮಿಕ ಸಂಘಗಳನ್ನೂ ಮೀರಿ, ಲಂಡನ್ ಡೆಮಾಕ್ರಟಿಕ್ ಅಸೋಸಿಯೇಷನ್ ಎಂಬಂತಹ ರಾಜಕೀಯ ಸಂಘಟನೆಗಳನ್ನೂ ರೂಪಿಸಿಕೊಂಡರು.



1638ರಲ್ಲಿ ಮೇಲೆ ಹೇಳಿದ ಲೋವೆಟ್ ಮತ್ತವರ ಸಂಗಡಿಗರು ಮತ್ತು ಕೆಲವು ಮಧ್ಯಮ ವರ್ಗದ ಪ್ರಗತಿಪರ ಎಂಪಿಗಳೂ ಸೇರಿ ರಾಜಕೀಯ ಹಕ್ಕುಗಳ ಒಂದು ಘೋಷಣೆಯನ್ನು ತಯಾರಿಸಿದರು. ಆ ಘೋಷಣೆ ಕೆಳಗೆ ನೀಡಲಾದ ಆರು ಅಂಶಗಳನ್ನು ಒಳಗೊಂಡಿತ್ತು.

1) 21 ವರ್ಷ ಮತ್ತು ಹೆಚ್ಚಿನ ವಯಸ್ಸಿನ ಎಲ್ಲ ಪುರುಷರಿಗೂ ಮತದಾನದ ಹಕ್ಕು ದೊರೆಯಬೇಕು.
2) ಮತದಾನದ ಮೇಲೆ ಪಾಳೆಯಗಾರರ ಇತರ ಶ್ರೀಮಂತರ ಪ್ರಭಾವ ತಪ್ಪಿಸಲು ಗುಪ್ತ ಮತದಾನ ಪದ್ಧತಿ ಜಾರಿಗೆ ತರಬೇಕು.
3) ಯಾವುದೇ ಆಸ್ತಿ ಅರ್ಹತೆಯ ಮಾನದಂಡ ಇರಬಾರದು.
4) ಕಾಮನ್ಸ್ ಸಭೆಯಲ್ಲಿ (ಬ್ರಿಟನ್‌ನ ಲೋಕಸಭೆ) ಕಾರ್ಮಿಕರು, ಕುಶಲಕರ್ಮಿಗಳು ಮತ್ತಿತರ ಕಡಿಮೆ ಆದಾಯದವರು ಆಯ್ಕೆಯಾಗಿ ಅದರ ಹೊಣೆ ನಿರ್ವಹಿಸುವಾಗ ಆಗುವ ಆದಾಯದ ಕೊರತೆ ತುಂಬಿಸಲು ಸದಸ್ಯರಿಗೆ ವೇತನ ನಿಗದಿಯಾಗಬೇಕು.
5) ಎಲ್ಲ ಕ್ಷೇತ್ರಗಳ ಮತದಾರರ ಸಂಖ್ಯೆ ಸಮಾನವಾಗಿರುವಂತೆ ಕ್ಷೇತ್ರ ವಿಂಗಡಣೆ ಆಗಬೇಕು.
6) ಸಂಸತ್ ಸದಸ್ಯರು ಚುನಾವಣೆಯಲ್ಲಿ ಹಣ ಹಂಚುವುದು, ಬೆದರಿಕೆ ಒಡ್ಡುವುದರ ಮೂಲಕ ಗೆಲ್ಲುವುದನ್ನು ತಪ್ಪಿಸಲು, ಸದಸ್ಯರ ಭ್ರಷ್ಟಾಚಾರ ತಪ್ಪಿಸಲು ಪ್ರತಿ ವರ್ಷ ಚುನಾವಣೆಯಾಗಬೇಕು.

ಈ ಅಂಶಗಳನ್ನು ಗಮನಿಸಿದರೆ ಕಾರ್ಮಿಕರು ಮತ್ತಿತರ ದುಡಿಯುವ ಜನರು ಮತದಾನ ಮಾಡುವುದಷ್ಟೇ ಅಲ್ಲದೆ, ಅವರು ಸಂಸದರಾಗಿ ಆಯ್ಕೆಯಾಗುವುದಕ್ಕೆ ಅವಶ್ಯಕ ಪರಿಸ್ಥಿತಿ ನಿರ್ಮಿಸಲು ಅನಿವಾರ್ಯ ಅಂಶಗಳು ಎಂದು ತಿಳಿಯುತ್ತದೆ. ಅದೇ ಸಮಯದಲ್ಲಿ ಕೆಳ ಮಧ್ಯಮ ವರ್ಗದವರಿಗೂ ಇವು ಅಗತ್ಯವಾದ ಅಂಶಗಳು.

ಈ ಘೋಷಣೆಯ ಹೆಸರು ಚಾರ್ಟರ್, ಅದಕ್ಕಾಗಿ ಒತ್ತಾಯಿಸುವವರು ಚಾರ್ಟಿಸ್ಟರು ಎಂದು ಹೆಸರಾದರು. ಈ ಚಾರ್ಟರ್ ಅನ್ನು ಸಂಸತ್ ಮುಂದೆ ಮಂಡಿಸಲು ವ್ಯಾಪಕವಾಗಿ ಜನರ ನಡುವೆ ಚರ್ಚೆಗೆ ಒಯ್ಯಲಾಯಿತು. 1638 ಇಡೀ ವರ್ಷ ಮತ್ತು 39ರ ಆರಂಭದಲ್ಲಿ ಕಾರ್ಮಿಕರ ಮತ್ತಿತರ ದುಡಿಯುವ ಜನರ ಬೃಹತ್ ಸಭೆಗಳನ್ನು ಕೈಗಾರಿಕೆ, ಗಣಿ ಮತ್ತಿತರ ಪ್ರದೇಶಗಳಲ್ಲಿ, ನಗರಗಳಲ್ಲಿ ನಡೆಸಲಾಯಿತು. ಚಾರ್ಟಿಸ್ಟ್ ಚಳುವಳಿಯ ಹತ್ತಾರು ನಾಯಕರು ಇಡೀ ದೇಶಾದ್ಯಂತ ಗರ ಗರ ಸುತ್ತಿ ಕಾರ್ಮಿಕರಲ್ಲಿ ಅರಿವು ಮೂಡಿಸಿದರು. ಈ ಚಾರ್ಟರ್‌ಗೆ ಸಹಿಗಳನ್ನು ಸಂಗ್ರಹಿಸಿದರು. ಇಂತದೊಂದು ಸಭೆಯಲ್ಲಿ ಬೃಹತ್ ಸಭೆಯಲ್ಲಿ ಚಾರ್ಟಿಸ್ಟ್ ನಾಯಕರು ಮೂರು ಲಕ್ಷ ಜನ ಸೇರಿದ್ದರೆಂದು ಅಂದಾಜು ಮಾಡಿದರೆ, ಸರ್ಕಾರ ಕೇವಲ 15,000 ಜನ ಎಂದು, ಚಾರ್ಟಿಸ್ಟ್ ಚಳುವಳಿಯನ್ನು ದಿನನಿತ್ಯ ಕೀಳಾಗಿ ಬಿಂಬಿಸುತ್ತಿದ್ದ ಅಂದಿನ ಮುಖ್ಯ ಬಂಡವಾಳಶಾಹಿ ಪತ್ರಿಕೆ 50,000 ಎಂದು, ಚಾರ್ಟಿಸ್ಟ್ ಇತಿಹಾಸದ ಸಂಶೋಧಕರು 1,50,000 ಎಂದು ಅಂದಾಜಿಸಿದ್ದಾರೆ.

ಚಾರ್ಟಿಸ್ಟರು 60 ಲಕ್ಷ ಸಹಿ ಸಂಗ್ರಹದ ಅರ್ಜಿಯನ್ನು ಸಲ್ಲಿಸಿದರೆಂದು ತಿಳಿಸಿದರು. ಸರ್ಕಾರದ ಗುಮಾಸ್ತರು ಅದನ್ನು ಎಣಿಸಿದೆವು, ಅದು ಕೇವಲ 12.80 ಲಕ್ಷ ಎಂದು ಹೇಳಿದರು. ಈ ಗುಮಾಸ್ತರು ನಿಜವಾಗಿಯೂ ಅಷ್ಟೊಂದು ಸಹಿಗಳಲ್ಲಿ ಪ್ರತಿಯೊಂದನ್ನೂ ಲೆಕ್ಕ ಮಾಡಿದರೇ? ಎಂಬ ಸಂಶಯವನ್ನು ಇತಿಹಾಸಕಾರರು ವ್ಯಕ್ತಪಡಿಸಿದ್ದಾರೆ.

ಚಾರ್ಟಿಸ್ಟ್ ಸಭೆಗಳಲ್ಲಿ, ಸಹಿ ಹಾಕುವು ದರಲ್ಲಿ ಮಹಿಳೆಯರು ಕೇವಲ ಕಾರ್ಮಿಕ ಕುಟುಂಬದವರಾಗಿ ಮಾತ್ರ ಅಲ್ಲ, ಆಗ ಹೆಚ್ಚಲು ಆರಂಭವಾಗಿದ್ದ ಮಹಿಳಾ ಕಾರ್ಮಿಕರಾಗಿ ಭಾಗವಹಿಸಿದರು. ಈ ಸಭೆಗಳಲ್ಲಿ ಕೆಲವೆಡೆ ಮಹಿಳಾ ಚಾರ್ಟಿಸ್ಟ್ ನಾಯಕರೂ ಭಾಷಣ ಮಾಡಿದರು. ಅಂದಿನ ಕಾಲಘಟ್ಟದಲ್ಲಿ ಇದೊಂದು ಬಹಳ ವಿಶೇಷವಾಗಿತ್ತು. ಇದರ ಜೊತೆಗೆ ಹೊಸ ಬಡವರ ಕಾಯಿದೆ, ಹತ್ತು ಗಂಟೆ ಮಾತ್ರ ದುಡಿಮೆ ಮೊದಲಾದ ಕಾರ್ಮಿಕರ ಬದುಕಿನ ಒತ್ತಾಯಗಳೂ ಈ ಸಭೆಗಳಲ್ಲಿ ಚರ್ಚೆಗೆ ಬಂದವು. ಹೆಚ್ಚುವರಿ ಒತ್ತಾಯಗಳಾಗಿ ಸಹಿ ಸಂಗ್ರಹಕ್ಕೆ ಸೇರಿದವು.

ಚಾರ್ಟಿಸ್ಟ್ ಪತ್ರಿಕೆಗಳು ಮತ್ತು ಸಾಹಿತ್ಯ

ಚಾರ್ಟರ್‌ನ ಅಂಶಗಳು, ಚಾರ್ಟಿಸ್ಟ್ ವಿಚಾರಗಳು ಕಾರ್ಮಿಕರ ನಡುವೆ, ಇತರ ಜನರ ನಡುವೆ ಹರಡಲು ಗಣನೀಯವಾದ ಪ್ರಮಾಣದಲ್ಲಿ ಕಾರಣವಾಗಿದ್ದು ಚಾರ್ಟಿಸ್ಟ್ ಪತ್ರಿಕೆಗಳು. ನಾರ್ದರ್ನ್ ಸ್ಟಾರ್ ಎಂಬ ಪತ್ರಿಕೆ 1837ರಿಂದ 1852ರವರೆಗೆ ಚಾರ್ಟಿಸ್ಟ್ ಮುಖವಾಣಿ

ಪುಟ 11 ನೋಡಿ



ಧರ್ಮಸ್ಥಳದಲ್ಲಿನ ಭೂಕಬಳಿಕೆ, ಮೈಕ್ರೋ ಫೈನಾನ್ಸ್ ವ್ಯವಹಾರ ಮತ್ತು ಅಸಹಜ ಸಾವುಗಳು

ಸಮಗ್ರ ತನಿಖೆಗೆ ಎಡಪಕ್ಷಗಳ ಆಗ್ರಹ

ಅಸಹಜ ಸಾವುಗಳು, ಕೊಲೆಗಳು, ಅತ್ಯಾಚಾರಗಳು ಸಂಭವಿಸಿವೆಯೊ, ಅಲ್ಲಿ ಇದರ ಹಿಂದೆ ಭೂಕಬಳಿಕೆ ಮತ್ತು ಉಳಿಮೆದಾರರಿಂದ, ರೈತರಿಂದ, ಗೇಣಿದಾರರಿಂದ ಭೂಮಿಯನ್ನು ಕಿತ್ತುಕೊಳ್ಳುವ ಒಂದು ಜಾಲ ಕೆಲಸ ಮಾಡುತ್ತಿದೆ. ಅವೆರಡಕ್ಕೂ ಒಂದಕ್ಕೊಂದು ನಂಟಿದೆ. ಈಗ ದೂರದಾರ ಕೊಟ್ಟಿರುವ ಅಂಶಗಳ ಮೇಲೆ ಎಸ್ಐಟಿ ತನಿಖೆ ನಡೆಯತ್ತಿದೆ. ಅದರ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕೆ ಸಾಧ್ಯವಾಗಬೇಕು. ಅದಕ್ಕೆ ಹೊಸ ಟರ್ಮ್ಸ್ ಆಫ್ ರೆಫರೆನ್ಸ್ ಅನ್ನು ಸರ್ಕಾರ ಕೊಡಬೇಕು. ಭೂಕಬಳಿಕೆಯ ಎಲ್ಲ ಪ್ರಕರಣಗಳನ್ನು ತನಿಖೆಗೆ ಒಳಪಡಿಸಬೇಕು. ಆಗ ಈ ಅಸಹಜ ಸಾವುಗಳು, ಅತ್ಯಾಚಾರಗಳು ಮತ್ತು ಕೊಲೆಗಳ ಹಿಂದಿರುವ ನಿಜವಾದ ನಂಟು ಬಹಿರಂಗವಾಗುತ್ತದೆ ಎಂದು ಮೂರು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಪಕ್ಷಗಳು ಒತ್ತಾಯಿಸಿವೆ.

ಧರ್ಮಸ್ಥಳದಲ್ಲಿ ನಡೆದಿರುವ ವೇದವಲ್ಲಿ, ಪದ್ಮಲತಾ, ಆನೆಮಾವುತ ನಾರಾಯಣ, ಯಮುನಾ, ಸೌಜನ್ಯ ಮುಂತಾದ ಅಪಹರಣ, ಅತ್ಯಾಚಾರ, ಕೊಲೆ ಮತ್ತು ಅಸಹಜ ಸಾವುಗಳ ಸಮಗ್ರ ತನಿಖೆ ಮಾಡಬೇಕು ಹಾಗೂ ಧರ್ಮಸ್ಥಳದ ಪರಿಧಿಯಲ್ಲಿ ನಡೆದಿರುವ ಎಲ್ಲಾ ಭೂಕಬಳಿಕೆ ಮತ್ತು ಅಕ್ರಮವಾಗಿ ಒಕ್ಕಲೆಬ್ಬಿಸುವಿಕೆ ಪ್ರಕರಣಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹೆಸರಿನಲ್ಲಿ ನಡೆದಿರುವ ಕಿರುಕುಳ, ದೌರ್ಜನ್ಯ ಮತ್ತು ಆತ್ಮಹತ್ಯೆಗಳ ಸಮಗ್ರ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಪಕ್ಷಗಳು ಒತ್ತಾಯಿಸಿವೆ. ದೂರುದಾರನ ದೂರಿನ ನಂತರದಲ್ಲಿ ಆಗಿರುವ ಬೆಳವಣಿಗೆಗಳಲ್ಲಿ ಇಂದು ದೂರುದಾರನ ಮತ್ತು ಎಸ್ಐಟಿ ವಿರುದ್ಧವೇ ಆರೋಪ ಮಾಡುವಂತಹ ದಾಳಿಗಳನ್ನು ನಡೆಸುವ ಪ್ರಯತ್ನಗಳು ನಡೆಯುತ್ತಿವೆ. ಮುಖ್ಯವಾಗಿ ಬಿಜೆಪಿ ಮುಖಂಡರು ವ್ಯಾಪಕವಾಗಿ ಇಂತಹ ದಾಳಿ ಮಾಡುತ್ತಿದ್ದಾರೆ. ಅದೇ ಸಂದರ್ಭದಲ್ಲಿ ಸರ್ಕಾರದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎಸ್ಐಟಿ ರಚನೆ ಹಿಂದೆ ಒಂದು ಷಡ್ಯಂತ್ರವಿದೆ ಎನ್ನುವ ರೀತಿಯಲ್ಲಿ ಮಾತನಾಡಿರುವ ಅಂಶಗಳೂ ಇವೆ. ವೈಯಕ್ತಿಕ ಆರೋಪಗಳನ್ನೂ ಮಾಡಲಾಗುತ್ತಿದೆ. ಈ ತನಿಖೆಯ ಹಿಂದೆ ಎಡಪಂಥೀಯರಿದ್ದಾರೆ ಮತ್ತು ಕಮ್ಯೂನಿಸ್ಟರು ಇದಕ್ಕೆ ಕಾರಣರಾಗಿದ್ದಾರೆ ಎಂಬಂತೆ ಆರೋಪ ಮಾಡುತ್ತಿದ್ದಾರೆ. ಬಿಜೆಪಿಯ ಹಲವು ನಾಯಕರು, ಇದು ದೇವರು ಮತ್ತು ಧರ್ಮದ ಮೇಲಿನ ದಾಳಿ ಎಂದು ಬಿಂಬಿಸುವ ರೀತಿಯಲ್ಲಿ ಆರೋಪ ಮಾಡಿದ್ದಾರೆ. ಈ ಪ್ರಕರಣಗಳ ತನಿಖೆಗೆ ಎಸ್ಐಟಿ ರಚನೆ ಆಗಬೇಕು ಎಂದು ಈ ಹಿಂದೆಯೂ ಒತ್ತಾಯ ಮಾಡಿದವರಲ್ಲಿ ಈ ರಾಜ್ಯದ ಎಡಪಕ್ಷಗಳು, ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು, ನ್ಯಾಯಾಧೀಶರಿದ್ದಾರೆ. ಎಸ್ಐಟಿ ರಚನೆಯಾಗಬೇಕು ಎಂದು ಹಲವು ವಿಭಾಗದ ಜನರೂ ಒತ್ತಾಯ ಮಾಡಿದ್ದರು. ಆದರೆ, ಈಗ ದೂರುದಾರ ಕೊಟ್ಟಿರುವ ದೂರಿನ ಅಂಶಗಳ ಮೇಲೆ ಎಸ್ಐಟಿ ರಚನೆಯಾಗಿ ತನಿಖೆಯಾಗುತ್ತಿದೆ. ಪೂರ್ಣವಾಗಿ ತನಿಖೆಯಾಗಲು ಬಿಡಬೇಕು. ತನಿಖೆಯ ದಾರಿ ತಪ್ಪಿಸುವ ರೀತಿಯಲ್ಲಿ ಅದರಮೇಲೆ ಯಾವುದೇ ರೀತಿಯಲ್ಲಿ ದಬಾವಣೆ ಮಾಡುವುದಾಗಲೀ, ಒತ್ತಡ ಹಾಕುವುದನ್ನಾಗಲೀ ಯಾರೂ ಪ್ರಯತ್ನ ಮಾಡಬಾರದು ಎಂಬುದು ಎಡಪಕ್ಷಗಳ ಒತ್ತಾಯ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ತಪ್ಪಿತಸ್ಥರು ಯಾರೆಂದು ಇದುವರೆಗೂ ಗೊತ್ತಾಗಲಿಲ್ಲ

ಇದೇ ಸಂದರ್ಭದಲ್ಲಿ ಆರಂಭದಿಂದಲೂ ಧರ್ಮಸ್ಥಳದಲ್ಲಿ ನಡೆಯುತ್ತಿರುವ ಹಲವು ಪ್ರಕರಣಗಳನ್ನು ನಾವು ಗಮನಿಸಬೇಕಾಗಿದೆ. ಮುಖ್ಯವಾಗಿ, ಧರ್ಮಸ್ಥಳದ ಒಂದು ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದ ವೇದವಲ್ಲಿಯನ್ನು ಸುಟ್ಟು ಹತ್ಯೆ ಮಾಡಿದ ಪ್ರಕರಣ. ಈ ಪ್ರಕರಣದಲ್ಲಿ ತಪ್ಪಿತಸ್ಥರು ಯಾರು ಎಂದು ಇದುವರೆಗೂ ಗೊತ್ತಾಗಲಿಲ್ಲ. ಪದ್ಮಲತಾಳನ್ನು ಅಪಹರಣ ಮಾಡಿ, ಕೊಲೆ ಮಾಡಿ 58 ದಿನಗಳ ನಂತರದಲ್ಲಿ ಆಕೆಯ ಶವ ಸಿಕ್ಕಿದ ಪರಿಸ್ಥಿತಿಯಲ್ಲಿ ನೋಡಿದ್ದೇವೆ. ಈ ಪ್ರಕರಣದಲ್ಲಿಯೂ ಅಪರಾಧಿಗಳು ಯಾರು ಎಂಬುದು ಇದುವರೆಗೂ ಪತ್ತೆ ಆಗಲಿಲ್ಲ. ಆನೆ ಮಾವುತ ನಾರಾಯಣ ಮತ್ತು ಆತನ ತಂಗಿ ಯಮುನಾ ಇವರನ್ನು ಧರ್ಮಸ್ಥಳದ ಮಧ್ಯಭಾಗದಲ್ಲಿರುವ ಅವರ ಮನೆಯಲ್ಲಿ ಕಲ್ಲುಗಳನ್ನು ಹಾಕಿ, ಅವರ ತಲೆ ಜಜ್ಜಿ ಕೊಂದಿರುವ ಪ್ರಕರಣದಲ್ಲೂ ತಪ್ಪಿತಸ್ಥರು ಯಾರು ಎಂಬುದು ಗೊತ್ತಾಗಿಲ್ಲ. ಸೌಜನ್ಯ ಪ್ರಕರಣದಲ್ಲೂ ಸಿಬಿಐ ಕೋರ್ಟ್ ಕೊಟ್ಟಿರುವ ಆದೇಶದ ಪ್ರಕಾರ ತನಿಖೆ ನಡೆಸಿ ತಪ್ಪಿತಸ್ಥರು ಯಾರು ಎಂಬುದನ್ನು ಪತ್ತೆಹಚ್ಚಬೇಕಿದೆ. ಹೀಗೆ ಹಲವು ಪ್ರಕರಣಗಳಲ್ಲಿ ಅಪಹರಣ, ಹತ್ಯಾಚಾರ, ಹತ್ಯೆ ಮಾಡಿದವರು ಯಾರು ಎಂಬುದು ತಿಳಿದಿಲ್ಲ. ಹಾಗಾಗಿ, ಸರ್ಕಾರ ಈ ಪ್ರಕರಣಗಗಳನ್ನು ನಿರ್ದಿಷ್ಟವಾಗಿ ತನಿಖೆ ಮಾಡಬೇಕು.

ಇವುಗಳ ಹಿಂದೆ ಭೂಮಿಯ ಕಬಳಿಕೆಯ ಪ್ರಶ್ನೆ ಇದೆ

ಮೂಲಭೂತವಾಗಿ ಎಲ್ಲ ಪ್ರಕರಣಗಳ ಹಿಂದೆ ಧರ್ಮಸ್ಥಳದ ಸುತ್ತಮುತ್ತ ಇರುವ ಭೂಮಿಯ ಕಬಳಿಕೆಯ ಪ್ರಶ್ನೆ ಇದೆ. ಇಡೀ ಧರ್ಮಸ್ಥಳದ ಸುತ್ತಮುತ್ತ ಹಲವು ದಶಕಗಳ ಕಾಲದಿಂದ ಭೂಕಬಳಿಕೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಅಲ್ಲಿನ ಹಿತಾಸಕ್ತಿಗಳು ಪಾಳೆಗಾರಿ ಯಜಮಾನಿಕೆ ನಡೆಸುತ್ತಿದ್ದಾರೆ. ಅವರ ಸುತ್ತ ಇರುವ ಪಟಾಲಂ ಅಲ್ಲಿನ ಭೂಮಿಯನ್ನು ಸಂಪೂರ್ಣವಾಗಿ ಕಬಳಿಸಲು ಏನು ಬೇಕಾದರೂ ಮಾಡುತ್ತಾರೆ ಎನ್ನುವ ಅಂಶಗಳು ಇಲ್ಲಿ ಕಾಣುತ್ತವೆ. ಧರ್ಮಸ್ಥಳದ ಸುತ್ತಮುತ್ತ ಹಲವು ದಶಕಗಳ ಚರಿತ್ರೆಯಲ್ಲಿ ನಮಗಿದು ತಿಳಿಯುತ್ತದೆ. ಅಸಹಜ ಸಾವುಗಳು, ಕೊಲೆಗಳು, ಅತ್ಯಾಚಾರಗಳು ಸಂಭವಿಸಿವೆಯೊ, ಅಲ್ಲಿ ಇದರ ಹಿಂದೆ ಭೂಕಬಳಿಕೆ ಮತ್ತು ಉಳಿಮೆದಾರರಿಂದ, ರೈತರಿಂದ, ಗೇಣಿದಾರರಿಂದ ಭೂಮಿಯನ್ನು ಕಿತ್ತುಕೊಳ್ಳುವ ಒಂದು ಜಾಲ ಕೆಲಸ ಮಾಡುತ್ತಿದೆ. ಅವೆರಡಕ್ಕೂ ಒಂದಕ್ಕೊಂದು ನಂಟಿದೆ. ಈಗ ದೂರದಾರ ಕೊಟ್ಟಿರುವ ಅಂಶಗಳ ಮೇಲೆ ಎಸ್ಐಟಿ ತನಿಖೆ ನಡೆಯತ್ತಿದೆ. ಅದರ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕೆ ಸಾಧ್ಯವಾಗಬೇಕು. ಅದಕ್ಕೆ ಹೊಸ ಟರ್ಮ್ಸ್ ಆಫ್ ರೆಫರೆನ್ಸ್ ಅನ್ನು ಸರ್ಕಾರ ಕೊಡಬೇಕು. ಭೂಕಬಳಿಕೆಯ ಎಲ್ಲ ಪ್ರಕರಣಗಳನ್ನು ತನಿಖೆಗೆ ಒಳಪಡಿಸಬೇಕು. ಆಗ ಈ ಅಸಹಜ ಸಾವುಗಳು, ಅತ್ಯಾಚಾರಗಳು ಮತ್ತು ಕೊಲೆಗಳ ಹಿಂದಿರುವ ನಿಜವಾದ ನಂಟು ಬಹಿರಂಗವಾಗುತ್ತದೆ. ಆ ಕಾರಣಕ್ಕಾಗಿ ಇಲ್ಲಿ ಪ್ರಸ್ತಾಪಿಸಿರುವ ಎಲ್ಲ ಪ್ರಕರಣಗಳನ್ನು ಪುನರ್ ತನಿಖೆ ಮಾಡಬೇಕು.

ಮೈಕ್ರೋ ಫೈನಾನ್ಸ್ ಹೆಸರಿನಲ್ಲಿ ಕಿರುಕುಳ

ಸಂಪತ್ತು ಮತ್ತು ಭೂಮಿಯನ್ನು ಕಬಳಿಸಬೇಕೆನ್ನುವ ಒಂದು ದೊಡ್ಡ ಜಾಲ ಕೆಲಸ ಮಾಡುತ್ತಿದೆ. ಅದು ಇಂದು ಇಡೀ ರಾಜ್ಯಕ್ಕೆ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ಅದು ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹೆಸರಿನಲ್ಲಿ, ಮೈಕ್ರೋ ಫೈನಾನ್ಸ್ ಹೆಸರಲ್ಲಿ ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದ ಹಣಕಾಸಿನ ವ್ಯವಹಾರವನ್ನು ಅಕ್ರಮ ವಿಧಾನಗಳ ಮೂಲಕ ಮಾಡುತ್ತಿದೆ. ಈ ಮೈಕ್ರೋ ಫೈನಾನ್ಸ್ ವ್ಯವಹಾರದ ಕಾರಣಕ್ಕಾಗಿ ವಿಪರೀತ ಬಡ್ಡಿ ಮತ್ತು ವಿಪರೀತ ಕಿರುಕುಳ, ದೌರ್ಜನ್ಯ ನಡೆಸುತ್ತಿದ್ದಾರೆ. ಸಾಲ ಪಡೆದವರು ಸಾಲ ತಿರಿಸಲಾಗದೆ, ಬಡ್ಡಿ ಚಕ್ರಬಡ್ಡಿಗಳಿಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ರಾಜ್ಯಾದ್ಯಂತ ಸಂಭವಿಸುತ್ತಿವೆ. ಈ ಎಲ್ಲ ಪ್ರಕರಣಗಳನ್ನು ತನಿಖೆಗೆ ಒಳಪಡಿಸಬೇಕು.

ದೇವರ ಮೇಲಿನ ಜನರ ನಂಬಿಕೆಯ ದುರುಪಯೋಗ

ಧರ್ಮಸ್ಥಳದಲ್ಲಿ ನಡೆದಿರುವ ಅಸಹಜ ಸಾವುಗಳು, ಕೊಲೆಗಳು, ಅತ್ಯಾಚಾರಗಳು ಮತ್ತು ಈ ಭೂಕಬಳಿಕೆಯ ಪ್ರಕರಣಗಳು ಮತ್ತು ಮೈಕ್ರೋ ಫೈನಾನ್ಸ್ ಪ್ರಶ್ನೆಗಳು ಇವೆಲ್ಲ ಪ್ರಕರಣಗಳಿಗೆ ಸಂಬಂಧಿಸಿ ರಾಜ್ಯ ಸರ್ಕಾರ ಸಮಗ್ರವಾದ ತನಿಖೆಗೆ ಒಳಪಡಿಸಬೇಕು ಎಂದು ಎಡ ಪಕ್ಷಗಳು ಒತ್ತಾಯ ಮಾಡಿದ್ದವು. ಈ ಸಂದರ್ಭದಲ್ಲಿ, ನಿಜವಾದ ಇಂತಹ ಸಮಸ್ಯೆಗಳ ಬಗ್ಗೆ ತನಿಖೆ ಮಾಡಬೇಕೆಂದು ಎಡಪಕ್ಷಗಳು ಸೇರಿದಂತೆ ಸಾಮಾನ್ಯ ಜನರು ಒತ್ತಾಯ ಮಾಡುತ್ತಿರುವಾಗಲೇ ಅದಕ್ಕೆ ಕೋಮುವಾದದ ಬಣ್ಣ ಕಟ್ಟಲು ಬಿಜೆಪಿಯ ಹಲವು ಮುಖಂಡರು ನೇರನೇರ ಪ್ರಯತ್ನಪಡುತ್ತಿರುವುದು ತೀರ ಖಂಡನೀಯ. ಬಿಜೆಪಿಯವರು ಜನರ ಸಮಸ್ಯೆಗಳ ಬಗ್ಗೆ ಇದುವರೆಗೂ ಬಾಯೇ ಬಿಡಲಿಲ್ಲ. ನಿಜಕ್ಕೂ ಕೂಡ ಧರ್ಮಸ್ಥಳದ ಮೇಲೆ ಜನರಿಗೆ ನಂಬಿಕೆ ಇದೆ. ಅಲ್ಲಿನ ದೇವರು ಮತ್ತು ಧರ್ಮದ ಬಗ್ಗೆ ಆ ನಂಬಿಕೆಯನ್ನು ದುರ್ಬಲಗೊಳಿಸುವ ಕೆಲಸಗಳಾಗಿವೆ. ಜನರ ನಂಬಿಕೆಗೆ ದಕ್ಕೆ ಆಗಬಾರದೆಂಬ ನಿಟ್ಟಿನಲ್ಲಿ ಇವೆಲ್ಲವೂ ತನಿಖೆಯಾಗಿ ಸತ್ಯ ಹೊರಬರಬೇಕು ಎಂದು ಎಡಪಕ್ಷಗಳು ಅದಕ್ಕಾಗಿ ಹೋರಾಟ ಮಾಡುತ್ತಿವೆ. ಇಂದು ಯಾರು ಈ ಪ್ರಕರಣಗಳನ್ನು ಮುಚ್ಚಿಹಾಕಬೇಕು ಎಂದು ಪ್ರಯತ್ನ ಪಡುತ್ತಿದ್ದಾರೆಯೋ, ಅವರು ದೇವರ ಮೇಲಿನ ಜನರ ನಂಬಿಕೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ನಂಬಿಕೆಯನ್ನು ಹಣದ ವ್ಯವಹಾರವಾಗಿ ಮಾರ್ಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅದನ್ನು ಎಡಪಕ್ಷಗಳು ಖಂಡಿಸುತ್ತವೆ. ಹೀಗಾಗಿ ಈ ಒತ್ತಾಯವು ದೇವರು ಧರ್ಮದ ಪ್ರಶ್ನೆಗೆ ಸಂಬಂಧ ಇಲ್ಲದೆ ಇರುವ ವಿಚಾರ. ಅತ್ಯಂತ ಅಕ್ಷಮ್ಯವಾದ ಈ ಎಲ್ಲಾ ಪ್ರಕರಣಗಳು ಸಮಗ್ರ ತನಿಖೆಗೆ ಒಳಪಡಬೇಕು ಎಂದು ಈ ಮೂರು ಎಡ ಪಕ್ಷಗಳು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತವೆ. ಈಗಿರುವ ಪ್ರಣವ್ ಮೊಹಂತಿ ಅವರ ಎಸ್ಐಟಿಗೆ ಹೊಸ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟು ಇದನ್ನು ತನಿಖೆಗೆ ಒಳಪಡಿಸಬೇಕು.

ಸ್ವತಂತ್ರವಾದ ವಿಶೇಷ ತನಿಖಾ ತಂಡವನ್ನು ರಚನೆ ಮಾಡಿ,

ಈ ಅಂಶಗಳನ್ನು ಸೇರಿಸಿದರೆ ಇದರ ವ್ಯಾಪ್ತಿ ದೊಡ್ಡದಾಗುತ್ತೆ, ಇದಕ್ಕೆ ಸೇರಿಸಲಾಗದು ಎಂಬ ಪ್ರಶ್ನೆ ರಾಜ್ಯ ಸರ್ಕಾರಕ್ಕಿದ್ದರೆ. ಒಂದು ಸ್ವತಂತ್ರವಾದ ವಿಶೇಷ ತನಿಖಾ ತಂಡವನ್ನು ರಚನೆ ಮಾಡಿ, ಎಲ್ಲಾ ಪ್ರಕರಣಗಳನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸ ಬೇಕು ಎಂದು ಒತ್ತಾಯ ಮಾಡುತ್ತೇವೆ. ನಾವು ಧರ್ಮಸ್ಥಳದ ಊರಿನ ವಿರುದ್ಧ ಅಲ್ಲ, ಮಂಜುನಾಥ ಸ್ವಾಮಿಯ ವಿರುದ್ಧವೂ ಅಲ್ಲ, ಅಥವಾ ಅಲ್ಲಿರುವ ಕಾವಂದರ ವಿರುದ್ಧವೂ ಅಲ್ಲ, ನಾವು ಕೇಳುತ್ತಿರುವುದು ನ್ಯಾಯದ ಪರವಾದ ಪ್ರಶ್ನೆ ಕೇಳುತ್ತಿದ್ದೇವೆ. ಎಸ್ಐಟಿ ತನಿಖೆಯಾಗಿ ಅದಕ್ಕೆ ನಿಜವಾದ ಆರೋಪಿಗಳು ಯಾರು ಎನ್ನುವುದು ಪತ್ತೆ ಆದಮೇಲೆ, ಅವರಿಗೆ ಶಿಕ್ಷೆಯಾಗಬೇಕು ಎಂದು ಬಯಸುತ್ತೇವೆ. ನ್ಯಾಯ ಕೇಳುತ್ತಿದ್ದೇವೆ.

ಉಗ್ರಪ್ಪ ಸಮಿತಿ ವರದಿ ಸರ್ಕಾರದ ಬಳಿ ಇದೆ

ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಉಗ್ರಪ್ಪ ಸಮಿತಿ ರಚನೆ ಆಗಿತ್ತು. ಆ ಸಂದರ್ಭದಲ್ಲಿ ಅವರು ಬೆಳತಂಗಡಿ ತಾಲೂಕಿನ ವ್ಯಾಪ್ತಿಯಲ್ಲಿ ನಡೆದಿದ್ದ ಅಸಹಜ ಸಾವುಗಳ ಬಗ್ಗೆ ವರದಿಯೊಂದನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದು ಈಗಾಗಲೇ ಸಿದ್ದರಾಮಯ್ಯನವರ ಸರ್ಕಾರದ ಮುಂದೆ ಇದೆ. ಅದರ ಬಗ್ಗೆ ಯಾವುದೇ ಚರ್ಚೆಯನ್ನೂ ಮಾಡುತ್ತಿಲ್ಲ. ಆ ವರದಿನಲ್ಲಿ ಸ್ಪಷ್ಟವಾಗಿ ಬೆಳ್ತಂಗಡಿ ತಾಲೂಕಿನ ಸುತ್ತಮುತ್ತ ನಡೆದಿರುವ ಅಸಹಜ ಸಾವುಗಳ ಪಟ್ಟಿಯೇ ಇದೆ. ಅವೆಲ್ಲವನ್ನು ಸೇರಿಸಿಕೊಂಡು ನಿಜವಾದ ಅಪರಾಧಿಗಳು ಯಾರು ಎಂಬುದು ಪತ್ತೆ ಆಗಬೇಕು. ಎಲ್ಲಾ ಪ್ರಶ್ನೆಗಳು ಇತ್ಯರ್ಥವಾಗಿ ತಪ್ಪಿತಸ್ಥರು ಪತ್ತೆಯಾದರೆ, ಖಂಡಿತವಾಗಿಯೂ ಇಂದು ಜನರಲ್ಲಿರುವ ಗೊಂದಲಗಳಿಗೆ ಉತ್ತರ ಸಿಗುತ್ತವೆ.

ಆಗಸ್ಟ್ 21ರಂದು ಬೆಂಗಳೂರಿನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಕೆ.ಪ್ರಕಾಶ್, ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಪಿಐ–ಎಂಎಲ್ ರಾಜ್ಯ ಸಮಿತಿ ಸದಸ್ಯೆ ಲೇಖಾ ಇದ್ದರು. ●

ಇದು 2017ರಲ್ಲಿ ಪ್ರಕಟವಾದ 'ಕ್ಯಾಸ್ಟ್ರೋ ಕತೆ' ಪುಸ್ತಕಕ್ಕೆ ಡಾ.ಕೆ.ಪ್ರಕಾಶ್ ಅವರು ಬರೆದ ದೀರ್ಘ ಮುನ್ನುಡಿ. 'ಕ್ಯಾಸ್ಟ್ರೋ ಕತೆ' ಪತ್ರಕರ್ತರೂ ಮತ್ತು ಜಾಗತಿಕ ಪರ್ಯಾಯಗಳ ಚಿಂತಕರೂ ಆದ ಇಗ್ನೇಷಿಯೊ ರಮೋನೆಟ್ ಇವರು ನಡೆಸಿದ "ಫಿಡೆಲ್ ಜೊತೆ ನೂರು ಗಂಟೆಗಳು" ಸಂದರ್ಶನದ ಪುಸ್ತಕ ಆವೃತ್ತಿಯ ("ಮೈ ಲೈಫ್: ಫಿಡೆಲ್ ಕ್ಯಾಸ್ಟ್ರೋ") ಕನ್ನಡ ಸಂಗ್ರಹಾನುವಾದ. ಫಿಡೆಲ್ ಮತ್ತು ಈ ಪುಸ್ತಕ ಎರಡನ್ನೂ ಪರಿಚಯಿಸುವ, ಅದರ ಮಹತ್ವ ಸಾರುವ ಈ ಬರಹ ಸಾರ್ವಕಾಲಿಕ ಪ್ರಸ್ತುತತೆ ಉಳ್ಳದ್ದು. ಫಿಡೆಲ್ ಕ್ಯಾಸ್ಟ್ರೋ ಅವರ ಶತಮಾನೋತ್ಸವದ ಸಂದರ್ಭದಲ್ಲಂತೂ ಜರೂರಿನ ಓದು. ಜತೆಗೆ ಈ ಪುಸ್ತಕದ ಓದು ಸಹ ಇಂದಿನ ಜರೂರಿನ ಓದು.

ಫಿಡೆಲ್ ನಿನ್ನ ಹೆಸರದು ಸಿಡಿಲ್ ಸದ್ದು ಸಾಮ್ರಾಜ್ಯಕ್ಕೆ...

ಡಾ. ಕೆ.ಪ್ರಕಾಶ್

"ಲೆನಿನ್ ನಿನ್ನ ಹೆಸರದು ಸಿಡಿಲ್ ಸದ್ದು ದೊರೆಗಿವಿಗೆ" ಎಂದು ಲೆನಿನ್ ಕುರಿತು ಕುವೆಂಪು ಬರೆದರು. ಈಗಾಗಿದ್ದರೆ "ಫಿಡೆಲ್ ನಿನ್ನ ಹೆಸರದು ಸಿಡಿಲ್ ಸದ್ದು ಸಾಮ್ರಾಜ್ಯಕ್ಕೆ" ಎಂದು ಬರೆಯದೆ ಇರುತ್ತಿರಲಿಲ್ಲ. ರಷ್ಯನ್ ಕ್ರಾಂತಿಯ ಆಳ ಅಗಲ ವಿಸ್ತಾರಗಳನ್ನು ಕ್ಯೂಬನ್ ಕ್ರಾಂತಿ ಹೊಂದಿಲ್ಲದಿದ್ದರೇನಂತೆ? ಜಗತ್ತಿನ ಕ್ರಾಂತಿಕಾರಿ ಶಕ್ತಿಗಳಿಗೆ ನಿಸ್ಸಂದೇಹವಾಗಿ ಫಿಡೆಲ್ ಮತ್ತು ಕ್ಯೂಬಾ ಒಂದು ಅಂತಃಚೇತನವಲ್ಲ ಎನ್ನಲಾದೀತೆ?

ಫಿಡೆಲ್ ಅಲೆಜಾಂಡ್ರೋ ಕ್ಯಾಸ್ಟ್ರೋ ರೂಜ಼್ (**Fidel Alejandro Castro Ruz**) ಸಕ್ಕರೆ ಬಟ್ಟಲಿನ ಪುಟ್ಟ ಕ್ಯೂಬಾವನ್ನು ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಿದ್ದು ಮಾತ್ರವಲ್ಲ, ಏನೆಲ್ಲಾ ಕಷ್ಟಗಳು ಮತ್ತು ಕಿರುಕುಳಗಳ ನಡುವೆಯೂ ಒಂದು ಪರ್ಯಾಯ ಸಾಮಾಜಿಕ ಮಾದರಿ ಸಾಧ್ಯವಿದೆ ಎಂಬುದನ್ನು ನಿರೂಪಿಸಿ ತೋರಿಸಿದರು. ಒಂದು ಪುಟ್ಟ ರಾಷ್ಟ್ರ ಜಗತ್ತಿನ ಬೃಹತ್ ಶಕ್ತಿಯ ಎದುರು ಎದೆಯೆತ್ತಿ ನಿಂತ ಕಥೆಯೇ ಸೋಜಿಗ. ಇದರ ಹಿಂದಿನ ಬಂಡೆಗಲ್ಲು ಫಿಡೆಲ್. ಹಾಗೆಯೇ ಅಲ್ಲಿನ ಎಚ್ಚೆತ್ತ ಕ್ರಾಂತಿಕಾರಿ ಜನತೆ.

ಫಿಡೆಲ್ ಕುರಿತು ಮತ್ತು ಕ್ಯೂಬಾದ ಸಮಾಜವಾದಿ ವ್ಯವಸ್ಥೆ ಕುರಿತು ಕ್ರಾಂತಿಕಾರಿ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಎಷ್ಟೊಂದು ದಂತಕತೆಗಳು, ರೋಮಾಂಚನಕಾರಿ ಸಂಗತಿಗಳು ಮತ್ತು ಹೆಮ್ಮೆಪಡುವ ವಿಚಾರಗಳು ಅಸ್ತಿತ್ವದಲ್ಲಿವೆಯೋ, ಅಷ್ಟೇ ಪ್ರಮಾಣದಲ್ಲಿ ಅಮೇರಿಕನ್ ಸಾಮ್ರಾಜ್ಯ ಹರಿಬಿಟ್ಟಿರುವ ಸುಳ್ಳುಗಳು, ಅಪಪ್ರಚಾರಗಳು ಮತ್ತು ವಿಕೃತ ವಿಚಾರಗಳು ಚಾಲ್ತಿಯಲ್ಲಿವೆ. ಫಿಡೆಲ್ ಒಬ್ಬ ಸರ್ವಾಧಿಕಾರಿ, ಜನತೆಯ ಪೀಡಕ, ಕ್ರೂರಿ ಹೀಗೆ, ಹೇಗೆಲ್ಲಾ ನಕಾರಾತ್ಮಕವಾಗಿ ಬಿಂಬಿಸಲು ಸಾಧ್ಯವೋ ಹಾಗೆಲ್ಲಾ ಬಿಂಬಿಸಲಾಗಿದೆ. ಈ ಮಿಥ್ಯೆಗಳನ್ನು, ಅಪಪ್ರಚಾರಗಳನ್ನು ಕಿತ್ತು ಬಿಸಾಡಲು ಮತ್ತು ಹೊರಜಗತ್ತಿಗೆ ಫಿಡೆಲ್‌ರನ್ನು ಮತ್ತು ಕ್ಯೂಬಾವನ್ನು ಸರಿಯಾಗಿ ಕಟ್ಟಿಕೊಡುವ ಪ್ರಯತ್ನಗಳನ್ನು ಸಾಕಷ್ಟು ಮಾಡಲಾಗಿದೆ. ಆದರೆ ಅದನ್ನು ಸಮಗ್ರವಾಗಿ ಮಾಡಿದ್ದೆಂದರೆ ಪತ್ರಕರ್ತರೂ ಮತ್ತು ಜಾಗತಿಕ ಪರ್ಯಾಯಗಳ ಚಿಂತಕರೂ ಆದ ಇಗ್ನೇಷಿಯೊ ರಮೋನೆಟ್. ಇವರು ನಡೆಸಿದ "ಫಿಡೆಲ್ ಜೊತೆ ನೂರು ಗಂಟೆಗಳು" (A Hundred Hours with Fidel) ಫಿಡೆಲ್ ಜೊತೆಗಿನ ಅತ್ಯಂತ ವಿಸ್ತೃತವಾದ ಸಂದರ್ಶನವಾಗಿದೆ.

ಶಸ್ತ್ರಾಸ್ತ್ರಗಳಿಗಿಂತ ಚಿಂತನೆಗಳು ಹೆಚ್ಚು ಮುಖ್ಯ

ಒಮ್ಮೆ 2002ರಲ್ಲಿ ಹವಾನಾ ಬುಕ್‌ಫೇರ್‌ನಲ್ಲಿ ಭಾಷಣ ಮಾಡಲು ರಮೊನೆಟ್ ಹೋಗಿದ್ದಾಗ, ಅದೇ ಕಾರ್ಯಕ್ರಮಕ್ಕೆ ಬಂದಿದ್ದ ಅರ್ಥಶಾಸ್ತ್ರದಲ್ಲಿ ನೊಬೆಲ್ ಪುರಸ್ಕೃತರಾದ ಜೋಸೆಫ್ ಸ್ಟಿಗ್ಲಿಟ್ಸ್'ರನ್ನು ಫಿಡೆಲ್ ಇವರಿಗೆ ಪರಿಚಯಿಸಿದರು. ಪೋರ್ಟೋ ಅಲೆಗ್ರೆಯಲ್ಲಿ ನಡೆದ ಮೊದಲ ವಿಶ್ವ ಸಾಮಾಜಿಕ ವೇದಿಕೆಯ ಸಮ್ಮೇಳನವನ್ನು ಆಗಷ್ಟೇ ಮುಗಿಸಿಕೊಂಡು ರಮೊನೆಟ್ ಇಲ್ಲಿಗೆ ಬಂದಿದ್ದರು. ಫಿಡೆಲ್ ನವ–ಉದಾರವಾದಿ ಜಾಗತೀಕರಣದ ಬಗ್ಗೆ ಮತ್ತು ವಿಶ್ವ ಸಾಮಾಜಿಕ ವೇದಿಕೆಯ ಸಮ್ಮೇಳನದಲ್ಲಿ ನಡೆದ ವಿಚಾರಗಳ ಬಗ್ಗೆ ಚರ್ಚಿಸಲು ಶುರುಮಾಡಿದರು. ಸಾಮ್ರಾಜ್ಯವಾದಕ್ಕೆ, ಜಾಗತೀಕರಣಕ್ಕೆ ಪರ್ಯಾಯವಾಗಿ ನಡೆಯುತ್ತಿರುವ ಈ ಕಾರ್ಯಕ್ರಮಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು: "ಹೊಸ ತಲೆಮಾರಿನ ಬಂಡಾಯಗಾರರು ಹೊರಬರುತ್ತಿದ್ದಾರೆ, ಅವರಲ್ಲಿ ಸಾಕಷ್ಟು ಜನರು ಅಮೇರಿಕನ್ನರಿದ್ದಾರೆ, ಅವರು ಪ್ರತಿಭಟನೆಯ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಮತ್ತು ಜಗತ್ತಿನ ದೊರೆಗಳು ಕುಸಿಯುವಂತೆ ಮಾಡುತ್ತಿದ್ದಾರೆ. ಶಸ್ತ್ರಾಸ್ತ್ರಗಳಿಗಿಂತ ಚಿಂತನೆಗಳು ಹೆಚ್ಚು ಮುಖ್ಯ. ಹಿಂಸೆಯನ್ನು ಹೊರತುಪಡಿಸಿ, ಜಾಗತೀಕರಣವನ್ನು ಸೋಲಿಸಲು ಎಲ್ಲಾ ವಾದಗಳನ್ನು ಬಳಸಬೇಕು" ಎಂದರು. ಈ ರೀತಿ ಮಾತನಾಡುವಾಗ ಫಿಡೆಲ್, ಜಾಗತೀಕರಣ, ಅದರ ಪರಿಣಾಮಗಳು, ಅದನ್ನು ಎದುರಿಸಲು ಇರುವ ಮಾರ್ಗೋಪಾಯಗಳ ಬಗ್ಗೆ ಸುಶ್ರಾವ್ಯ ಸಂಗೀತದ ಹಾಗೆ ಅತ್ಯಂತ ಸಹಜವಾಗಿ ವಿವರಿಸತೊಡಗಿದರು. ಇದು ಬಹುಶಃ ಸಮಕಾಲೀನ ಜಗತ್ತಿನ ಬೇರಾವ ನಾಯಕರಿಗೂ ಇರದಿದ್ದ ಗುಣ ಎಂದರೆ ತಪ್ಪಾಗಲಿಕ್ಕಿಲ್ಲ.



ಅಮೇರಿಕ ಹರಡಿರುವ ಅಪಪ್ರಚಾರಗಳು

ಫಿಡೆಲ್‌ರ ಈ ಅಸಾಧಾರಣ ಪ್ರತಿಭೆ, ಯಾವುದೇ ವಿಚಾರದ ಬಗ್ಗೆ ಸ್ಪಷ್ಟತೆ, ಬದಲಾವಣೆ ಮಾಡಲು ಬೇಕಾದ ಬದ್ಧತೆ, ಮುಪ್ಪಾದರೂ ಕಡಿಮೆಯಾಗದ ಉತ್ಸಾಹ, ಮಾದರಿಯಾದ ಬದುಕು, ಇವಾವುವೂ ಜಗತ್ತಿಗೆ ಸಮಗ್ರವಾಗಿ ಗೊತ್ತಿಲ್ಲವಲ್ಲ. ಅಮೇರಿಕ ಹರಡಿರುವ ಅಪಪ್ರಚಾರಗಳು ಮತ್ತು ಸುಳ್ಳುಗಳಿಂದ ದೊಡ್ಡ ಸಂಖ್ಯೆಯ ಜನ ಫಿಡೆಲ್ ಬಗ್ಗೆ ತಪ್ಪು ಅಭಿಪ್ರಾಯ ಹೊಂದಿರುವರಲ್ಲಾ ಎಂಬ ಪ್ರಶ್ನೆಗಳು ರಮೊನೆಟ್ ಅವರಿಗೆ ಕಾಡತೊಡಗಿದವು. ಆಗ ರಮೊನೆಟ್ ಅವರಿಗೆ ಹೊಳೆದದ್ದೇ, ಫಿಡೆಲ್‌ರನ್ನು ಸಮಗ್ರವಾಗಿ ಚಿತ್ರಿಸಬೇಕೆಂಬ ಯೋಚನೆ. ಅದನ್ನೇ ಫಿಡೆಲ್ ಮುಂದೆ ಪ್ರಸ್ತಾಪಿಸಿದರು. ಇದನ್ನು ಕೇಳಿ ವಿನೋದವೆಂಬಂತೆ ನಕ್ಕು, ಅದೇ ಕ್ಷಣದಲ್ಲಿ ಗಂಭೀರವಾಗಿ, "ನನ್ನೊಂದಿಗೆ ಮಾತನಾಡಿ ನಿಜವಾಗಿಯೂ ನಿನ್ನ ಸಮಯವನ್ನು ಹಾಳು ಮಾಡಿಕೊಳ್ಳಲು ಬಯಸುವೆಯಾ? ಇನ್ನೂ ಹೆಚ್ಚು ಮುಖ್ಯವಾದದ್ದನ್ನು ಮಾಡಲು ನಿನಗೇನೂ ಇಲ್ಲವೇನು?" ಎಂದು ರಮೊನೆಟ್ ಅವರನ್ನು ಕೇಳಿದರು. ಜಗತ್ತಿನ ಅತ್ಯಂತ ಶ್ರೇಷ್ಠ ಮತ್ತು ಹೆಸರಾಂತ ಪತ್ರಕರ್ತರು ಫಿಡೆಲ್ ಜೊತೆ ಮಾತನಾಡುವ ಅವಕಾಶಕ್ಕಾಗಿ ವರ್ಷಗಳ ಕಾಲ ಕಾದಿರುವುದನ್ನು ಕಂಡಿದ್ದ ರಮೊನೆಟ್, ಒಬ್ಬ ವೃತ್ತಿಪರ ಪತ್ರಕರ್ತನಿಗೆ ಇದಕ್ಕಿಂತಲೂ ಮುಖ್ಯವಾದದ್ದು ಇನ್ನೇನಿರಲು ಸಾಧ್ಯ ಎಂಬ ಪ್ರಶ್ನೆಯನ್ನು ಸ್ವತಃ ಹಾಕಿಕೊಂಡರು. ಈ ರೀತಿ ಚರ್ಚೆಗಳಲ್ಲಿ ರೂಪುಗೊಂಡ ಒಮ್ಮತದ ಭಾಗವಾಗಿ ರಮೊನೆಟ್ ಮತ್ತು ಫಿಡೆಲ್ ನಡುವಿನ ದೀರ್ಘ ಸಂದರ್ಶನಗಳು ಸಂಭವಿಸಿದವು. ಹಾಗೆ ನೋಡಿದರೆ 50 ವರ್ಷಗಳಲ್ಲಿ, ತಮ್ಮ ದೀರ್ಘ ಭಾಷಣಗಳಿಗೆ ಹೆಸರುವಾಸಿಯಾದ ಫಿಡೆಲ್‌ರ ಇಂತಹ ಕೇವಲ ನಾಲ್ಕು ಸಂಭಾಷಣೆಗಳು ಮಾತ್ರ ಪ್ರಕಟವಾಗಿವೆ. ಗಿಯಾನ್ನಿ ಮಿನಾ'ರೊಂದಿಗೆ ಎರಡು, ಪ್ರೈ ಬ್ರೆಟ್ಟೊ'ರೊಂದಿಗೆ ಒಂದು ಮತ್ತು ನಿಕರಾಗುವಾದ ಮಾಜಿ ಸಚಿವ ಮತ್ತು ಲೇಖಕ ಟೋಮಸ್ ಬೋರ್ಜ್'ರೊಂದಿಗೆ ಒಂದು ಪ್ರಕಟವಾದ ಸಂಭಾಷಣೆಗಳಾಗಿವೆ. ರಮೊನೆಟ್‌ರೊಂದಿಗಿನ ಸಂಭಾಷಣೆ, ಫಿಡೆಲ್ ಹೇಳುವಂತೆ, ಐದನೆಯ ಮತ್ತು ಬಹುಶಃ ಅತ್ಯಂತ ದೀರ್ಘ ಮತ್ತು ಸಮಗ್ರವಾದ ಸಂಭಾಷಣೆಯಾಗಿದೆ. 2003 ಜನವರಿಯಿಂದ ಪ್ರಾರಂಭಗೊಂಡು 2005 ಡಿಸೆಂಬರ್‌ವರೆಗೆ ಮೂರು ವರ್ಷಗಳ ಕಾಲ ಹಲವು ಸುತ್ತುಗಳಲ್ಲಿ "ಫಿಡೆಲ್ ಜೊತೆ ನೂರು ಗಂಟೆಗಳು" ಸಂದರ್ಶನ ನಡೆಯಿತು. ರೆಮೊನೆಟ್ ಸಂದರ್ಶನಕ್ಕಾಗಿ ಅಪಾರವಾದ ಅಭ್ಯಾಸ ಮತ್ತು ತಯಾರಿಯನ್ನು ಮಾಡಿಕೊಂಡಿದ್ದರು. ಇದರ ಫಲವಾಗಿ "ಮೈ ಲೈಫ್: ಫಿಡೆಲ್ ಕ್ಯಾಸ್ಟ್ರೋ" ಎಂಬ ಕೃತಿ ಹೊರ ಬಂದಿತು.

ಈ ಪುಸ್ತಕದಲ್ಲಿ, 1930ರಿಂದ 2005 ರವರೆಗೆ ಫಿಡೆಲ್ ತಮ್ಮ ಜೀವನವನ್ನು ವಿವರಿಸಿದ್ದಾರೆ. ತಮ್ಮ ಪೋಷಕರು, ಆರಂಭಿಕ ಪ್ರಭಾವಗಳು, ಕ್ರಾಂತಿಯ ಆರಂಭದ ವಿವರಗಳು, ಚೆ ಜೊತೆ ಇವರ ಸಂಬಂಧ, ಬೇ ಆಫ್ ಫಿಗ್ಸ್, ಕ್ಷಿಪಣಿ ಬಿಕ್ಕಟ್ಟು, ಜಿಮ್ಮಿ ಕಾರ್ಟರ್ ವರ್ಷಗಳು, ಕ್ಯೂಬನ್ ವಲಸೆ ಬಿಕ್ಕಟ್ಟು, ಹೀಗೆ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಜೊತೆಗೆ, ಕ್ಯೂಬಾದಲ್ಲಿ ಮಾನವ ಹಕ್ಕುಗಳ ಪ್ರಶ್ನೆ, ಪತ್ರಿಕಾ ಸ್ವಾತಂತ್ರ್ಯದ ಪ್ರಶ್ನೆ, ಸಲಿಂಗ ಕಾಮ, ಮರಣ ದಂಡನೆ, ಇತರೆ ನಾಯಕರ ಬಗ್ಗೆ ಮುಕ್ತ ಅಭಿಪ್ರಾಯಗಳು, ಹೀಗೆ ವಿವಾದಾತ್ಮಕವೆಂದು ಪರಿಗಣಿಸುವ ಎಲ್ಲಾ ವಿಚಾರಗಳ ಬಗ್ಗೆಯೂ ಮನಬಿಚ್ಚಿ ಮಾತನಾಡಿದ್ದಾರೆ. ಫಿಡೆಲ್‌ರ ಸಮಗ್ರ ಚಿತ್ರಣವನ್ನು ಈ ಕೃತಿ ಒದಗಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಈ ಸಾಹಸವನ್ನು ರಮೊನೆಟ್ ಅತ್ಯಂತ ಸಮರ್ಥವಾಗಿ ಮಾಡಿದ್ದಾರೆ.

ತಮ್ಮ 90ನೆಯ ವರ್ಷದಲ್ಲಿ ವಯೋಮಾನ ಸಹಜ ಸಾವನ್ನು ಕಂಡ ಫಿಡೆಲ್ ಕ್ಯಾಸ್ಟ್ರೋ ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾದ ಮತ್ತು ದಂತಕಥೆಯಾದ ಜಗತ್ತಿನ ಕೆಲವೇ ಕೆಲವು ಕ್ರಾಂತಿಕಾರಿಗಳಲ್ಲಿ ಒಬ್ಬರು. ಎರಡನೇ ಮಹಾಯುದ್ಧದ ನಂತರ ಜಗತ್ತಿನೆಲ್ಲೆಡೆ ಅಲೆ ಅಲೆಯಾಗಿ ಎದ್ದು ಬಂದ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿನ ರಣೋತ್ಸಾಹದಲ್ಲಿ ಹೋರಾಟ ನಡೆಸಿದ ನೆಲ್ಸನ್ ಮಂಡೇಲ, ಹೋ ಚಿ ಮಿನ್ಹ್, ಪ್ಯಾಟ್ರಿಸ್ ಲುಮುಂಬಾ, ಚೆ ಗೆವಾರ ಮುಂತಾದ ದಂತಕತೆಗಳಾದ ಬಂಡಾಯಗಾರರ ಸಾಲಿನಲ್ಲಿ ಫಿಡೆಲ್ ನಿಂತಿದ್ದಾರೆ.


ಉಜ್ವಲ ಭವಿಷ್ಯದ ಕನಸುಗಳೊಂದಿಗೆ, ಅನ್ಯಾಯಕ್ಕೆ ಸಮಾಧಿಯನ್ನು ಕಟ್ಟಬೇಕೆಂಬ ಛಲದೊಂದಿಗೆ, ಬಡತನ, ಅಸಮಾನತೆ,

ಪುಟ 15 ನೋಡಿ

ಭಾರತ ರಷ್ಯಾ ವ್ಯಾಪಾರ: ಅಮೇರಿಕದ ಗೋಸುಂಬೆತನ

ಜಿ.ಎಸ್.ಮಣಿ

ಭಾರತವು ರಷ್ಯಾದೊಡನೆ ದೊಡ್ಡ ವ್ಯಾಪಾರ ಸಂಬಂಧ ಹೊಂದಿದ್ದು, ಅದು ರಷ್ಯಾದಿಂದ ತೈಲ ಮತ್ತು ಶಸ್ತ್ರಾಸ್ತ್ರಗಳ ಅಪಾರ ಪ್ರಮಾಣದ ಆಮದು ಮಾಡಿಕೊಳ್ಳುತ್ತಿದೆ ಎಂದು ಟೀಕಿಸಿರುವ ಅಮೆರಿಕ ಭಾರತದ ಮೇಲೆ ಶೇ. 25ರ ಸುಂಕ ಹೇರಿದೆ. ಎರಡೇ ದಿನಗಳಲ್ಲಿ ಮತ್ತೆ ಶೇ. 25ರ ಹೆಚ್ಚಿನ ಸುಂಕವನ್ನು ಟ್ರಂಪ್‌ನ ಅಮೆರಿಕ ಹೇರಿದೆ. ರಷ್ಯದೊಂದಿಗಿನ ಭಾರತದ ವ್ಯಾಪಾರ ಸಂಬಂಧ ನಿಜವಾದರೂ, ಅಮೆರಿಕದ ಈ ಸುಂಕ ಹೇರಿಕೆಯ ಕಾರ್ಯ ತರ್ಕಹೀನವಾದದ್ದು. ಯಾಕೆಂದರೆ, ಭಾರತವು ರಷ್ಯಾದಿಂದ ಆಮದು ಮಾಡಿಕೊಂಡಂತೆ, ಯುರೋಪಿನ ದೇಶಗಳೂ ಸಹ ಆಮದು ಮಾಡಿಕೊಂಡಿವೆ. ರಷ್ಯಾದ ಉಕ್ರೇನ್ ಯುದ್ದದ ಪ್ರಸ್ತಾಪ ಮಾಡಿರುವ ಟ್ರಂಪ್, ಅಲ್ಲಿನ ಸಾವುಗಳ ಜವಾಬ್ದಾರಿಯಲ್ಲಿ ಭಾರತ ಪಾಲುಹೊಂದಿದೆ ಎಂದಿದ್ದಾರೆ. ಈ ಮಾತುಗಳು ತಾರ್ಕಿಕವಾಗಿ



ಚಾರ್ಟ್ 1 ಭಾರತದ ಒಟ್ಟು ತೈಲ ಆಮದಿನಲ್ಲಿ ರಶ್ಯಾದಿಂದ ಆಮದಿನ ಪಾಲು

ಸರಿಯಲ್ಲ ಎಂಬುದನ್ನು ಮನಗಾಣಬೇಕಾಗಿದೆ.

ಸುಂಕ ವಿಧಿಸುವುದು ಅತಾರ್ಕಿಕ

ರಷ್ಯಾದಿಂದ ಭಾರತ ಮತ್ತು ಚೀನಾ ತೈಲ ಆಮದು ಮಾಡಿಕೊಂಡಿರುವುದು ನಿಜ. ಆದರೆ ಭಾರತದ ತೈಲ ಆಮದಿಗಿಂತ ಯುರೋಪಿನ ದೇಶಗಳು ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಂಡಿವೆ. ಭಾರತ ರಷ್ಯಾದಿಂದ ತೈಲ ಆಮದನ್ನು ಇತ್ತೀಚೆಗೆ ಹೆಚ್ಚು ಮಾಡುತ್ತಿರುವುದು ನಿಜವಾದರೂ, ಯುರೋಪಿನ ಹಲವು ದೇಶಗಳು ಅದರಲ್ಲೂ, ಮುಖ್ಯವಾಗಿ ನೆದರ್‌ಲ್ಯಾಂಡ್ಸ್ ದೇಶ ದೊಡ್ಡ ಪ್ರಮಾಣದಲ್ಲಿ ತೈಲವನ್ನು ಭಾರತದಿಂದ ಆಮದು ಮಾಡಿಕೊಳ್ಳುತ್ತಿದೆ. ಇಷ್ಟೇ ಅಲ್ಲ. ಸ್ವತಃ ಅಮೆರಿಕವು ರಷ್ಯಾದಿಂದ ರಸಗೊಬ್ಬರ ಸೇರಿದಂತೆ ಹಲವು ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಪರೋಕ್ಷವಾಗಿ ಆಮದು ಮಾಡಿಕೊಳ್ಳುವ ದೇಶಗಳನ್ನು ಬಿಟ್ಟು ನೇರವಾಗಿ ತೈಲ ಆಮದು ಮಾಡಿಕೊಳ್ಳುವ ದೇಶವನ್ನು ಟೀಕಿಸುವುದು ಮತ್ತು ಆ ಕಾರಣಕ್ಕಾಗಿ ಹೆಚ್ಚಿನ ಸುಂಕ ವಿಧಿಸುವುದು ಅತಾರ್ಕಿಕವಾದದ್ದು.

ಟೀಕಿಸುವ ನೈತಿಕತೆಯಿಲ್ಲ


ಉಕ್ರೇನ್ ಯುದ್ದದ ಸಾವುಗಳಿಗೆ ಇದನ್ನು ತಳುಕು ಹಾಕಿ ಟೀಕಿಸುವುದು ಇನ್ನೊಂದು ರೀತಿಯ ಗೋಸುಂಬೆತನ. ಯಾಕೆಂದರೆ, ಗಾಜಾದ ಮೇಲೆ ಯುದ್ದಮಾಡುತ್ತಾ ನರಮೇಧ ನಡೆಸುತ್ತಿರುವ ಇಸ್ರೇಲ್‌ಗೆ ಅಮೆರಿಕ ಅಪಾರ ಪ್ರಮಾಣದ ನೆರವು ನೀಡುತ್ತಿದೆ. ಹೀಗೆ ಮಾಡುವ ಅಮೆರಿಕಾಕ್ಕೆ ಭಾರತವನ್ನು ಟೀಕಿಸುವ ನೈತಿಕತೆ ಎಲ್ಲಿಯದು?

ಭಾರತ ಕಳೆದ ಹಲವು ದಶಕಗಳಿಂದ ರಷ್ಯಾ ಜೊತೆಗೆ ವ್ಯಾಪಾರ ಸಂಬಂಧ ಬೆಳೆಸಿಕೊಂಡು ಬಂದಿದೆ. ಉಕ್ರೇನ್ ಯುದ್ಧ ಪ್ರಾರಂಭವಾದ ನಂತರ ತೈಲ ಆಮದು ಮಾಡಿಕೊಳ್ಳುತ್ತಿರುವುದೂ ನಿಜ. ಅಮೆರಿಕ ಜಿ 7 ದೇಶಗಳು ಮತ್ತು ನ್ಯಾಟೊ ದೇಶಗಳು ರಷ್ಯಾದ ತೈಲ ಆಮದಿನ ಮೇಲೆ ಬೆಲೆ ಮಿತಿ ಹೇರಿ, ರಷ್ಯಾದ ಆದಾಯ ಹಿಂಡುವ ಕ್ರಮಗಳನ್ನು ಕೈಗೊಂಡ ನಂತರವೇ ಭಾರತವು ರಷ್ಯಾದಿಂದ ಕಡಿತ ಮಾಡಿದ ಬೆಲೆಯಲ್ಲಿ ತೈಲ ಆಮದು ಮಾಡಿಕೊಳ್ಳುವುದು ಸಾಧ್ಯವಾಯಿತು.ಉಕ್ರೇನ್ ಯುದ್ಧ ಪ್ರಾರಂಭವಾದ ನಂತರದ ಅವಧಿಯಲ್ಲಿ ರಷ್ಯಾದಿಂದ ನಮ್ಮ ತೈಲ ಆಮದು (2022ರಲ್ಲಿ ಶೇ. 13.1 ಇದ್ದಿದ್ದು 2024ರಲ್ಲಿ ಶೇ. 35.3ಕ್ಕೆ ಏರಿ, 2025ರಲ್ಲಿ ಶೇ. 31.5ಕ್ಕೆ ಇಳಿಕೆಯಾಗಿದೆ. ವಿದೇಶ ವ್ಯವಹಾರಗಳ ಮಂತ್ರಾಲಯ ಹೇಳುವುದು, ನಮ್ಮ ತೈಲ ಖರೀದಿ ಜಾಗತಿಕ ಮಾರುಕಟ್ಟೆ ಬೆಲೆಗಳು ಮತ್ತು ರಾಷ್ಟ್ರೀಯ ಇಂಧನ ಭದ್ರತೆ ಕಾಪಾಡಿಕೊಳ್ಳುವ ಉದ್ದೇಶಕ್ಕೆ ಅನುಗುಣವಾಗಿರುತ್ತದೆ. ಜಾಗತಿಕವಾಗಿ ಇಂಧನ ಸಮತೋಲನವಿರಲಿ ಎಂಬ ಕಾರಣಕ್ಕೆ ಅಮೆರಿಕ ಇದನ್ನು ಕ್ರಿಯಾತ್ಮಕವಾಗಿ ಪ್ರೋತ್ಸಾಹಿಸಿತ್ತು ಎಂಬುದನ್ನು.



ನಿರ್ಬಂಧದ ಸಮಯದಲ್ಲಿ ನಮ್ಮ ಆಮದಿನ ಹೆಚ್ಚಳವು ರಷ್ಯಾದ ಆದಾಯ ಹೆಚ್ಚಿಸಿತ್ತು ಎಂಬುದು ನಿಜವೇ ಆದರೂ, ಚೀನಾ ಮತ್ತು ಯುರೋಪಿನ ದೇಶಗಳು ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲದ ಆಮದು ಹೆಚ್ಚಿಸಿದ್ದವು ಎಂಬುದು ಸಹ ವಾಸ್ತವ.

2022–25ರ ಅವಧಿಯಲ್ಲಿ ರಷ್ಯಾದಿಂದ (ಅದರ ಜತೆ ಪರೋಕ್ಷ ಯುದ್ಧದಲ್ಲಿ ತೊಡಗಿರುವ) ಯುರೋಪಿನ ದೇಶಗಳ ತೈಲ ಮತ್ತು ಅನಿಲಗಳ ಆಮದು 2.1 ಲಕ್ಷ ಯುರೋಗಳಷ್ಟಿದ್ದು, ಅದು ಭಾರತದ ಆಮದಿಗಿಂತ (1,30 ಲಕ್ಷ ಯುರೋ) ಶೇ. 60ರಷ್ಟು ಹೆಚ್ಚಿತ್ತು. ಚಾರ್ಟ್ 2 ಈ ಆಮದಿನ ಅಂಕಿಗಳನ್ನು ತೋರಿಸುತ್ತದೆ. ಚೀನಾದ ಆಮದು ತೈಲ ಮತ್ತು ಅನಿಲ (2.27 ಲಕ್ಷ ಯುರೋ) ಶೇ. 77ರಷ್ಟು ಹೆಚ್ಚಿದೆ. ಆಮದು ಚೀನಾ, ಯುರೋಪಿನ ದೇಶಗಳು ಅನುಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿ ಈ ಚಾರ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಾರತ ಮೂರನೇ ಸ್ಥಾನದಲ್ಲಿದೆ. ಭಾರತಕ್ಕೆ ಮಾತ್ರ ಈ ತಾರತಮ್ಯ ಧೋರಣೆ?!



ಚಾರ್ಟ್ 2 ರಷ್ಯಾದಿಂದ ಚೀನಾ, ಯುರೋ ಕೂಟ ಮತ್ತು ಭಾರತಗಳ ಇಂಧನ ಆಮದಿನ ಮೌಲ್ಯ

ವಿದೇಶ ವ್ಯವಹಾರಗಳ ಮಂತ್ರಾಲಯ ಆಗಸ್ಟ್ 4ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅಮೆರಿಕ ಮತ್ತು ಯುರೋಪಿನ ದೇಶಗಳು ರಸಗೊಬ್ಬರ ಮತ್ತು ಇತರ ಹಲವು ಸರಕುಗಳನ್ನು ರಷ್ಯಾದಿಂದ ಆಮದು ಮಾಡಿಕೊಂಡಿರುವುದನ್ನು ಉಲ್ಲೇಖಿಸಿ ಅಮೆರಿಕದ ದ್ವಿಮುಖ ನೀತಿಯನ್ನು ಬಯಲಿಗೆಳೆದಿದೆ. ಟ್ರಂಪ್ ಮಹಾಶಯ ಈ ವಿಷಯದಲ್ಲಿ ತನಗೇನೂ ಗೊತ್ತಿಲ್ಲವೆಂದು ಮಾತು ಹಾರಿಸಿದ್ದಾನೆ!

ಟ್ರಂಪ್ ಮಾಡಿದ ಇನ್ನೊಂದು ಆರೋಪವೆಂದರೆ, ಭಾರತ ರಷ್ಯಾದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳುತ್ತಿದೆ ಎಂಬುದು (ಚಾರ್ಟ್ 3 ನೋಡಿ). ಟ್ರಂಪ್‌ನ ಮಾತು ನಿಜವಾದರೂ, ರಷ್ಯಾದಿಂದ ಭಾರತದ ಶಸ್ತ್ರಾಸ್ತ್ರ ಆಮದು ಇತ್ತೀಚೆಗೆ ಕಡಿಮೆ ಆಗುತ್ತಿದೆ ಮತ್ತು ಯುರೋಪಿನ ಫ್ರಾನ್ಸ್ ಇತ್ಯಾದಿ ದೇಶಗಳಿಂದ ಹೆಚ್ಚಾಗುತ್ತಿದೆ.

(ಆಧಾರ: ದಿ ಹಿಂದೂ ಪತ್ರಿಕೆಯ ದಿನಾಂಕ 12 ಆಗಸ್ಟ್ 2025ರ ಸಂಚಿಕೆಯಲ್ಲಿ ಪ್ರಕಟವಾದ ಡಾಟಾ ಪಾಯಿಂಟ್ ಲೇಖನ)



ಚಾರ್ಟ್ 3 ವಿವಿಧ ದೇಶಗಳಿಂದ 2022ರಿಂದ ಭಾರತದ ಶಸ್ತ್ರಾಸ್ತ್ರ ಆಮದಿನ ಪ್ರಮಾಣ



ಚಾರ್ಟ್ 4 ವಿವಿಧ ದೇಶಗಳಿಂದ 1949ರಿಂದ ಇಸ್ರೇಲಿನ ಶಸ್ತ್ರಾಸ್ತ್ರ ಆಮದಿನ ಪ್ರಮಾಣ

ಟ್ರಂಪ್‌ನ ಇನ್ನೊಂದು ಆಪಾದನೆಯೆಂದರೆ, ರಷ್ಯಾದ ಯುದ್ದ ಯಂತ್ರಗಳು ಉಕ್ರೇನಿಯನ್ನರನ್ನು ಹೇಗೆ ಕಗ್ಗೊಲೆ ಮಾಡುತ್ತಿದೆ ಎಂಬುದನ್ನೂ ನೋಡದೆ ಭಾರತ ವ್ಯವಹಾರ ಮಾಡುತ್ತಿದೆ ಎಂಬುದು. ಈ ಮಾತುಗಳನ್ನು ಆಡುವ ಟ್ರಂಪ್‌ನ ಅಮೆರಿಕದ ಮಾನವೀಯತೆ ಎಂತಹದ್ದು ಎಂಬುದು ಚಾರ್ಟ್ 4 ಅನ್ನು ನೋಡಿದರೆ ಗೊತ್ತಾಗುತ್ತದೆ. ಪ್ಯಾಲೆಸ್ತಿನಿಯನ್ನರ ನರಮೇಧದಲ್ಲಿ ತೊಡಗಿರುವ ಇಸ್ರೇಲ್‌ಗೆ 1949ರಿಂದ ಶೇ. 80ಕ್ಕಿಂತ ಹೆಚ್ಚು ಯುದ್ಧಸಾಮಗ್ರಿ ಪೂರೈಸುತ್ತಿರುವುದು ಅಮೆರಿಕ. ಇತ್ತೀಚಿನ, ಅಂದರೆ 2022ರಿಂದ, ಈ ಪೂರೈಕೆ ಶೇ. 100ಕ್ಕೆ ಏರಿದೆ!! ಹಾಗಾದರೆ ಇದೇ ತರ್ಕ ಬಳಸಿ ಯುಎಸ್ ಗಾಜಾದಲ್ಲಿ ನಡೆಯುತ್ತಿರುವ ನರಮೇಧದ ಅಪರಾಧಿ ಎಂದು ಟ್ರಂಪ್ ಒಪ್ಪುತ್ತಾರಾ? ●

ಆರೋಗ್ಯ ಕ್ಷೇತ್ರದಲ್ಲಿ ಸದ್ದಿಲ್ಲದ ತುರ್ತು ಪರಿಸ್ಥಿತಿ



ನಮ್ಮ ದೇಶದ ಜನರ ಆರೋಗ್ಯ–ಶುಶ್ರೂಷೆಗಳನ್ನು ಸದ್ದಿಲ್ಲದೇ ಅಪಹರಿಸಲಾಗಿದೆ. ವಿದೇಶಿ ಕೈಗಳು/ಶಕ್ತಿಗಳು ಇದನ್ನು ಮಾಡಿವೆ. ಈಗ ಆಸ್ಪತ್ರೆಗಳು ಶುಶ್ರೂಷೆ ಮಾಡಲು ಇವೆ ಹೊರತು ಹಣದ ಸುಗ್ಗಿ ಮಾಡಲು ಅಲ್ಲ ಎಂಬ ಜನಸಾಮಾನ್ಯರ ನಂಬಿಕೆಗೆ ಕುತ್ತು ಬಂದಿದೆ. ದೊಡ್ಡ ದೊಡ್ಡ ರೋಗನಿರ್ಣಯ ಮಾಡುವ ಉಪಕರಣಗಳ ಹಿಂದೆ ಖಾಸಗಿಯವರ ಪ್ರವೇಶ ಮತ್ತು ಆರೋಗ್ಯ ವ್ಯವಸ್ಥೆಯ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ನಿಶ್ಶಬ್ದವಾಗಿ ನಡೆಯುತ್ತಿದೆ. ಇದು ಮುಖ ಪುಟಗಳ ಸುದ್ದಿ, ದೊಡ್ಡ ಶಬ್ದ, ಪಟಾಕಿಗಳ ಸದ್ದು, ಇತ್ಯಾದಿ ಇಲ್ಲದೆ ನಡೆಯುತ್ತಿದೆ.

ಸಂಗ್ರಹ: **ಜಿ.ಎಸ್.ಮಣಿ**

ಆರೋಗ್ಯ ಕ್ಷೇತ್ರದಲ್ಲಿ ಶೇ. 100ರಷ್ಟು ವಿದೇಶಿ ಹೂಡಿಕೆಗೆ ಈಗಾಗಲೇ ಅನುಮತಿಸಲಾಗಿದೆ. ಗರಿಷ್ಠ ಹೂಡಿಕೆಯ ಮಿತಿಯಿಲ್ಲ. ಮೇಲುಸ್ತುವಾರಿಯ ತಂಟೆಯಿಲ್ಲ. ಸ್ಥಳೀಕರಣದ ನಿಯಮಗಳಿಲ್ಲ. ಹೀಗೆ ಪೂರ್ತಿ ತಡೆರಹಿತ. ರೋಗಿಗಳ ಶುಶ್ರೂಷೆಯ ಅತ್ಯಂತ ಮಾನವೀಯ ಭಾವನೆಗಳ, ಮೌಲ್ಯಗಳ, ಸೇವಾ ತತ್ಪರತೆ ಮತ್ತು ತ್ಯಾಗಗಳ ಕ್ಷೇತ್ರವು, ಜಾಗತಿಕ ವ್ಯವಹಾರಗಳ ಹರಹಿನಡಿ ಮಾರುಕಟ್ಟೆಯಾಗಿದೆ!! ಆ ನಂತರದಲ್ಲಿ ವಿದೇಶಿ ಹೂಡಿಕೆ ಹರಿದು ಬರಲಿಲ್ಲ. ಅದು ಪ್ರವಾಹವಾಗಿ ಭೋರ್ಗರೆದು ಬಂತು. ಆಸ್ಪತ್ರೆಗಳ ಹಸ್ತಾಂತರ ದಿನಗಳ ಆಟವಾಯ್ತು. ಪರಿಣಾಮವಾಗಿ, ಕಳೆದ ಕೆಲವು ವರ್ಷಗಳಲ್ಲಿ ಭಾರತದ ಹಲವು ಆಸ್ಪತ್ರೆಗಳ ಸರಪಣಿಗಳು, ಜಾಗತಿಕ ಖಾಸಗಿ ಬಂಡವಾಳ ಕಂಪನಿಗಳು, ಸಾರ್ವಭೌಮ ನಿಧಿಗಳು, ಅಥವಾ ವಿದೇಶಿ ನಿವೃತ್ತಿ ವೇತನದ ನಿಧಿಗಳ ಪೂರ್ತಿ ಅಥವಾ ಭಾಗಶಃ ಪಾಲಾದವು. ಕೆಳಗಿನ ಪಟ್ಟಿ ನೋಡಿ:

ಈಗ ಭಾರತದ ಆಸ್ಪತ್ರೆಗಳಿಲ್ಲ!! ಇವು ಈಗ ಜಾಗತಿಕ ಹಣಕಾಸು ಸೊತ್ತುಗಳು. ಇವುಗಳ ವಾರ್ಷಿಕ ವರದಿ ನ್ಯೂಯಾರ್ಕ್, ಟೊರೋಂಟೊ, ಸಿಂಗಾಪುರ, ಅಭೂಧಾಭಿ ಗಳಲ್ಲಿ ತಯಾರಾಗಿ ಅಲ್ಲಿ ಚರ್ಚಿಸಲ್ಪಡುತ್ತವೆ. ಒಮ್ಮೆ ರೋಗಿಗಳಿಗೆ ಶುಶ್ರೂಷೆಯ ತಂಪೆರೆವ ಮಂದಿರಗಳಾಗಿದ್ದ ಈ ಆಸ್ಪತ್ರೆಗಳು ಇಂದು ಹಣ ಗುಡ್ಡೆ ಹಾಕುವ ಕೇಂದ್ರಗಳಾಗಿವೆ. ಯಾರ ಹಿತಗಳನ್ನು ಇವು ಪೊರೆಯುತ್ತಿವೆ?

ಇಂತಹ ಬದಲಾವಣೆಗಳಿಂದ ಭಾರತದ ಜನಸಾಮನ್ಯರ ಮೇಲೆ ಎಂತಹ ಪರಿಣಾಮ ಆಗುತ್ತದೆ?

* ಆಸ್ಪತ್ರೆಯ ಖರ್ಚುಗಳು ಗಗನಕ್ಕೆರಿವೆ– ಉತ್ತಮ ಸೌಲಭ್ಯಗಳ ದೊರೆಯುವಿಕೆಯಿಂದ ಅಲ್ಲ, ಕಂಪನಿಗಳ ಬೋರ್ಡ್ ರೂಂಗಳಲ್ಲಿ ನಿಗದಿಮಾಡುವ ಲಾಭಗಳ ಗುರಿಗಳಿಂದ
* ಡಾಕ್ಟರುಗಳು ಮಾರಾಟದ ಏಜೆಂಟುಗಳಾಗುವ ಪರಿಸ್ಥಿತಿಯಿಂದ. ರೋಗನಿರ್ಣಯ ಮತ್ತು ಚಿಕಿತ್ಸೆ ವಿಧಾನಗಳ ಮೂಲಕ ಲಾಭ ಪೇರಿಸುವ ಕೆಲಸ ಮಾಡಿದರೆ ಅದಕ್ಕೆ ತಕ್ಕಂತೆ ಅವರಿಗೆ ಪ್ರೋತ್ಸಾಹಧನ ಸಿಗುತ್ತದೆ.
* ಬಡವರು, ಗ್ರಾಮೀಣರು ಮತ್ತು ಸಂಕೀರ್ಣ ರೋಗ ಬಾಧಿತರು ಅಪಾರ ಲಾಭ ಕೊಡುವ ಸಾಧ್ಯತೆ ಇಲ್ಲದಿದ್ದರೆ ಅವರಿಗೆ ಹೊರ ಬಾಗಿಲು ತೋರಿಸಲಾಗುತ್ತದೆ.
* ಔಷದಿಗಳ ನೈತಿಕತೆಯನ್ನು ತ್ರೈಮಾಸಿಕ ಲಾಭ, ಹೂಡಿಕೆದಾರರ ಆಸಕ್ತಿ, ಮತ್ತು ಅಕ್ಚೂರಿಯಲ್ (ವಿಮೆಗೆ ಸಂಬಂಧಿಸಿದ) ಲೆಕ್ಕಾಚಾರಗಳು ತುಳಿದು ಹಾಕುತ್ತವೆ.
* ನಿರ್ಣಾಯಕ ಕ್ಷೇತ್ರಗಳಲ್ಲಿ ಏಕಸ್ವಾಮ್ಯ ಸಾಧಿಸುವ ಕರಾಮತ್ತುಗಳು ನಡೆಯುತ್ತಿವೆ. ರೋಗನಿರ್ಣಯ, ಫಾರ್ಮಸಿ, ವಿಮೆ ಮತ್ತು ಆಸ್ಪತ್ರೆ ಶುಶ್ರೂಷೆ ಎಲ್ಲವನ್ನೂ ಹತೋಟಿಗೆ ಪಡೆವ ಪ್ರವೃತ್ತಿ ಬೆಳೆಯುತ್ತಿದೆ.

ದತ್ತಾಂಶದ ಚಿನ್ನದ ಗಣಿ

ಇವೆಲ್ಲವುಗಳ ಹಿಂದೆ ಹೊಸದೊಂದು ಹಪಾಹಪಿ ತಲೆಯೆತ್ತಿದೆ. ಅಂಗಾಂಗ, ಭೂಮಿ ಇತ್ಯಾದಿಗಳಿಗಲ್ಲ. ದತ್ತಾಂಶಗಳಿಗೆ. ಜನರ ದೇಹ ಅವರ ಚಿನ್ನದ ಗಣಿ. ಅವರ ವ್ಯಾಪಾರ ಮಾದರಿ. ಆಸ್ಪತ್ರೆಯ ಪ್ರತಿ ಬೇಟಿ ಅದು ರಕ್ತ ಪರೀಕ್ಷೆಗಿರಲಿ, ಎಂಆರ್‌ಐ ಸ್ಕ್ಯಾನ್ ಇರಲಿ, ಐಸಿಯು ಚಿಕಿತ್ಸೆ ಇತ್ಯಾದಿ ಎಲ್ಲವೂ ದತ್ತಾಂಶ ರೂಪಪಡೆದು ಹಣಕ್ಕೆ ಪರಿವರ್ತನೆ ಆಗುತ್ತದೆ. ರೋಗಿಗಳ ಈ ದಾಖಲೆಗಳು ದತ್ತಾಂಶವಾಗಿ ವಿದೇಶಿ ತರಬೇತಿಗೆ ಮತ್ತು ಕೃತ್ರಿಮ ಬುದ್ಧಿಮತ್ತೆಯ ವಿಶ್ಲೇಷಣೆಗೆ ಆಹಾರವಾಗಿ ಅಲ್ಲಿನ ಆರೋಗ್ಯ ರಕ್ಷಣೆ ಮಾದರಿ ವಿಮೆಗೆ ಬೇಕಾದ ದತ್ತಾಂಶ ಇತ್ಯಾದಿ ರೂಪ ಪಡೆದು ಕಾಂಚಾಣವಾಗಿ ಕುಣಿಯುತ್ತದೆ. ರೋಗಿಗಳ ಒಪ್ಪಿಗೆ ಕೇಳುವುದು ಅಪರೂಪ. ರೋಗಿಗಳ ದತ್ತಾಂಶ ಸಾರ್ವಭೌಮವಲ್ಲದ ಮತ್ತು ನಿಯಂತ್ರಣ ಇಲ್ಲವೇ ಇಲ್ಲ ಎಂಬ ಸ್ಥಿತಿಯ ಭಾರತದ ರೋಗಿಗಳ ದತಾಂಶ ಅಭಿವ್ರದ್ಧಿ ಹೊಂದಿದ ದೇಶಗಳ ಆರೋಗ್ಯ ವ್ಯವಸ್ಥೆಗೆ ಭದ್ರ ಬುನಾದಿ. ನಮ್ಮಂತಹ ದೇಶಗಳ ಜನ ಪ್ರಯೋಗದ ಇಲಿಗಳಂತೆ!!

ಕ್ರಮ ಸಂಖ್ಯೆ	ಆಸ್ಪತ್ರೆಗಳು	ಈಗ ಇವರ ಸ್ವಾಧೀನದಲ್ಲಿ/ ಹತೋಟಿಯಲ್ಲಿ
1	ಮಣಿಪಾಲ ಆಸ್ಪತ್ರೆಗಳು	ಟೆಮಶೇಕ್ ಮತ್ತು ಟಿ ಪಿ ಜಿ ಬಂಡವಾಳ.
2	ಆಸ್ಟರ್ ಡಿಎಂ ಆಸ್ಪತ್ರೆಗಳು	ಒಲಿಂಪಸ್ ಬಂಡವಾಳ ಮತ್ತು ಇತರೆ ಜಾಗತಿಕ ಬಂಡವಾಳ ನಿಧಿಗಳು.
3	ಮ್ಯಾಕ್ಸ್ ಹೆಲ್ತ್ಕೇರ್	ರೇಡಿಯಂಟ್ ಹೆಲ್ತ್ಕೇರ್ ಮತ್ತು ಕೆ ಕೆ ಆರ್ ಬೆಂಬಲಿತ ಬಿ ಎಂ ಎಚ್.
4	ಕೇರ್ ಆಸ್ಪತ್ರೆಗಳು	ಎವರ್ಕೆರ್
5	ಫೋರ್ಟಿಸ್ ಹೆಲ್ತ್ಕೇರ್	ಮಲಯೇಶಿಯದ ಐಎಚ್‌ಎಚ್ ಹೆಲ್ತ್‌ಕೇರ್.
6	ಮೆಡಿಕ ಸಿನರ್ಜಿ	ಏಷ್ಯ ಖಂಡದ ಹೂಡಿಕೆದಾರರ ಜಾಲಗಳು.
7	ಸಹ್ಯಾದ್ರಿ ಆಸ್ಪತ್ರೆಗಳು	ಇತ್ತೀಚಿನವರೆಗೆ ಕೆನಡಾದ ಓಂಟಾರಿಯೊ ಶಿಕ್ಷಕರ ನಿವೃತ್ತಿ ಯೋಜನೆ ನಿಧಿ. ಈಗ ಮಣಿಪಾಲ ಗುಂಪು 6400 ಕೋಟಿ ರೂಪಾಯಿಗಳಿಗೆ ಕೊಂಡುಕೊಂಡಿದೆ.

ರೋಗಿಗಳ ಬಳಸಿ ಪೇಟೆಂಟ್ ಪಡೆವ ಫಾರ್ಮಾ ಕಂಪನಿಗಳು

ವಿದೇಶಿ ಫಾರ್ಮ ಕಂಪನಿಗಳು ನಮ್ಮ ದೇಶದ ಆಸ್ಪತ್ರೆಗಳನ್ನು, ಔಷದಗಳನ್ನು ಸಂಶ್ಲೇಶಿಸಿ, ಪ್ರಯೋಗಿಸಿ ಪೇಟೆಂಟ್ ಪಡೆಯಲು ಬಳಸುತ್ತವೆ. ಅವರ ವಿಧಾನ ಹೀಗಿದೆ: ರೋಗಿಯ ದತ್ತಾಂಶವನ್ನು ಅನಾಮೀಕರಿಸಿ ವಿದೇಶಿ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಕೃತ್ರಿಮ ಬುದ್ಧಿಮತ್ತೆ ಈ ದತ್ತಾಂಶ ಬಳಸಿ ಔಷಧ ಕಂಡುಹಿಡಿಯುತ್ತದೆ. ಈ ಚಿಕಿತ್ಸೆಗೆ ಸ್ಪಂದನೆಯನ್ನು ಅನುಕರಣೆ ವಿಧಾನದಲ್ಲಿ ಗ್ರಹಿಸಿ, ತಕ್ಕ ಲಸಿಕೆ ತಯಾರಿಸಿ ಪರೀಕ್ಷಿಸಲಾಗುತ್ತದೆ.

Target Asset	Acquirer	Deal Value ($m)
AMRI	Manipal (Temasek)	288.4
Columbia Asia Hospitals	Manipal (Temasek)	NA
Baby Memorial	KKR	239.8
KIMS	Care (Blackstone)	400
Convenient Hospitals	Care (TPG)	NA
Sunshine	KIMS (General Atlantic)	4.4
CIMS Hospital	Marengo (Samara)	59.0
Vizag Hospital and Cancer Research	HCG (CVC)	49.6

Source: VCC Edge, VCC Circle

ವಿಮೆ, ಆಸ್ಪತ್ರೆಗಳು ಮತ್ತು ದತ್ತಾಂಶಗಳ ದುಷ್ಟಕೂಟ– ವ್ಯವಸ್ಥಿತ ಲೂಟಿ

ಹೊಸದೊಂದು ದುಷ್ಟಕೂಟ ಹೊರಹೊಮ್ಮಿದೆ. ಅದರಲ್ಲಿ ಖಾಸಗಿ ವಿಮಾ ಕಂಪನಿಗಳು, ಆಸ್ಪತ್ರೆ ಸರಪಳಿಗಳು, ದತ್ತಾಂಶ ವಿಶ್ಲೇಷಣಾ ಸಂಸ್ಥೆಗಳು ಸೇರಿಕೊಂಡಿವೆ. ವಿಮಾ ಕಂಪನಿಗಳು ಪ್ರಮಾಣಿತ ಪ್ಯಾಕೇಜುಗಳನ್ನು ಮಾತ್ರ ಅನುಮೋದಿಸುತ್ತವೆ. ರೋಗಿಗಳ ಆವಶ್ಯಕತೆಗಳನ್ನು ನೋಡಿ ಅಲ್ಲ. ಆಸ್ಪತ್ರೆಗಳು ಅವರ ಆಟ ಆಡುತ್ತವೆ. ಅವು ಬಿಲ್ಲುಗಳನ್ನು ಉಬ್ಬರಿಸುತ್ತವೆ– ಮಿತಿ ಮೀರಿ ಹೆಚ್ಚು ಮಾಡುತ್ತವೆ. ರೋಗಗಳನ್ನು ಉತ್ಪ್ರೇಕ್ಷೆ ಮಾಡುತ್ತವೆ. ಪರೀಕ್ಷೆಗಳನ್ನು ತಮ್ಮ ಹಣ ಮಾಡುವ ಗುರಿಗೆ ತಕ್ಕಂತೆ ದೊಡ್ಡದು ಮಾಡಿ ಶಿಫಾರಸ್ಸು ಮಾಡುತ್ತವೆ

ಡಾಕ್ಟರುಗಳು ಅತೀ ವೈದ್ಯಕೀಯಗೊಳಿಸಲು ಪರಿಸ್ಥಿತಿ ತಯಾರು ಮಾಡುತ್ತಾರೆ. ಡಾಕ್ಟರುಗಳ ಪ್ರತಿಫಲ (ಸಂಬಳ, ಪ್ರೋತ್ಸಾಹಧನ ಇತ್ಯಾದಿ) ಅವರು ಹುಟ್ಟಿಸುವ ಹುಟ್ಟುವಳಿಯ ಮೇಲೆ ಅವಲಂಬಿತವಾಗಿರುತ್ತದೆ. ಇಂತಹ ಎಲ್ಲ ದತ್ತಾಂಶಗಳು ವಿಮಾ ಕಂಪನಿ ಮತ್ತು ಕೃತ್ರಿಮ ಬುದ್ಧಿಮತ್ತೆ ಕಂಪನಿಗಳಿಗೆ ಹರಿಯುತ್ತದೆ. ವಿಮಾ ಕಂಪನಿಗಳು ತಮ್ಮ ಅನುಮೋದನೆಗಳನ್ನು ಬಿಗಿಗೊಳಿಸುತ್ತಾರೆ. ಪ್ರಸ್ತಾಪ ತಿರಸ್ಕರಣೆ ತೀವ್ರವಾಗಿ, ಅಪಾಯದಮಟ್ಟ ಹೆಚ್ಚಿಸಿ ವಿಮಾ ಕಂತುಗಳನ್ನು (ಪ್ರೀಮಿಯಂ) ಹೆಚ್ಚಿಸುತ್ತಾರೆ.

ಕಾಣದ ಅಪರಾಧ ದೃಶ್ಯ

ಔಷಧಿ ಮತ್ತು ಶುಶ್ರೂಷೆ ಭಯದ ವ್ಯವಹಾರವಾದಾಗ– ನೈತಿಕತೆಯ ಕೊನೆಯ ಮೈಲಿಗಲ್ಲುಗಳಾದ ಡಾಕ್ಟರುಗಳು ಈ ಯಂತ್ರದ ಸೆರೆಯಾಳಾಗುತ್ತಾರೆ. ರೋಗನಿರ್ಣಯಗಳನ್ನು ದೊಡ್ಡದುಮಾಡಿ ಅಪಾರವಾದ ಪರೀಕ್ಷಾ ಖರ್ಚುಗಳನ್ನು ಸಮರ್ಥಿಸತೊಡಗುತ್ತಾರೆ. ರೋಗಿಗಳಿಗೆ ಅವಶ್ಯವಿಲ್ಲದ ವೆಚ್ಚದಾಯಕ ಪರೀಕ್ಷೆಗಳನ್ನು ಶಿಫಾರಸ್ಸು ಮಾಡುತ್ತಾರೆ. ಅವಶ್ಯವಿಲ್ಲದ ಶಸ್ತ್ರಚಿಕಿತ್ಸೆಗಳನ್ನು ಮಾಡಿಸುತ್ತಾರೆ. ಕುಟುಂಬದವರಿಗೆ ಇಂತಹ ಚಿಕಿತ್ಸೆಗಳು ರೋಗಿಯನ್ನು ಉಳಿಸಿಕೊಳ್ಳಲು ಅವಶ್ಯ ಎಂದು ಬಿಂಬಿಸುತ್ತಾರೆ. ಪ್ರತಿ ತ್ರೈಮಾಸಿಕದಲ್ಲೂ ಹೊಸ ಹೊಸ ರೋಗ ಕಂಡು ಹಿಡಿಯುತ್ತಾರೆ. ಇಂತಹ ಸನ್ನಿವೇಶದಲ್ಲಿ ಚಿಕಿತ್ಸೆ ಎಂಬುದು ದೊಡ್ಡದಾಗಿ ನಾಟಕೀಯಗೊಳಿಸಿದ ಮಾರಾಟ ಪ್ರಕ್ರಿಯೆಯಾಗುತ್ತದೆ. ಇದು ಔಷಧ/ ಶುಶ್ರೂಷೆಯಲ್ಲ. ಬದಲಿಗೆ ಸರಿಯಾದ ಅರ್ಥದಲ್ಲಿ ಇದು ಅಪರಾಧ!

ಜೈವಿಕ ಯುದ್ಧ

ಭಾರತದ ಆರೋಗ್ಯ ದತ್ತಾಂಶಗಳನ್ನು ರಾಷ್ಟ್ರೀಯ ಆಸ್ತಿ ಎಂದು ಪರಿಗಣಿಸಬೇಕು. ಯಾಕೆಂದರೆ ನಮ್ಮ ಜನರ ಆನುವಂಶಿಕತೆಯ, ಆಹಾರ ಪದ್ಧತಿ, ರೋಗರುಜಿನ ಇತ್ಯಾದಿಗಳ ದತ್ತಾಂಶ ವಿದೇಶೀಯರ ಕೈ ಸೇರಿದರೆ, ಅದನ್ನು ಬಳಸಿ ನಮ್ಮ ವಿರುದ್ಧವೇ ಜೈವಿಕ ಯುದ್ಧ ನಡೆಸುವ ಸಾಧ್ಯತೆ ತೆರೆದುಕೊಳ್ಳುತ್ತದೆ ಕೊರೋನಾ ಸಮಯದಲ್ಲಿ ಜೈವಿಕ ಯುದ್ಧ ಹೇಗೆ ನಡೆಯಬಹುದು ಎಂಬ ಪರಿಕಲ್ಪನೆ ನೀಡಿದೆ. ಇಂತಹ ಪರಿಕಲ್ಪನೆ ಬಂದರೆ ನಾವು ಒಂದು ದೇಶವಾಗಿ ಅದರಲ್ಲೂ ಅತ್ಯಂತ ಹೆಚ್ಚು ಜನಸಂಖ್ಯೆಯ ದೇಶವಾಗಿ ಎಂತಹ ಅಪಾಯ ಎದುರಿಸುತ್ತಿದ್ದೇವೆ ಎಂಬುದರ ಕಲ್ಪನೆ ಬರುತ್ತದೆ.

ಕೊನೆಯದಾಗಿ...

ಆರೋಗ್ಯವನ್ನು ಭಾರತ ಇತರೆ ಉದ್ದಿಮೆಗಳಂತೆ ಪರಿಗಣಿಸಲು ಸಾಧ್ಯವಿಲ್ಲ. ಜೀವ ಮತ್ತು ಸಾವು ಇದರಿಂದ ಎನ್ನುವ ಸತ್ಯ ನಮ್ಮ ಮುಂದೆ ಇರುವಾಗ ನಾವು ಪೂರ್ಣ ಎಚ್ಚೆತ್ತುಕೊಳ್ಳುವ ಅನಿವಾರ್ಯತೆ ಇದೆ.

- ◆ ವಿದೇಶಿ ಹೂಡಿಕೆಯ ಮೇಲೆ ಕಟ್ಟುನಿಟ್ಟಾದ ನಿರ್ಬಂಧ ಹೇರಬೇಕು
- ◆ ವಿಮೆ ಮತ್ತು ಆಸ್ಪತ್ರೆಗಳ ಏಕಸ್ವಾಮ್ಯ ಮುರಿಯಬೇಕು
- ◆ ಆರೋಗ್ಯ ದತ್ತಾಂಶವನ್ನು ರಾಷ್ಟ್ರೀಯ ಆಸ್ತಿ ಎಂದು ಘೋಷಿಸಿ ಅದರ ರಕ್ಷಣೆ ಮಾಡಬೇಕು
- ◆ ರಾಷ್ಟೀಯ ಆರೋಗ್ಯ ಗುಪ್ತಚರ ಸಂಸ್ಥೆಯೊಂದನ್ನು ಸ್ಥಾಪಿಸಿ ಅದಕ್ಕೆ ಸಾರ್ವಭೌಮತೆ ನೀಡಬೇಕು
- ◆ ನೈತಿಕ ವೈದ್ಯಕೀಯ ಅಭ್ಯಾಸಕ್ಕೆ ಸೂಕ್ತ ಪ್ರೋತ್ಸಾಹ ನೀಡಬೇಕು
- ◆ ಇದು ದೇಶ ಉಳಿಯಲು ಅವಶ್ಯ ಬೇಕಾದ ಕ್ರಮಗಳು.

•

ಪ್ರಧಾನಮಂತ್ರಿ ನರೇಂದ್ರ ಮೋದಿ 79ನೇ ಸ್ವಾತಂತ್ರ್ಯ ದಿನಾಚರಣೆಯ ತಮ್ಮ ಭಾಷಣದಲ್ಲಿ, ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಪ್ರಧಾನಿ ಮತ್ತು, ಸಂಕುಚಿತ ಮತೀಯ ಸಂಘಟನೆಯ ಪ್ರಚಾರಕನನ್ನು ಪ್ರತ್ಯೇಕಿಸುವ ಗೆರೆಯನ್ನು ದಾಟಿ, ಪ್ರಚಾರಕ ಮೋದಿಯಾಗಿಬಿಟ್ಟಿದ್ದಾರೆ, 77 ವರ್ಷಗಳ ಹಿಂದೆಯೇ, ಭಾರತದ ಮೊದಲ ಗೃಹಮಂತ್ರಿಗಳು "ನಮ್ಮ ದೇಶದಲ್ಲಿ ದ್ವೇಷ ಮತ್ತು ಹಿಂಸಾಚಾರವನ್ನು ಸೃಷ್ಟಿಸುತ್ತಿರುವ, ದೇಶದ ಸ್ವಾತಂತ್ರ್ಯಕ್ಕೆ ಅಪಾಯವನ್ನು ಉಂಟುಮಾಡುತ್ತಿರುವ ಮತ್ತು ಅದರ ಉತ್ತಮ ಹೆಸರಿಗೆ ಕಳಂಕ ತರುತ್ತಿರುವ ಶಕ್ತಿ" ಎಂದು ಆರೋಪಿಸಿದ ಸಂಘಟನೆಯ ಪ್ರಚಾರಕರಾಗಿದ್ದಾರೆ.

ಪ್ರಧಾನ ಮಂತ್ರಿ ಮೋದಿಯವರು ‘ಪ್ರಚಾರಕ ಮೋದಿ’ ಆಗಿಬಿಟ್ಟಿದ್ದಾರೆ



ಬೃಂದಾ ಕಾರಟ್

ಸ್ವಾತಂತ್ರ್ಯ ದಿನಾಚರಣೆಯ ಭಾಷಣವು ನಮ್ಮ ಸ್ವಾತಂತ್ರ್ಯವನ್ನು ಆಚರಿಸಲು, ನಮ್ಮ ಹುತಾತ್ಮರನ್ನು, ಸ್ವತಂತ್ರ ಭಾರತವು ಯಾವಾಗಲೂ ಋಣಿಯಾಗಿರುವ ಅಸಂಖ್ಯಾತ ಪುರುಷರು ಮತ್ತು ಮಹಿಳೆಯರನ್ನು ಸ್ಮರಿಸಲು, ನಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಡಲು ಮತ್ತು ನಮ್ಮ ಸವಾಲುಗಳನ್ನು ಗುರುತಿಸಲು ಒಂದು ಸಂದರ್ಭವಾಗಿದೆ. ಇದು ಆತ್ಮ ಪ್ರಶಂಸೆಗೆ, ಪಕ್ಷಪಾತೀ ರಾಜಕಾರಣಕ್ಕೆ ಮತ್ತು ವಿಭಜಕ ಶಕ್ತಿಗಳ ಪ್ರಚಾರಕ್ಕೆ ವೇದಿಕೆಯಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ 79ನೇ ಸ್ವಾತಂತ್ರ್ಯ ದಿನಾಚರಣೆಯ ತಮ್ಮ ಭಾಷಣದಲ್ಲಿ, ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಪ್ರಧಾನಿ ಮತ್ತು ಸಂಕುಚಿತ ಮತೀಯ ಸಂಘಟನೆಯ ಪ್ರಚಾರಕನನ್ನು ಪ್ರತ್ಯೇಕಿಸುವ ಗೆರೆಯನ್ನು ದಾಟಿದರು. ಹಾಗೆ ಮಾಡುವ ಮೂಲಕ, ಅವರು ಐತಿಹಾಸಿಕ ಸಂದರ್ಭವನ್ನು ಕಳಂಕಿತಗೊಳಿಸಿ, ನಮ್ಮ ಹುತಾತ್ಮರನ್ನು ಅವಮಾನಿಸಿದರು.

ಪ್ರಧಾನಮಂತ್ರಿಯವರು ತಮ್ಮ ಅಭಿವೃದ್ಧಿಯ ಭಾಷಣದಲ್ಲಿ ಮಾಡಿದ ಅನೇಕ ದಾವೆಗಳನ್ನು ಪ್ರಶ್ನಿಸಬಹುದಾಗಿದೆ. ಗ್ರಾಮೀಣ ಬಡವರಲ್ಲಿ ಹೆಚ್ಚುತ್ತಿರುವ ಭೂಹೀನತೆ, ಕುಂಠಿತ ವೇತನ, ಮನರೇಗ ಅಥವಾ ಅರಣ್ಯ ಹಕ್ಕುಗಳ ಕಾಯ್ದೆಯಡಿಯಲ್ಲಿ ಹಕ್ಕುಗಳನ್ನು ದುರ್ಬಲಗೊಳಿಸುವುದು, ನಿರುದ್ಯೋಗ, ಸಂಸದೀಯ ಸ್ಥಾಯಿ ಸಮಿತಿಯ ಇತ್ತೀಚಿನ ವರದಿಯಲ್ಲಿ ಸೂಚಿಸಿರುವಂತೆ ಭಾರೀ ಪ್ರಮಾಣದಲ್ಲಿ ಎಸ್‌ಟಿ/ಎಸ್‌ಸಿ ಬಡ್ತಿ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಉಳಿಸಿರುವುದು ಇತ್ಯಾದಿಗಳನ್ನು ಪ್ರಶ್ನಿಸಬಹುದಾಗಿದೆ. ಆದರೆ ಈ ಚರ್ಚೆಗಳು ಮತ್ತು ತರ್ಕಗಳು ಹೊಸದೇನಲ್ಲ, ಅವು ಮುಂದುವರೆಯುತ್ತವೆ. ಒಬ್ಬ ಪ್ರಧಾನಿ ಹೇಳಿಕೆಗಳನ್ನು, ಅವು ಎಷ್ಟೇ ದೋಷಪೂರಿತವಾಗಿದ್ದರೂ ಪುನರುಚ್ಚರಿಸುವುದು ಅಪರೂಪವೇನಲ್ಲ. ಅಂತಹವುಗಳನ್ನು ಖಂಡಿತವಾಗಿಯೂ ಪ್ರಶ್ನಿಸಬಹುದು ಮತ್ತು ಪ್ರಶ್ನಿಸಲಾಗುತ್ತಿದೆ ಕೂಡ.


‘ಭ್ರಷ್ಟಾಚಾರ’ ಮತ್ತು ‘ಮತದಾನದ ಹಕ್ಕು’ ಮುಂತಾದ ಪದಗಳು ಕಾಣೆ ಯಾಗಿರುವುದೇಕೆ?

ಭಾಷಣದಲ್ಲಿ ಹೇಳದಿರುವಂತದ್ದು ಕೂಡ ಎದ್ದುಕಾಣುವ ಸಂಗತಿ. ಕಳೆದ ವರ್ಷ, ಪ್ರಧಾನಿಯವರು "ಭ್ರಷ್ಟಾಚಾರದ ಗೆದ್ದಲು" ಬಗ್ಗೆ ಬಹಳವಾಗಿ ಮಾತನಾಡಿದ್ದರು. ಈ ವರ್ಷ, "ಭ್ರಷ್ಟಾಚಾರ" ಎಂಬ ಪದವನ್ನು ಉಲ್ಲೇಖಿಸಿಯೇ ಇಲ್ಲ. ಭ್ರಷ್ಟಾಚಾರದ ವಿರುದ್ಧ ಘೋಷಿತ ಸಮರ ಅಂತ್ಯಗೊಂಡಿದೆಯೇ? ಯುಎಸ್‌ನ ಎಸ್‌ಇಸಿ (ಸೆಕ್ಯುರಿಟೀಗಳು ಮತ್ತು ವಿನಿಮಯಗಳ ಆಯೋಗ) 2000 ಕೋಟಿ ರೂ.ಗಳ ಲಂಚ ಪ್ರಕರಣದಲ್ಲಿ ಅದಾನಿ ಅಧಿಕಾರಿಗಳಿಗೆ ಸಮನ್ಸ್ ಮತ್ತು ದೂರನ್ನು ತಲುಪಿಸಲು ಸಹಾಯಕ್ಕಾಗಿ ಭಾರತದ ಕಾನೂನು ಮತ್ತು ನ್ಯಾಯ ಸಚಿವಾಲಯವನ್ನು ಕೇಳಿದ್ದವು. ಆದರೆ ಭಾರತದಲ್ಲಿನ ಅಧಿಕಾರಿಗಳು ಆರು ತಿಂಗಳ ನಂತರವೂ ಆ ದಾಖಲೆಗಳನ್ನು ತಲುಪಿಸಿಲ್ಲ ಎಂದು ಕೆಲವು ದಿನಗಳ ಹಿಂದೆ ನ್ಯೂಯಾರ್ಕ್ ಪೂರ್ವ ಜಿಲ್ಲಾ ನ್ಯಾಯಾಲಯಕ್ಕೆ ತಿಳಿಸಿದೆ. ಸಂಸತ್ತಿನಲ್ಲಿ ಮತ್ತೊಂದು ಸ್ಪಷ್ಟ ಉತ್ತರದಲ್ಲಿ, ಕಪ್ಪು ಹಣ ಕಾಯ್ದೆ (2015) ಅಡಿಯಲ್ಲಿ ಕಳೆದ 10 ವರ್ಷಗಳಲ್ಲಿ 35,000 ಕೋಟಿ ರೂಪಾಯಿ ತೆರಿಗೆ ಮತ್ತು ದಂಡದ ಬೇಡಿಕೆಗಳನ್ನು ಎತ್ತಲಾಗಿತ್ತು, ಆದರೆ ಇಲ್ಲಿಯವರೆಗೆ ವಸೂಲಿ ಮಾಡಲಾದ ಮೊತ್ತ ಕೇವಲ 338 ಕೋಟಿ ರೂಪಾಯಿಗಳು ಮಾತ್ರ ಎಂದು ಸರ್ಕಾರ ಹೇಳಿದೆ. ಇದೇ ವೇಳೆಯಲ್ಲಿ, ಅತ್ತ ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯ–ಸಂಬಂಧಿತ ನಿಧಿಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ.

ತುರ್ತು ಪರಿಸ್ಥಿತಿಯ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ ಪ್ರಧಾನಿ, ತುರ್ತುಪರಿಸ್ಥಿತಿ ಹೇರಿದವರನ್ನು "ಪಾಪಿಗಳು" ಎಂದು ಕರೆದರು. ಪದಗಳ ಆಯ್ಕೆ ಅವರ ವಿಶೇಷ ಹಕ್ಕು. ಆದರೆ ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯವಾದ ಮತದಾನದ ಹಕ್ಕು ದಾಳಿಗೆ ಒಳಗಾಗಿರುವ ಸಮಯದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸುವುದಾಗಿ ಹೇಳಿಕೊಳ್ಳುವುದು ವಿಪರ್ಯಾಸ. ಮತದಾನದ ಹಕ್ಕನ್ನು ರಕ್ಷಿಸಲು ಬದ್ಧ ಎಂದು ಪ್ರಧಾನಿ ಹೇಳುತ್ತಾರೆಂದು ದೇಶ ನಿರೀಕ್ಷಿಸಿತ್ತು. ಗುರುವಾರ (ಆಗಸ್ಟ್ 14ರಂದು) ತನ್ನ ಮಧ್ಯಂತರ ತೀರ್ಪಿನಲ್ಲಿ, ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ರಕ್ಷಿಸಬೇಕು ಎಂದು ಸುಪ್ರೀಂ ಕೋರ್ಟ್ ಕಾಳಜಿ ವ್ಯಕ್ತಪಡಿಸಿತು. ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಎತ್ತಿದ್ದ ಹಲವು ಪ್ರಶ್ನೆಗಳನ್ನು ಅದರ ಆದೇಶವು ಎತ್ತಿಹಿಡಿದಿದೆ. ಸಂವಿಧಾನದ ದೇಶ ಪಡೆದಿರುವ ಸಂಸ್ಥೆಗಳ ಸ್ವಾಯತ್ತತೆ ಗಂಭೀರ ಬೆದರಿಕೆಗೆ ಒಳಗಾಗಿದೆ. ಈ ಕಾಳಜಿಗಳು ಪ್ರಧಾನಿಯವರ ಭಾಷಣದಲ್ಲಿ ಕಾಣಬಂದಿಲ್ಲ. "ಭ್ರಷ್ಟಾಚಾರ" ಮತ್ತು "ಮತದಾನದ ಹಕ್ಕು" ನಂತಹ ಕಾಣೆಯಾದ ಪದಗಳು ತಮ್ಮದೇ ಆದ ಕಥೆಯನ್ನು ಹೇಳುತ್ತವೆ.

"ನುಸುಳುಕೋರರ ಪಿತೂರಿ" ಎಂಬ ಆಧಾರಹೀನ ಆರೋಪ

ಪ್ರಧಾನಿಯವರ ಭಾಷಣದ ಎರಡು ನಿರ್ದಿಷ್ಟ ಅಂಶಗಳು ಎಲ್ಲಾ ಭಾರತೀಯರನ್ನು ತೀವ್ರವಾಗಿ ಆತಂಕಕ್ಕೆ ಈಡುಮಾಡುವ ವಿಷಯಗಳು. ಮೊದಲ ಅಂಶವೆಂದರೆ, ಭಾರತದ ಜನಸಂಖ್ಯಾ ಸ್ವರೂಪವನ್ನು ಬದಲಾಯಿಸಲು "ನುಸುಳುಕೋರರು" ನಡೆಸಿರುವರೆನ್ನಲಾದ "ಪಿತೂರಿ"ಯ ಬಗ್ಗೆ ಅವರು ನೀಡಿದ ಅದ್ಭುತ ಎಚ್ಚರಿಕೆ. ಇದು ಜಾರ್ಖಂಡ್ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ "ಮುಸ್ಲಿಂ ನುಸುಳುಕೋರರು" ಬುಡಕಟ್ಟು ಜನಗಳ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಬುಡಕಟ್ಟು ಮಹಿಳೆಯರನ್ನು ಶೋಷಿಸುತ್ತಿದ್ದಾರೆ ಎಂದು ಯಾವುದೇ ಆಧಾರವಿಲ್ಲದೆ ಪ್ರಚಾರ ಮಾಡಿದ ಆರೋಪದ ಪುನರುಚ್ಚಾರವೇ ಆಗಿದೆ. ಆ ಚುನಾವಣೆಯಲ್ಲಿ ಪ್ರಧಾನಿಯವರ ಪಕ್ಷವನ್ನು ನಿರ್ಣಾಯಕವಾಗಿ ಸೋಲಿಸಲಾಯಿತು, ಆದರೆ ಅದರಿಂದ ಯಾವುದೇ ಪಾಠ ಕಲಿಯಲಿಲ್ಲ. ಅಂತಹ



ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಪಿತೂರಿ ನಡೆದಿದ್ದರೆ, ಇಷ್ಟು ವರ್ಷಗಳಲ್ಲಿ ಗೃಹ ಮತ್ತು ರಕ್ಷಣಾ ಸಚಿವಾಲಯದ ಪಾತ್ರವೇನು? ಅಂತಹ "ಪಿತೂರಿ"ಯ ಬಗ್ಗೆ ಸಂಸತ್ತನ್ನು ಎಂದಿಗೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೇಕೆ? ‘ನುಸುಳುಕೋರರು’ ಭಾರತವನ್ನು ಅತಿಕ್ರಮಿಸಿದ ದಶಕದಲ್ಲಿ ಇಂತಹ ಒಂದು ಸರಕಾರದ ಮುಖ್ಯಸ್ಥರಾಗಿರುವ ವ್ಯಕ್ತಿಗೆ ದೇಶವು ಆಶ್ರಯ ಕೊಟ್ಟಿತ್ತು ಎಂಬುದು ವಿರೋಧಾಭಾಸದ ಸಂಗತಿಯಲ್ಲವೇ?

ಅತಿ ಹೆಚ್ಚು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದು ಕಾರ್ಪೊರೇಟ್‌ಗಳು, ಅದೂ ಕೂಡ ಕೇಂದ್ರ ಸರಕಾರದ ನೆರವಿನಿಂದ, ಎಂಬುದನ್ನು ಅಂಕಿಅಂಶಗಳು ತೋರಿಸುತ್ತವೆ, ಈ ವರ್ಷದ ಫೆಬ್ರವರಿಯಲ್ಲಿ ಸಂಸತ್ತಿನಲ್ಲಿ ನೀಡಿದ ಉತ್ತರದ ಪ್ರಕಾರ, 2020 ಮತ್ತು 2022ರ ನಡುವೆ ಒಟ್ಟು 6,779 ಪರಿಶಿಷ್ಟ ಬುಡಕಟ್ಟುಗಳ ಮಹಿಳೆಯರ ಮೇಲೆ ಲೈಂಗಿಕ ಅಪರಾಧಗಳು ದಾಖಲಾಗಿವೆ. ‘ನುಸುಳುಕೋರ’ರಿಂದ ಅಪರಾಧಗಳಾಗಿರುವ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಪ್ರಧಾನಿಯವರು ಸ್ವಾತಂತ್ರ್ಯೋತ್ಸವದ ವೇದಿಕೆಯನ್ನು ಬಳಸಿಕೊಂಡು ಸತ್ಯಾಂಶಗಳಿಲ್ಲದ ಇಂತಹ ಗಂಭೀರವಾದ ಕೋಮುವಾದೀ ಪ್ರತಿಪಾದನೆಗಳನ್ನು ಮಾಡಿರುವುದು ನಾಚಿಕೆಗೇಡಿನ ಸಂಗತಿ.

ಭಾರತದಾದ್ಯಂತ, ವಿದೇಶಿಯರನ್ನು ಪತ್ತೆಹಚ್ಚುವ ಹೆಸರಿನಲ್ಲಿ, ಬಂಗಾಳಿ ಮಾತನಾಡುವ ಬಡ ವಲಸಿಗ ಕಾರ್ಮಿಕರನ್ನು ಮತ್ತು ವಿಶೇಷವಾಗಿ ಮುಸ್ಲಿಂ ವಲಸಿಗರನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಅಕ್ರಮ ವಲಸಿಗರ ಪ್ರಶ್ನೆಯನ್ನು ನಿಭಾಯಿಸಲು ಅಂತರರಾಷ್ಟ್ರೀಯ ಶಿಷ್ಟಾಚಾರಗಳಿವೆ. ಆ ವಿಧಿವಿಧಾನಗಳ ಪ್ರಕಾರ ಅವರನ್ನು ಗುರುತಿಸಿ ಗಡೀಪಾರು ಮಾಡಬೇಕು. ಆದರೆ ಇಲ್ಲಿ ಭಾರತದಲ್ಲಿ, ಇದು ಸಂಪೂರ್ಣವಾಗಿ ಕೋಮು ಪರಿಗಣನೆಗಳಿಂದ ನಡೆಸಲ್ಪಡುತ್ತಿದೆ. ಪ್ರಧಾನಿಯವರ ಭಾಷಣದಲ್ಲಿ ಪ್ರತಿಫಲಿಸಿರುವುದು ಒಂದು ಜನವಿಭಾಗವನ್ನು ರಾಕ್ಷಸರೆಂಬಂತೆ ಬಿಂಬಿಸುವ ಈ ಪ್ರಯತ್ನವೇ.

ಒಂದು ಅಭೂತಪೂರ್ವ ವಿಶ್ವಾಸದ್ರೋಹ

ಎರಡನೆಯದಾಗಿ, ಒಂದು ಅಭೂತಪೂರ್ವ ವಿಶ್ವಾಸದ್ರೋಹ ಎಂದು ಖಂಡಿತವಾಗಿಯೂ ಹೇಳಬಹುದಾದ ಒಂದು ಹೇಳಿಕೆ. ಪ್ರಧಾನ ಮಂತ್ರಿಯವರು ಆರ್‌ಎಸ್‌ಎಸ್ ಅನ್ನು ಬಾಯಿ ತುಂಬಾ ಹೊಗಳಲು ಈ ಸಂದರ್ಭವನ್ನು ಬಳಸಿಕೊಂಡರು. ಬಿಜೆಪಿ ಉಕ್ಕಿನ ಮನುಷ್ಯ ಎಂದು ಗೌರವಿಸುವ ಭಾರತದ ಮೊದಲ ಗೃಹ ಮಂತ್ರಿ ವಲ್ಲಭಭಾಯಿ ಪಟೇಲ್‌ರವರೇ ಈ ಸಂಘಟನೆಯ ಸ್ವರೂಪವನ್ನು ಸ್ಪಷ್ಟವಾದ ಪದಗಳಲ್ಲಿ ವಿವರಿಸಿದ್ದಾರೆ.

"ನಮ್ಮ ದೇಶದಲ್ಲಿ ದ್ವೇಷ ಮತ್ತು ಹಿಂಸಾಚಾರವನ್ನು ಸೃಷ್ಟಿಸುತ್ತಿರುವ, ದೇಶದ ಸ್ವಾತಂತ್ರ್ಯಕ್ಕೆ ಅಪಾಯವನ್ನು ಉಂಟುಮಾಡುತ್ತಿರುವ ಮತ್ತು ಅದರ ಉತ್ತಮ ಹೆಸರಿಗೆ ಕಳಂಕ ತರುತ್ತಿರುವ ಶಕ್ತಿಗಳನ್ನು ಬೇರುಸಹಿತ ನಿರ್ಮೂಲನೆ ಮಾಡಲು" ಎಂದು ಆರ್‌ಎಸ್‌ಎಸ್ ಅನ್ನು ನಿಷೇಧಿಸುವ ಸಂದರ್ಭದಲ್ಲಿ ಅವರು ಹೇಳಿದ್ದರು. ಮುಂದುವರೆದು– "ಆರ್‌ಎಸ್‌ಎಸ್ ಸದಸ್ಯರು ಅನಪೇಕ್ಷಿತ ಮತ್ತು ಅಪಾಯಕಾರಿಯೂ ಆಗಿರುವ ಕೃತ್ಯಗಳನ್ನು ನಡೆಸಿದ್ದಾರೆ... ರಾಷ್ಟ್ರೀಯ ಸ್ವಯಂಸೇವಕ ಸಂಘದ ವೈಯಕ್ತಿಕ ಸದಸ್ಯರು ಬೆಂಕಿ ಹಚ್ಚುವುದು ಮತ್ತು ಲೂಟಿ ಸೇರಿದಂತೆ ಹಿಂಸಾಚಾರದ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ" ಎಂದೂ ಅವರು ಹೇಳಿದ್ದರು.

ಅಂದಿನಿಂದ ಹಿಡಿದು ಸ್ವತಂತ್ರ ಭಾರತದಲ್ಲಿ ದಶಕ–ದಶಕಗಳಲ್ಲಿ ಹಿಂಸಾತ್ಮಕ ಕೋಮು ಗಲಭೆಗಳಿಗೆ ಆರ್‌ಎಸ್‌ಎಸ್ ಹೊಣೆ ಎಂದು ಅಧಿಕೃತ ತನಿಖಾ ಆಯೋಗಗಳು ಬೊಟ್ಟುಮಾಡಿ ದೂಷಿಸಿವೆ. ಪ್ರಧಾನಿಯವರು ಈ ಸತ್ಯವನ್ನು ಮರೆಮಾಚಿದ್ದು ಮಾತ್ರವಲ್ಲ, ಅವರು ಅದಕ್ಕೆ ಸಾರ್ವಜನಿಕ ಅನುಮೋದನೆಯ ಮುದ್ರೆಯನ್ನು ಒತ್ತಿದ್ದಾರೆ. ಇದು ಸಂವಿಧಾನ ಮತ್ತು ಅದರ ಮೌಲ್ಯಗಳನ್ನು ರಕ್ಷಿಸುತ್ತಾರೆಂದು ಅವರಲ್ಲಿ ಇಟ್ಟಿರುವ ವಿಶ್ವಾಸದ ಉಲ್ಲಂಘನೆಯಾಗಿದೆ.

ಹೀಗೆ, ಎಲ್ಲೆ ಮೀರಿ, ಪ್ರಧಾನ ಮಂತ್ರಿ ಮೋದಿಯವರು ಭಾರತ ಮತ್ತು ಜಗತ್ತಿನ ಕಣ್ಣಲ್ಲಿ ‘ಪ್ರಚಾರಕ ಮೋದಿ’ಯಾದರು – ಇದು ನಿಜಕ್ಕೂ ‘ಇಂಡಿಯಾ, ಅಂದರೆ ಭಾರತ’ದ ಪಾಲಿಗೆ ಒಂದು ದುಃಖದ ದಿನ.

ಅನು: ಸಿ.ಚಿ.
ಕೃಪೆ: 'ದಿ ಇಂಡಿಯನ್ ಎಕ್ಸ್‌ಪ್ರೆಸ್'

ಪರಿಶಿಷ್ಟ ಜಾತಿಗಳ ಶೇ. 85 ಜನರಿಗೆ ಭೂ ಒಡೆತನವಿಲ್ಲ

ಪರಿಶಿಷ್ಟ ಜಾತಿ–ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಈ ವರದಿಯಲ್ಲಿ ಪರಿಶಿಷ್ಟ ಜಾತಿಯ ಜನರ ಬದುಕಿಗೆ ಸಂಬಂಧಿಸಿ ಗಂಭೀರ ಚಿಂತನೆಗೆ ಒಳಪಡಿಸುವ ಅಂಶಗಳೂ ಇವೆ. ಭೂಮಿ ಮತ್ತು ವಸತಿ ಒಡೆತನಕ್ಕೆ ಸಂಬಂಧಿಸಿದ ಅಂಕಿ ಅಂಶಗಳೂ ಇವೆ. ಭರ್ತಿಮಾಡದೇ ಖಾಲಿ ಇರುವ ಸರ್ಕಾರಿ ಹುದ್ದೆಗಳು, ಅನಕ್ಷರತೆ, ನಿರುದ್ಯೋಗ, ಕ್ಷೀಣಿಸುತ್ತಿರುವ ಮೀಸಲಾತಿ ಉದ್ಯೋಗಗಳ ಅವಕಾಶಗಳು... ಹೀಗೆ ಈ ಸಮುದಾಯ ಎದುರಿಸುತ್ತಿರುವ ಹಲವು ಅಂಶಗಳನ್ನು ವರದಿ ಗುರುತಿಸಿದೆ. ಈ ಅಂಶಗಳ ಕುರಿತು ಈ ಲೇಖನದಲ್ಲಿ ವಿಮರ್ಶಿಸುವ ಪ್ರಯತ್ನವನ್ನು ಮಾಡಲಾಗಿದೆ.

ಸಿ.ಸಿದ್ದಯ್ಯ

ಪರಿಶಿಷ್ಟ ಜಾತಿ–ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ನ್ಯಾ. ನಾಗಮೋಹನದಾಸ್ ನೇತೃತ್ವದ ಆಯೋಗವನ್ನು ರಚಿಸಿತ್ತು. ಈ ಆಯೋಗವು, 2025ರ ಆಗಸ್ಟ್ ಒಂದರಂದು ಸರ್ಕಾರಕ್ಕೆ 332 ಪುಟಗಳ ತನ್ನ ವರದಿಯನ್ನು ಸಲ್ಲಿಸಿದೆ. ವರದಿಗೆ ಸಂಬಂಧಿಸಿದಂತೆ, ಆಗಸ್ಟ್ 19ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ಜಾತಿವಾರು ವರ್ಗೀಕರಣವನ್ನು ತುಸು ಪರಿಷ್ಕರಿಸಿ, ವೈಜ್ಞಾನಿಕವಾಗಿ ಒಳ ಮೀಸಲಾತಿಯನ್ನು ಜಾರಿಗೊಳಿಸುವ ತೀರ್ಮಾನವಾಗಿದೆ. ಆಯೋಗವು ಪರಿಶಿಷ್ಟ ಜಾತಿಗಳನ್ನು ಎ, ಬಿ, ಸಿ, ಡಿ, ಇ ಎಂಬ 5 ಗುಂಪುಗಳಾಗಿ ವಿಂಗಡಿಸಿ ಮೀಸಲಾತಿ ಹಂಚಿಕೆ ಮಾಡಿತ್ತು. ಸರ್ಕಾರ ಇದನ್ನು ಎ, ಬಿ, ಸಿ ಎಂದು 3 ಗುಂಪುಗಳನ್ನಾಗಿ ಮಾಡಿದೆ. ಎ ಗುಂಪಿಗೆ ಶೇ. 6 ಮತ್ತು ಬಿ ಗುಂಪಿಗೆ ಶೇ. 6 ಹಾಗೂ ಸಿ ಗುಂಪಿಗೆ ಶೇ. 5ರಂತೆ ಮೀಸಲು ನಿಗದಿ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಗಸ್ಟ್ 20ರಂದು ವಿಧಾನಸಭೆಯಲ್ಲಿ ಇದನ್ನು ಘೋಷಿಸಿದ್ದಾರೆ. ಈ ಹಂಚಿಕೆಗೆ ಸಂಬಂಧಿಸಿ ಪರಿಶಿಷ್ಟ ಜಾತಿಯ ಒಳಗಿನ ಕೆಲವರು ಅಸಮದಾನ ವ್ಯಕ್ತಪಡಿಸಿದ್ದಾರೆ.

ಆದರೆ. ಒಳ ವರ್ಗೀಕರಣ ಮತ್ತು ಒಳ ಮೀಸಲಾತಿ ಹಂಚಿಕೆಯಿಂದ ಪರಿಶಿಷ್ಟ ಜಾತಿ ಜನರ ಸಮಸ್ಯೆಗಳಿಗೆಲ್ಲಾ ಪರಿಹಾರ ದೊರಕಿದೆ ಎಂದು ಯಾರಾದರೂ ಭಾವಿಸಿದರೆ ಅವರಿಗೆ ನಿರಾಶೆ ಎದುರಾಗುತ್ತದೆ. ಹಾಗೆ ನೋಡಿದರೆ ಮೀಸಲಾತಿಯಿಂದ ಮಾತ್ರ ಸಾಮಾಜಿಕ ದಬ್ಬಾಳಿಕೆಯನ್ನು, ದಲಿತರ ಹಿಂದುಳಿದಿರುವಿಕೆಯ ಪರಿಸ್ಥಿತಿಯನ್ನು ಪರಿಹರಿಸಲಾಗದು ಎಂಬುದು ಎಲ್ಲರ ಅರಿವಿಗೂ ಬಂದಿರುವ ಸಂಗತಿ. ನಿಜವಾದ ಪರಿಹಾರವು ಹಿಂದುಳಿದಿರುವಿಕೆಗೆ ಕಾರಣವಾದ ಮೂಲ ಅಂಶಗಳನ್ನು ಪರಿಹರಿಸುವುದರಲ್ಲಿದೆ. ಇಂದಿಗೂ ದಲಿತರನ್ನು ತಳಮಟ್ಟದಲ್ಲಿ ಇರಿಸುವ ಭೂ ಸಂಬಂಧಗಳನ್ನು ಮುರಿಯಬೇಕು. ಭೂಮಿ ವಿತರಣೆ ನಡೆಯಬೇಕು.

ಪರಿಶಿಷ್ಟ ಜಾತಿವಾರು ಕುಟುಂಬಗಳು ಹೊಂದಿರುವ ಭೂಮಿಯ ವಿಸ್ತೀರ್ಣದ ವಿವರ

ಸಮಗ್ರ ಸಮೀಕ್ಷೆ 2025ರಲ್ಲಿ ಪರಿಶಿಷ್ಟ ಜಾತಿಯ 101 ಪರಿಶಿಷ್ಟ ಜಾತಿಗಳ ಕುಟುಂಬಗಳು ಹೊಂದಿರುವ ಭೂಮಿಯ ವಿಸ್ತೀರ್ಣದ ವಿವರಗಳನ್ನು ಸಂಗ್ರಹಿಸಲಾಗಿದೆ. ಇದನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ – 1

ಜಾತಿಯ ವಿವರ	ಒಟ್ಟು ಕುಟುಂಬಗಳು	0–5 ಎಕರೆ	5–15 ಎಕರೆ	15 ಎಕರೆಗಿಂತ ಅಧಿಕ
ಬಂಜಾರ	340687 (ಶೇ.12.34)	327925 (ಶೇ.12.25)	11218 (ಶೇ.18.63)	1544 (ಶೇ.6.70)
ಭೋವಿ	299350 (ಶೇ.10.84)	292519 (ಶೇ,10.92)	2638 (ಶೇ.3.39)	1771 (ಶೇ.7.68)
ಹೊಲೆಯ	678111 (ಶೇ.24.56)	655910 (ಶೇ.24.50)	13720 (ಶೇ.22.79)	8481 (ಶೇ 36.79)
ಮಾದಿಗ	709932 (ಶೇ. 25.71)	674161 (ಶೇ.25.17)	11060 (ಶೇ.18.06)	4711 (ಶೇ. 20.44)
ನಾಲ್ಕು ಜಾತಿಗಳ ಕುಟುಂಬಗಳ ಪಾಲು	2028080 (ಶೇ.73.45)	1950515 (ಶೇ.72.84)	38636 (ಶೇ.64.18)	16507 (ಶೇ. 71.61)
ಉಳಿದ 97 ಜಾತಿ ಕುಟುಂಬಗಳ ಪಾಲು	732895 (ಶೇ.26.55)	727211 (ಶೇ.27.16)	21563 (ಶೇ.35.82)	6543 (ಶೇ. 28.39)
ಒಟ್ಟು ಭೂ ವಿಸ್ತೀರ್ಣದಲ್ಲಿ 101 ಪರಿಶಿಷ್ಟ ಜಾತಿಗಳು ಕುಟುಂಬಗಳ ಪಾಲು	2760975 (ಶೇ.100.00)	2677726 (ಶೇ.100.00)	60199 (ಶೇ.100.00)	23050 (ಶೇ.100.00)

ಭೂಮಿ ಒಡೆತನ

ನ್ಯಾ. ನಾಗಮೋಹನದಾಸ್ ನೇತೃತ್ವದ ಆಯೋಗ ಸಲ್ಲಿಸಿರುವ ವರದಿಯಲ್ಲಿರುವ ಪ.ಜಾ. ಜನರ ಬದುಕಿಗೆ ಸಂಬಂಧಿಸಿದ ಇನ್ನಿತರೆ ಅಂಶಗಳನ್ನು ನಾವಿಲ್ಲಿ ಗಮನಿಸಬೇಕಾಗಿದೆ. ವರದಿಯಲ್ಲಿ ಈ ರೀತಿ ಹೇಳಲಾಗಿದೆ: "ಒಂದು ಸಮುದಾಯದ ಆರ್ಥಿಕ ಸ್ಥಿತಿಗತಿಯನ್ನು ಅರಿತುಕೊಳ್ಳಲು ವರಮಾನ, ಉದ್ಯೋಗ, ಸ್ಥಿರಾಸ್ತಿ (ವಸತಿ) ಮುಂತಾದ ಸೂಚಿಗಳನ್ನು ಬಳಸಲಾಗುತ್ತದೆ. ಭೂಮಿಯು ಒಂದು ಆಸ್ತಿಮಾತ್ರವಲ್ಲ. ಅದು ಕುಟುಂಬವೊಂದರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ನಿರ್ಧರಿಸುವ ಒಂದು ಸಾಧನ."

ಡಾ. ಬಿ.ಆರ್.ಅಂಬೇಡ್ಕರ್ ಬಹಳ ಹಿಂದೆಯೇ "ಭೂಮಿ ಕೇವಲ ಆರ್ಥಿಕ ಆಸ್ತಿಯಲ್ಲ, ಅದು ಸಾಮಾಜಿಕ ಸ್ಥಾನಮಾನ ಮತ್ತು ಘನತೆಯ ಗುರುತು" ಎಂದು ಒತ್ತಿ ಹೇಳಿದ್ದರು. ಕೃಷಿಪ್ರಧಾನ ಭಾರತದಲ್ಲಿ ಜೀವನೋಪಾಯ, ಆರ್ಥಿಕ ಚಲನಶೀಲತೆ ಮತ್ತು ಸಾಮಾಜಿಕ ಘನತೆಗೆ ಭೂಮಿ ಕೇಂದ್ರವಾಗಿರುವುದರಿಂದ ಪುನರ್ವಿತರಣೆಯ ಪ್ರಶ್ನೆಯನ್ನು ಪರಿಹರಿಸಲು ಈ ಪಥವನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ.

ಪ.ಜಾತಿಯ ಜನರಲ್ಲಿ ಭೂಮಿಯ ಒಡೆತನ ಹೊಂದಿರುವ ಭೂಮಿಯ ವಿಸ್ತೀರ್ಣ ತುಂಬಾ ಕಡಿಮೆಯಿದೆ. ರಾಜ್ಯದ ಒಟ್ಟಾರೆ ಪ.ಜಾ. ಜನರ ಪೈಕಿ 9.73 ಲಕ್ಷ ಜನ ಭೂ ಹಿಡುವಳಿದಾರರಿದ್ದಾರೆ. ಇದರಲ್ಲಿ ಅತಿಸಣ್ಣ, ಸಣ್ಣ ಮತ್ತು ಅರೆ ಮಧ್ಯಮ ಹಿಡುವಳಿದಾರರು 9.43 ಲಕ್ಷ ಜನರಿದ್ದಾರೆ. ಇವರ ಬಳಿ 9.19 ಲಕ್ಷ ಹೆಕ್ಟೇರ್ ಭೂಮಿ ಇದೆ.

ನ್ಯಾ.ನಾಗಮೋಹನದಾಸ್ ಅವರ ಆಯೋಗ ಸಲ್ಲಿಸಿದ ವರದಿಯು, ಒಟ್ಟು 101 ಪ.ಜಾತಿಗಳ ಅಂದಾಜು ಶೇ. 85ರಷ್ಟು ಕುಟುಂಬಗಳಿಗೆ ಸ್ವಂತ ಭೂಮಿ ಇಲ್ಲ ಎಂಬುದನ್ನು ಗುರುತಿಸಿದೆ. (2011ರ

ಪುಟ 10 ನೋಡಿ

ಸುಪ್ರೀಂಕೋರ್ಟ್ ತೀರ್ಪಿನ ಸ್ಫೂರ್ತಿಯನ್ನು ಜಾರಿಗೊಳಿಸಲು ಅಲೆಮಾರಿ ಸಮುದಾಯ ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಒಳ ಮೀಸಲಾತಿಯ ಮತ್ತೊಂದು ವರ್ಗೀಕರಣ ಮಾಡಬೇಕು: ಸಿಪಿಐ(ಎಂ)

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕುರಿತು ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಆಧಾರದಲ್ಲಿ ರಾಜ್ಯ ಸರ್ಕಾರ ನೇಮಕ ಮಾಡಿದ್ದ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗವು ನೀಡಿದ ವರದಿಯನ್ನು ರಾಜ್ಯ ಸರ್ಕಾರ ಕೆಲವು ತಿದ್ದುಪಡಿಗಳೊಂದಿಗೆ ಜಾರಿಗೊಳಿಸಲು ತೀರ್ಮಾನಿಸಿದೆ. ರಾಜ್ಯ ಸರ್ಕಾರದ ಹೊಸ ಸೂತ್ರವು ಒಳ ಮೀಸಲಾತಿ ಜಾರಿಯನ್ನು ತಾತ್ವಿಕವಾಗಿ ಒಪ್ಪಿದರೂ, ಕೆಲವು ಸಮಸ್ಯೆಗಳನ್ನು ಬಿಗಡಾಯಿಸುವಂತೆ ಮಾಡಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಸ್ಫೂರ್ತಿಯನ್ನು ಹಾಳುಗೆಡವದೆ ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸರ್ಕಾರವನ್ನು ಆಗ್ರಹಿಸಿದೆ.

ಸುಪ್ರೀಂ ಕೋರ್ಟ್ ನೀಡಿದ್ದ ಮಾರ್ಗಸೂಚಿಗಳನ್ನು ಅನುಸರಿಸಿ ನ್ಯಾ. ನಾಗಮೋಹನದಾಸ್ ಆಯೋಗವು, 'ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ 2025' ರಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಆಧರಿಸಿ, 101 ಪ.ಜಾ.ಗಳನ್ನು 5 ಪ್ರವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿಯನ್ನು ನಿರ್ಧರಿಸಿ ಶಿಫಾರಸು ನೀಡಿತ್ತು. ಆಯೋಗದ ಪ್ರಕಾರ, ಪ್ರವರ್ಗ A (59 ಜಾತಿಗಳು) – 1%, ಪ್ರವರ್ಗ B (18 ಜಾತಿಗಳು) – 6%, ಪ್ರವರ್ಗ C (17 ಜಾತಿಗಳು) – 5% ಪ್ರವರ್ಗ D (4 ಜಾತಿಗಳು) – 4% ಮತ್ತು ಪ್ರವರ್ಗ E (3 ಜಾತಿಗಳು) – 1% ಒಳ ಮೀಸಲಾತಿ ಶಿಫಾರಸು ಮಾಡಲಾಗಿತ್ತು.

ನ್ಯಾ.ನಾಗಮೋಹನದಾಸ್ ಆಯೋಗವು ಈ ರೀತಿ ಪ್ರವರ್ಗಗಳನ್ನು ವಿಂಗಡಿಸುವಾಗ ಕಡಿಮೆ ಸಂಖ್ಯೆಯ ಕೆಲ ಜಾತಿಗಳನ್ನು B ಮತ್ತು C ಪ್ರವರ್ಗಗಳಲ್ಲಿ ಸೇರಿಸಿದ್ದರಿಂದ, ಇದೇ ಪ್ರವರ್ಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಗಳ ಜೊತೆಯಲ್ಲಿ ಸೇರಿಸಿದ್ದರಿಂದ ಒಳ ಮೀಸಲಾತಿ ಪಡೆಯಲು ಅನುಕೂಲಕರವಾಗಿ ಇರಲಿಲ್ಲ ಎಂಬ ಸಣ್ಣ ಮಿತಿಯನ್ನು ಹೊರತುಪಡಿಸಿದರೆ, ಆಯೋಗದ ವರದಿಯು ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗೆ ಅನುಗುಣವಾಗಿಯೇ ಇತ್ತು. ಇಂತಹ ಕೆಲ ಮಿತಿಗಳನ್ನು ಸರ್ಕಾರ ಸರಿಪಡಿಸಬಹುದಿತ್ತು.

ಇದುವರೆಗಿನ ಪ.ಜಾ. ಮೀಸಲಾತಿಯ ಪ್ರಯೋಜನ ಪಡೆದ ಜಾತಿಗಳಲ್ಲಿ ಅತ್ಯಂತ ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನುವಂತಹ ಜಾತಿಗಳಿಗೂ ಆಯೋಗವು ಮೀಸಲಾತಿಯನ್ನು ನಿಗದಿಪಡಿಸಿ ಒಳ ಮೀಸಲಾತಿಯ ನೈಸರ್ಗಿಕ ನ್ಯಾಯವನ್ನು ಒದಗಿಸಿತ್ತು.

ರಾಜ್ಯ ಸರ್ಕಾರವು ಅಂತಿಮವಾಗಿ ಆಯೋಗದ ಶಿಫಾರಸುಗಳನ್ನು ಬದಲಾವಣೆ ಮಾಡಿ ಮೂರು ಪ್ರವರ್ಗಗಳನ್ನು ತೀರ್ಮಾನಿಸಿ, ಎಡಗೈ ಸಂಬಂಧಿತ ಜಾತಿಗಳಿಗೆ ಶೇ. 6 ಮತ್ತು ಬಲಗೈ ಸಂಬಂಧಿತ ಜಾತಿಗಳಿಗೆ ಶೇ. 6 ಹಾಗೂ ಸ್ಪ್ರಶ್ಯ ಮತ್ತು ಅಲೆಮಾರಿ ಸಮುದಾಯದ ಜಾತಿಗಳಿಗೆ ಶೇ. 5 ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಿದೆ.

ಅತಿ ಹಿಂದುಳಿದ ಅಲೆಮಾರಿ ಸಮುದಾಯಗಳನ್ನು ಸ್ಪ್ರಶ್ಯ ಜಾತಿ ಸಮುದಾಯಗಳ ಜೊತೆಗೆ ಸೇರಿಸಿ ಶೇ. 5 ರಷ್ಟು ಪ್ರವರ್ಗದ ಜೊತೆ ಮೀಸಲಾತಿ ನೀಡಿದ್ದು ಈಗ ಸಮಸ್ಯೆಗೆ ಕಾರಣವಾಗಿದೆ. ಒಳ ಮೀಸಲಾತಿ ವರ್ಗೀಕರಣ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ "ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆ" ಯನ್ನು ಪರಿಗಣಿಸಬೇಕೆಂಬ ಮಾರ್ಗಸೂಚಿಗೆ ರಾಜ್ಯ ಸರ್ಕಾರದ ಈ ತೀರ್ಮಾನ ವಿರುದ್ಧವಾಗಿದೆ ಎಂಬುದನ್ನು ಗಮನಿಸಬೇಕಾಗಿದೆ. "ಸಮಾನರಲ್ಲಿ ಮಾತ್ರ ಸಮಾನತೆ ಇರುತ್ತದೆ. ಅಸಮಾನರನ್ನು ಸಮಾನರ ಜೊತೆ ಸರಿಸಮ ಎಂದು ಸೇರಿಸಿದರೆ ಅಲ್ಲಿ ಅಸಮಾನತೆ ಮುಂದುವರಿಯುತ್ತದೆ" ಎಂಬ ತತ್ವಕ್ಕೂ ರಾಜ್ಯ ಸರ್ಕಾರದ ತೀರ್ಮಾನ ವ್ಯತಿರಿಕ್ತವಾಗಿವಾಗಿದೆ. ಹೀಗಾಗಿಯೇ, ಪ.ಜಾ.ಗಳಲ್ಲಿ ಅತೀ ಹಿಂದುಳಿದಿರುವ ಶೇ.70 ಕ್ಕಿಂತ ಹೆಚ್ಚಿನ ಅಲೆಮಾರಿ ಮತ್ತು ಅತೀ ಹಿಂದುಳಿದ ಜಾತಿಗಳ ಜನರು ಒಳ ಮೀಸಲಾತಿಯಲ್ಲಿ ಪ್ರತ್ಯೇಕ ಪ್ರವರ್ಗವಾಗಿ ಗುರುತಿಸಿ ಒಳ ಮೀಸಲಾತಿಯನ್ನು ನೀಡಬೇಕೆಂದು ಪ್ರತಿಭಟನೆ ನಡೆಸುತ್ತಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗೆ ವಿರುದ್ಧವಾಗಿ ಆಯೋಗದ ಶಿಫಾರಸ್ಸನ್ನು ಮಾರ್ಪಡಿಸಿ ರಾಜ್ಯ ಸರ್ಕಾರ ಒಳ ಮೀಸಲಾತಿ ವರ್ಗೀಕರಣ ಮಾಡಿರುವುದರಿಂದ, ಯಾರಾದರೂ ನ್ಯಾಯಾಲಯದ ಮೆಟ್ಟಿಲೇರಿದರೆ ಸರ್ಕಾರಕ್ಕೆ ಮುಖಭಂಗವಾಗುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಪರಿಶಿಷ್ಟರಲ್ಲಿ ಅಲೆಮಾರಿ ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಪ್ರತ್ಯೇಕವಾಗಿ ಒಳ ಮೀಸಲಾತಿ ವರ್ಗೀಕರಣ ಮಾಡುವುದು ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗುತ್ತದೆ ಮತ್ತು ನ್ಯಾಯ ಸಮ್ಮತವಾಗುತ್ತದೆ. ರಾಜ್ಯ ಸರ್ಕಾರ ಕೇವಲ ರಾಜಕೀಯ ಹಿತಾಸಕ್ತಿಗಳನ್ನಷ್ಟೇ ಗಮನಿಸದೆ, ಸಾಮಾಜಿಕ ನ್ಯಾಯದ ದೃಢ ತೀರ್ಮಾನ ಮಾಡಬೇಕಾಗಿದೆ.


ಇದೇ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನವ ಉದಾರವಾದಿ ಮತ್ತು ಖಾಸಗೀಕರಣದ ಆರ್ಥಿಕ ನೀತಿಗಳ ಪರಿಣಾಮವಾಗಿ ಸಾರ್ವಜನಿಕ ರಂಗದಲ್ಲಿ ಮೀಸಲಾತಿಯೇ ಅಪ್ರಸ್ತುತ ಎಂಬಂತಾಗುತ್ತಿದೆ. ಮೀಸಲಾತಿಯಾಗಲೀ ಅಥವಾ ಒಳ ಮೀಸಲಾತಿಯಾಗಲೀ, ಅದಕ್ಕೆ ನಿಜವಾದ ಅರ್ಥದಲ್ಲಿ ಮಾನ್ಯತೆ ಮತ್ತು ಪ್ರಯೋಜನ ಸಿಗಬೇಕಾದರೆ, ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ನೀತಿಗಳ ವಿರುದ್ಧ ದೃಢವಾದ ಪ್ರತಿರೋಧವನ್ನು ರಾಜ್ಯ ಸರ್ಕಾರ ತೋರಬೇಕು. ರಾಜ್ಯದಲ್ಲಿರುವ ಎಲ್ಲ ಸಾರ್ವಜನಿಕ ಉದ್ಯಮಗಳು ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ ಎರಡು ಲಕ್ಷಕ್ಕಿಂತ ಅಧಿಕ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ವಹಿಸಬೇಕು. ಮತ್ತು ಬಹಳ ಮುಖ್ಯವಾಗಿ ಖಾಸಗಿ ರಂಗದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.



ಚುನಾವಣೆ ಆಯೋಗದ ವಿಶ್ವಾಸಾರ್ಹತೆ ಬಿಕ್ಕಟ್ಟು

ನಾಗರಿಕರ ಮತದಾನ ಮಾಡುವ ಸಾಂವಿಧಾನಿಕ ಹಕ್ಕನ್ನು ಬಿಹಾರದ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಅಪಾಯಕ್ಕೆ ಗುರಿಪಡಿಸಲಾಗಿದೆ. ಇಷ್ಟು ದೊಡ್ಡ ಕಾರ್ಯವನ್ನು ಆರಂಭಿಸುವುದಕ್ಕೂ ಮುನ್ನ ಆಯೋಗವು ರಾಜಕೀಯ ಪಕ್ಷಗಳೊಂದಿಗೆ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸಮಾಲೋಚಿಸಲಿಲ್ಲ. ಸಂವಿಧಾನದ 326ನೇ ಅನುಚ್ಛೇದವು, ಸಾರ್ವತ್ರಿಕ ಮತದಾನದ ಹಕ್ಕನ್ನು ಖಾತರಿಪಡಿಸಬೇಕು ಎಂದು ಹೇಳುತ್ತದೆಯೇ ಹೊರತು, ಪೌರತ್ವವು ಒಂದು ಮುಖ್ಯ ವಿಚಾರವಾಗಿಲ್ಲ. ಯಾವ ಸಂದರ್ಭದಲ್ಲೂ ಪೌರತ್ವವನ್ನು ನಿರ್ಧರಿಸುವ ಹಕ್ಕು ಆಯೋಗಕ್ಕೆ ಸೇರಿದ್ದೆಂದು ಸಂವಿಧಾನದ ಈ ನಿಯಮ ಹೇಳಿಲ್ಲ. ಚುನಾವಣಾ ಆಯೋಗದ ಇಂತಹ ನಡೆಯನ್ನು ಒಂದು ಅಸಹಜವಾದ ದೋಷವೆಂದು ಕಾಣಬಾರದು. ಇದು ನಿಸ್ಸಂಶಯವಾಗಿಯೂ ಪಕ್ಷಪಾತಿ ನಡೆಯಾಗಿದೆ. ಇದರಿಂದಾಗಿ ಚುನಾವಣೆ ಆಯೋಗದ ಬಗೆಗಿನ ವಿಶ್ವಾಸಾರ್ಹತೆ ಕುಂದಿದೆ.

ನೀಲೋತ್ಪಲ್ ಬಸು
ಕನ್ನಡಕ್ಕೆ: ವಿಶ್ವ



ಇದು ಸಂಭವಿಸುವುದು ನಿಶ್ಚಿತವಾಗಿತ್ತು. ಕಳೆದ 15 ದಿನಗಳಿಂದ ನಡೆಯುತ್ತಿರುವ ಕೋಲಾಹಲಕಾರಿ ಘಟನಾವಳಿಗಳು ಪ್ರಜಾ ಪ್ರಭುತ್ವದ ಮೇಲಿನ ಸತತ ದಾಳಿಯನ್ನು ಬಯಲಿಗೆ ತಂದಿದೆ. ಈ ಆಕ್ರಮಣವು ಬಹಳಷ್ಟು ಹಂತಗಳಲ್ಲಿ ಅನಾವರಣಗೊಳ್ಳುತ್ತಿವೆ. ಅತ್ಯಂತ ಮೂಲಭೂತವಾದುದು ಯಾವುದೆಂದರೆ, ಪ್ರಜಾಪ್ರಭುತ್ವದ ತಳಪಾಯ ಮತ್ತು ಪ್ರಾತಿನಿಧಿಕ ಸರಕಾರ; ನಾಗರಿಕರ ಮತದಾನ ಮಾಡುವ ಸಾಂವಿಧಾನಿಕ ಹಕ್ಕನ್ನು ಬಿಹಾರದ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಅಪಾಯಕ್ಕೆ ಗುರಿಪಡಿಸಲಾಗಿದೆ. ಸ್ವತಂತ್ರವಾಗಿ ಕಾರ್ಯನಿರ್ವಹಿಸಿ ಎಲ್ಲರಿಗೂ ಸಮಾನ ಅವಕಾಶವನ್ನು ಖಾತರಿಪಡಿಸಬೇಕೆಂಬ ನಿರ್ದೇಶನ ಹೊಂದಿರುವ ಸಾಂವಿಧಾನಿಕ ಸಂಸ್ಥೆಯಾದ ಭಾರತ ಚುನಾವಣೆ ಆಯೋಗವನ್ನು (ಇಸಿಐ) ಬುಡಮೇಲು ಮಾಡಿರುವುದು ಎರಡನೇ ಆಯಾಮವಾಗಿದೆ. ಕುತಂತ್ರಗಳ ಮೂಲಕ ಈ ಸಂಸ್ಥೆಯ ವಿಶ್ವಾಸಾರ್ಹತೆಯನ್ನೇ ಹಾಳುಮಾಡಿರುವುದು ಮೂರನೇ ಹಂತವಾಗಿದೆ.

ಇಸಿಐ ಜೂನ್ 24ರಂದು ಎಸ್‌ಐಆರ್ ಘೋಷಿಸುವುದರೊಂದಿಗೆ ಸಾರ್ವತ್ರಿಕ ವಯಸ್ಕ ಮತದಾನ ಸಿದ್ಧಾಂತದ ಮೇಲೆ ಆಕ್ರಮಣ ಆರಂಭವಾಯಿತು. ಎಸ್‌ಐಆರ್‌ನ ನಾನಾ ಅಂಶಗಳ ಬಗ್ಗೆ ನಾವು ಈಗಾಗಲೇ ನಮ್ಮ ಓದುಗರಿಗೆ ಮಾಹಿತಿ ನೀಡಿದ್ದೇವೆ. ಆದರೆ, ಬಿಹಾರ ಮತ್ತು ರಾಷ್ಟ್ರ ಮಟ್ಟದಲ್ಲಿ ಜನತಾಂತ್ರಿಕ ಮತ್ತು ಜಾತ್ಯತೀತ ಪಕ್ಷಗಳು ತಕ್ಷಣವೇ ಹಾಗೂ ಒಗ್ಗಟ್ಟಿನ ಪ್ರತಿಕ್ರಿಯೆ ತೋರಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಪ್ರತಿಪಕ್ಷಗಳ ಜಂಟಿ ಕಾರ್ಯಾಚರಣೆಯಲ್ಲಿ ದೀರ್ಘ ವಿರಾಮದ ನಂತರ, ಎಸ್‌ಐಆರ್ ಪ್ರಕ್ರಿಯೆಯು ಒಗ್ಗಟ್ಟಿನ ಕೆಲಸಕ್ಕೆ ಹುರುಪು ತುಂಬಿದೆ.

ಇಡೀ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಇಸಿಐ ನಿಗದಿಪಡಿಸಿದ ಸಂಕ್ಷಿಪ್ತ ಅವಧಿಯು ಯಾವ ರೀತಿಯಲ್ಲಿ ನೋಡಿದರೂ ಯಾವುದೇ ಒಂದು ಅರ್ಥಪೂರ್ಣ ಅಥವಾ ಸಮಗ್ರ ಪರಿಷ್ಕರಣೆಗೆ ತುಂಬಾ ಕಡಿಮೆಯಾಗಿದೆ. ಇದರ ಉದ್ದೇಶ ಏನೆಂದು ತಿಳಿಯುವುದು ಹಾಗೂ ಸೂಕ್ತವಾಗಿ ಪ್ರತಿಕ್ರಿಯಿಸುವುದು ತುಂಬಾ ಸುಲಭವಾಗಿದೆ. ಆದ್ದರಿಂದ ಬಿಹಾರದಲ್ಲಿ ಜೂನ್ 25ರಂದೇ ಪ್ರತಿಭಟನೆಗಳು ಆರಂಭವಾಗಿ ಬಹುಬೇಗನೇ ದೇಶದಾದ್ಯಂತ ಹಬ್ಬಿತು.

ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಲಿಲ್ಲ

ಆಯೋಗದ ಸ್ವತಂತ್ರ ಕಾರ್ಯಾಚರಣೆ ಕುಸಿದಿರುವುದು ಆರಂಭದಿಂದಲೇ ಗೊತ್ತಾಗಿದೆ. ಇಷ್ಟು ದೊಡ್ಡ ಕಾರ್ಯವನ್ನು ಆರಂಭಿಸುವುದಕ್ಕೂ ಮುನ್ನ ಆಯೋಗವು ರಾಜಕೀಯ ಪಕ್ಷಗಳೊಂದಿಗೆ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸಮಾಲೋಚಿಸಲಿಲ್ಲ. ದೀರ್ಘ ಕಾಲದಿಂದ ಇರುವ ಸಂಪ್ರದಾಯವನ್ನು ಈ ಮೂಲಕ ಉಲ್ಲಂಘಿಸಲಾಗಿದೆ. ಇದೊಂದು ಅಸಹಜವಾದ ದೋಷವೆಂದು ಕಾಣಬಾರದು. ಇದು ನಿಸ್ಸಂಶಯವಾಗಿಯೂ ಪಕ್ಷಪಾತಿ ನಡೆಯಾಗಿದೆ. ಪ್ರತಿಪಕ್ಷಗಳು ಚುನಾವಣೆ ಆಯೋಗಕ್ಕೆ ನೇರವಾಗಿ ಪ್ರತಿಭಟನೆ ಸಲ್ಲಿಸಿದಾಗ್ಯೂ ಬಿಜೆಪಿಯು ಆಯೋಗದ ನಿರ್ಧಾರವನ್ನು ಸಮರ್ಥಿಸಿ ಕೊಂಡಿತು.

ನಾಗರಿಕ ಸಲ್ಲಿಸುವ ಅರ್ಜಿಯೊಂದಿಗೆ 11 ದಾಖಲೆಗಳ ಪೈಕಿ ಯಾವುದಾದರೂ ಒಂದನ್ನು ಲಗತ್ತಿಸುವಂತೆ ಆಯೋಗ ನಿಗದಿಪಡಿಸಿರುವುದರಿಂದಾಗಿ ಬಡ ಪ್ರಜೆಗಳು, ಅದರಲ್ಲೂ ವಿಶೇಷವಾಗಿ ಜೀವನೋಪಾಯಕ್ಕಾಗಿ ಆಗಾಗ ಊರೂರು ಅಲೆಯುವ ವಲಸೆ ಕಾರ್ಮಿಕರಿಗೆ ಈ ಪ್ರಕ್ರಿಯೆ ತುಂಬಾ ಕಷ್ಟ ಎಂಬುದು ಸ್ಪಷ್ಟವಾಗಿದೆ. ಜನಸಾಮಾನ್ಯರಿಗೆ ಅತಿ ಸುಲಭವಾಗಿ ಸಿಗುವಂಥ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ (ಎಪಿಕ್) ಅಥವಾ ಆಧಾರ್ ಕಾರ್ಡ್‌ಗಳನ್ನು ಅಂಗೀಕರಿಸಲು ಆಯೋಗ ನಿರಾಕರಿಸಿರುವುದು ಎಸ್‌ಐಆರ್ ಪ್ರಕ್ರಿಯೆಯನ್ನು ಅರ್ಥಪೂರ್ಣ ಪರಿಷ್ಕರಣೆಗಾಗಿ ರೂಪಿಸಿಲ್ಲ; ಬದಲಿಗೆ ಸಾಮೂಹಿಕವಾಗಿ ಮತದಾನದ ಹಕ್ಕನ್ನು ನಿರಾಕರಿಸುವುದಕ್ಕೆ ರೂಪಿಸಲಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಪೌರತ್ವವನ್ನು ನಿರ್ಧರಿಸುವ ಹಕ್ಕು ಆಯೋಗಕ್ಕೆ ಸೇರಿದ್ದಲ್ಲ

ಎಸ್‌ಐಆರ್‌ನ ರೂಪರೇಷೆಗಳನ್ನು ಗಮನಿಸಿದರೆ ಅದು ಚುನಾವಣೆ ಆಯೋಗ ಸ್ಥಾಪನೆಯಾದಾಗಿನಿಂದಲೂ ಮತದಾರರ ನೋಂದಣಿಗೆ ಅನುಸರಿಸುತ್ತಿರುವ ಪ್ರಕ್ರಿಯೆಗೆ ವಿದಾಯ ಹೇಳಿದ್ದನ್ನು ಸೂಚಿಸುತ್ತದೆ. ಮತದಾನವು ಯಾವಾಗಲೂ ವಯಸ್ಕ ನಾಗರಿಕರಿಗೆ ಸಾರ್ವತ್ರಿಕವಾಗಿರುತ್ತದೆ ಹಾಗೂ ತಮ್ಮ ಪೌರತ್ವವನ್ನು ಸಾಬೀತುಪಡಿಸುವ ಹೊಣೆಯನ್ನು ನಾಗರಿಕರ ಮೇಲೆ ಹೇರದೇ ಅದನ್ನು ಕಾರ್ಯ ಗತಗೊಳಿಸುವುದು ಇಸಿಐನ ಕೆಲಸವಾಗಿರುತ್ತದೆ. ಅದರಿಂದ ವಿಮುಖವಾಗಿದ್ದನ್ನು ಪ್ರಶ್ನಿಸಿದಾಗ, ಆಯೋಗವು ಸಂವಿಧಾನ 326ನೇ ಅನುಚ್ಛೇದವನ್ನು ಉಲ್ಲೇಖಿಸಿದೆ. ಸಾರ್ವತ್ರಿಕ ಮತದಾನದ ಹಕ್ಕನ್ನು ಖಾತರಿಪಡಿಸಬೇಕು ಎಂದು ಅದು ಹೇಳುತ್ತದೆಯೇ ಹೊರತು ಪೌರತ್ವವು ಒಂದು ಮುಖ್ಯ ವಿಚಾರವಾಗಿಲ್ಲ. ಯಾವ ಸಂದರ್ಭದಲ್ಲೂ ಪೌರತ್ವವನ್ನು ನಿರ್ಧರಿಸುವ ಹಕ್ಕು ಆಯೋಗಕ್ಕೆ ಸೇರಿದ್ದೆಂದು ಸಂವಿಧಾನದ ಈ ನಿಯಮ ಯಾವತ್ತೂ ಹೇಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಿರ್ದಿಷ್ಟ ಆಕ್ಷೇಪಗಳ ಆಧಾರದಲ್ಲಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವ ನಿಯಮ ಅನೇಕ ವರ್ಷಗಳಿಂದ ಚಾಲ್ತಿಯಲ್ಲಿದೆ. ಅದಕ್ಕೆ ಇಂಥ ವಿಚಾರಗಳಲ್ಲಿ ಸೂಕ್ತ ಪ್ರಾಧಿಕಾರವಾಗಿರುವ ಗೃಹ ಸಚಿವಾಲಯದ ಪರಿಶೀಲನೆ ಅಗತ್ಯವಾಗಿದೆ.

ವಿಪಕ್ಷಗಳಿಂದ ಸುಪ್ರೀಂ ಕೋರ್ಟ್‌ಗೆ ಮೊರೆ

ಈ ವಿಚಾರಗಳನ್ನು ಗಮನಕ್ಕೆ ತರಲು ಪ್ರತಿಪಕ್ಷಗಳು ಜುಲೈ ಮೊದಲ ವಾರದಲ್ಲಿ ಇಸಿಐ ಅನ್ನು ಭೇಟಿಯಾದವು. ಸರಿಪಡಿಸಬೇಕೆಂಬ ಪ್ರತಿಪಕ್ಷಗಳ ಪ್ರಯತ್ನಗಳನ್ನು ಪರಿಶೀಲಿಸುವ ಮನವಿಯನ್ನು ಆಯೋಗ ಸಾರಾಸಗಟಾಗಿ ತಿರಸ್ಕರಿಸಿತು. ಅದರಿಂದಾಗಿ ವಿಪಕ್ಷಗಳು ಕೊನೆಯ ಪ್ರಯತ್ನವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಯಿತು. ಮತದಾನ ಮಾಡುವ ನಾಗರಿಕರ ಸಾಂವಿಧಾನಿಕ ಹಕ್ಕನ್ನು ರಕ್ಷಿಸುವುದು ಹಾಗೂ ಆಯೋಗದ ಎಸ್‌ಐಆರ್ ಪ್ರಕ್ರಿಯೆಯ ಸಾಂವಿಧಾನಿಕತೆಯನ್ನು ಪ್ರಶ್ನಿಸುವುದು ಇದರ ಉದ್ದೇಶವಾಗಿತ್ತು.

65 ಲಕ್ಷಕ್ಕೂ ಅಧಿಕ ಹೆಸರುಗಳನ್ನು ತೆಗೆದುಹಾಕಲಾಗಿದೆ

ಬಿಹಾರದಲ್ಲಿ ಮತದಾರರ ಕರಡು ಪಟ್ಟಿ (ಡಿಇಆರ್) ಪ್ರಕಟಗೊಂಡಿದ್ದರಿಂದ ಇದು ತುರ್ತಾಗಿ ನಿರ್ವಹಿಸಬೇಕಾದ ಪ್ರಕರಣವಾಯಿತು. ಎಸ್‌ಐಆರ್‌ಗಿಂತ ಮುಂಚೆ ಇದ್ದ 65 ಲಕ್ಷಕ್ಕೂ ಅಧಿಕ ಹೆಸರುಗಳನ್ನು ತೆಗೆದುಹಾಕಿರುವುದು ಕರಡಿನಿಂದ ಬಹಿರಂಗವಾಯಿತು. ಸಾವು ಹಾಗೂ 'ಪತ್ತೆ ಹಚ್ಚಲು ಆಗದ' ವಿಭಾಗದಲ್ಲಿ ಬಹುತೇಕ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗಿದೆ (ಡಿಲಿಶನ್). 'ಪತ್ತೆ ಹಚ್ಚಲು ಆಗದ' ಪದವನ್ನು ಸಾಮಾನ್ಯವಾಗಿ ವಲಸೆ ಕಾರ್ಮಿಕರನ್ನು ಸೂಚಿಸಲು ಬಳಸಲಾಗುತ್ತದೆ.

ಏಪ್ರಿಲ್–ಮೇ ತಿಂಗಳಲ್ಲಿ ಪ್ರಕಟಿಸಲಾದ 2025ರ ಜನವರಿಯಲ್ಲಿ ಮಾಡಿದ ಪರಿಷ್ಕರಣೆಯಲ್ಲಿ ದೊಡ್ಡ ಪ್ರಮಾಣದ ಡಿಲಿಶನ್ ಆಗಿದೆ. ಇದೊಂದು ಪರಿಷ್ಕರಣೆಯೇ ಅಲ್ಲ. ಅದರ ಬದಲಿಗೆ ಹೊಸ ಪಟ್ಟಿಯನ್ನು ಹೊಚ್ಚ ಹೊಸದಾಗಿ ಸೃಷ್ಟಿಸಿದ್ದಾಗಿದೆ. ಸಾಮೂಹಿಕವಾಗಿ ಡಿಲಿಶನ್ ಮಾಡುವುದು ಅದರ ಉದ್ದೇಶವೆನ್ನುವುದು ಸ್ಪಷ್ಟವಾಗಿದೆ. ಒಬ್ಬರೇ ಒಬ್ಬ ಮತದಾರರನ್ನು ಹೊಸದಾಗಿ ಪಟ್ಟಿಗೆ ಸೇರ್ಪಡೆ ಮಾಡದೇ ಇರುವುದು ಆಯೋಗದ ಉದ್ದೇಶವನ್ನು ಬಟಾಬಯಲುಗೊಳಿಸುತ್ತದೆ.

ಸುಪ್ರೀಂ ಕೋರ್ಟ್‌ನ ಮಧ್ಯಂತರ ಆದೇಶ

ಈ ಪ್ರಕ್ರಿಯೆಲ್ಲಿ ಆಯೋಗವು 65 ಲಕ್ಷ ಮತದಾರರ ಹೆಸರನ್ನು ಡಿಲಿಟ್ ಮಾಡಿರುವುದು ಮಾತ್ರವೇ ಅಲ್ಲದೆ ಡಿಲಿಟ್ ಆದವರ ಹೆಸರುಗಳನ್ನು ನಿರ್ದಿಷ್ಟ ಕಾರಣಗಳ ಸಹಿತ ಪ್ರಕಟಿಸಲು ನಿರಾಕರಿಸಿದೆ. ಈ ಪ್ರಕ್ರಿಯೆಯ ಕುತ್ಸಿತ ಉದ್ದೇಶ ಸ್ಪಷ್ಟವಾಗಿಯೇ ಇದೆ. ಹಾಗಾಗಿ, ಡಿಲಿಶನ್ ಪಟ್ಟಿಯನ್ನು ಸಕಾರಣಗಳೊಂದಿಗೆ ಮಿಷನ್ ರೀಡೆಬಲ್ ಫಾರ್ಮಾಟ್‌ನಲ್ಲಿ ಪ್ರಕಟಿಸುವಂತೆ ಸುಪ್ರೀಂ ಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ ಚುನಾವಣೆ ಆಯೋಗಕ್ಕೆ ನಿರ್ದೇಶಿಸಿದೆ. ನಿವಾಸದ ಪುರಾವೆಯಾಗಿ ಆಧಾರ್ ಅನ್ನು ಸಿಂಧುವಾದ ದಾಖಲೆಯೆಂದು ಅಂಗೀಕರಿಸುವಂತೆಯೂ ಅದು ಆದೇಶಿಸಿದೆ. ಅಷ್ಟಾಗಿಯೂ ಗಂಭೀರವಾದ ವಿಚಾರಗಳು ಹಾಗೇ ಉಳಿಯುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ, ಪೌರತ್ವ ನಿರ್ಧಾರ ಪ್ರಕ್ರಿಯೆಯನ್ನು ನಡೆಸುವ ಸಾಂವಿಧಾನಿಕ ಅಧಿಕಾರ ಚುನಾವಣೆ ಆಯೋಗಕ್ಕೆ ಇದೆಯೇ ಎನ್ನುವ ಪ್ರಶ್ನೆ ಉಳಿಯುತ್ತದೆ.

ಎನ್‌ಸಿಆರ್ ಪ್ರಕ್ರಿಯೆಯನ್ನು ಹಿಂಬಾಗಿಲಿನಿಂದ ತರುವ ಪ್ರಯತ್ನ?

ಎಸ್‌ಐಆರ್ ಹೆಸರಿನಲ್ಲಿ ರಾಷ್ಟ್ರೀಯ ಪೌರತ್ವ ದಾಖಲೆ (ಎನ್‌ಸಿಆರ್) ಪ್ರಕ್ರಿಯೆಯನ್ನು ಹಿಂಬಾಗಿಲಿನಿಂದ ತರಲು ಇಸಿಐ ಪ್ರಯತ್ನಿಸುತ್ತಿದೆ ಎಂಬ ಭಾವನೆಯೂ ವ್ಯಾಪಕವಾಗಿದೆ. ಧರ್ಮಾಧಾರಿತ ಅಸ್ಮಿತೆಯ ಪರಿಭಾಷೆಯಲ್ಲಿ ಹಿಂದೂತ್ವ ಪ್ರೇರಿತ ಭಾರತೀಯ ಪೌರತ್ವವನ್ನು ಮರುವ್ಯಾಖ್ಯಾನಿಸುವುದಕ್ಕೂ ಇದಕ್ಕೂ ಸಂಬಂಧವಿದೆ ಎನ್ನುವುದು ಸ್ಪಷ್ಟ. ಇದು ಮುಂಬರುವ ಚುನಾವಣಾ ಪ್ರಚಾರದ ಮುಖ್ಯ ವಸ್ತುವಾಗಲಿದೆ ಎನ್ನುವುದನ್ನು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿಯೇ ಸ್ಪಷ್ಟಪಡಿಸಿದ್ದಾರೆ. ಕೆಂಪು ಕೋಟೆಯಿಂದ ಮಾಡಿದ ಭಾಷಣದಲ್ಲಿ 'ಘುಸ್‌ಪೆಟಿಯಾಗಳ' (ನುಸುಳುಕೋರರು) ವಿರುದ್ಧ ಮೋದಿ ಹೊಸದಾಗಿ ಯುದ್ಧ ಸಾರಿದ್ದಾರೆ.

ಎಸ್‌ಐಆರ್‌ನ ನಿಜವಾದ ಗುರಿಯೇನೆಂಬುದನ್ನು ಅನೇಕ ಸಮೀಕ್ಷೆಗಳು ಮತ್ತು ದತ್ತಾಂಶಗಳು ಬಟಾಬಯಲುಗೊಳಿಸಿವೆ. ಮುಖ್ಯವಾಹಿನಿ ಮಾಧ್ಯಮ ಕೂಡ ಈ ಕೆಲಸವನ್ನು ಮಾಡಿದೆ. ನಿರ್ದಿಷ್ಟಪಡಿಸಿದ 11 ದಾಖಲೆಗಳನ್ನು ಪಡೆಯುವುದು ಬಿಹಾರದ ಜನರಿಗೆ ಕಷ್ಟ. ಇಂಥ ಸರ್ಟಿಫಿಕೆಟ್‌ಗಳನ್ನು ಮಂಜೂರು ಮಾಡುವುದಕ್ಕೆ ರಾಜ್ಯದಲ್ಲಿ ಸಾಕಷ್ಟು ಮೂಲಸೌಕರ್ಯ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ ಎಂದು ಲೋಕನೀತಿ–ಸಿಎಸ್‌ಡಿಎಸ್ ಅಧ್ಯಯನ ಹೇಳಿದೆ. ಡಿಲಿಶನ್‌ನಿಂದಾಗಿ ಮುಸ್ಲಿಮರು ಮತ್ತು ಮಹಿಳೆಯರು ಹೆಚ್ಚಾಗಿ ಬಾಧಿತರಾಗಿದ್ದಾರೆ ಎಂದು ಇನ್ನೊಂದು ಅಧ್ಯಯನ ಹೇಳಿದೆ. ಆಳವಾಗಿ ಬೇರೂರಿರುವ ಸಾಮಾಜಿಕ ಅಸಮಾನತೆಗಳು ಮತ್ತು ಸಬಲೀಕರಣದ ತಾರತಮ್ಯದ ಮಟ್ಟಗಳನ್ನು ಇದು ಪ್ರತಿಬಿಂಬಿಸುತ್ತದೆ.

ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ವಂಚನೆ

ಈ ನಡುವೆ, ಇಸಿಐನಿಂದಲೇ ಹೊರತೆಗೆದ ಹಾಗೂ ಸಾರ್ವಜನಿಕ ವಲಯದಲ್ಲಿ ಲಭ್ಯವಿರುವ ದಾಖಲೆಯ ಪುರಾವೆಯ ಆಧಾರದಲ್ಲಿ ವಿನಾಶಕಾರಿ ಅಂಶವೊಂದು ಬಹಿರಂಗಗೊಂಡಿದೆ. ಬೆಂಗಳೂರಿನ ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ಅಭೂತಪೂರ್ವ ಮಟ್ಟದಲ್ಲಿ ಮತದಾರರಿಗೆ ವಂಚನೆಯಾಗಿರುವುದನ್ನು ಆ ದಾಖಲೆ ಬಹಿರಂಗಪಡಿಸಿದೆ. ಇದು ಚುನಾವಣೆ ಆಯೋಗದ ವಿಶ್ವಾಸಾರ್ಹತೆಗೆ ಬಡಿದ ಕೊನೆಯ ಮೊಳೆಯಾಗಿದೆ. ಲೋಕನೀತಿ–ಸಿಎಸ್‌ಡಿಎಸ್ ಅಧ್ಯಯನ ಕೂಡ ವಂಚನೆಯನ್ನು ದೃಢಪಡಿಸಿದೆ. ಇದರಿಂದಾಗಿ ಚುನಾವಣೆ ಆಯೋಗದ ಬಗೆಗಿನ ವಿಶ್ವಾಸಾರ್ಹತೆ ಕುಂದಿದೆ.

ಇಸಿಐನ ಸಾಂಸ್ಥಿಕ ವಿಶ್ವಾಸಾರ್ಹತೆಯೆನ್ನುವುದು ಏನಾದರೂ ಉಳಿದಿದ್ದಲ್ಲಿ, ಮುಖ್ಯ ಚುನಾವಣೆ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಆಗಸ್ಟ್ 17ರಂದು ಅದಕ್ಕೂ ಕೊನೆಯ ಮೊಳೆ ಹೊಡೆದಿದ್ದಾರೆ. ಪ್ರತಿಪಕ್ಷಗಳ ವಿರುದ್ಧ ಯುದ್ಧೋಪಾದಿ ಪಕ್ಷಪಾತಿ ರೀತಿಯಲ್ಲಿ ಮಧ್ಯಪ್ರವೇಶ ಮಾಡಿದ ಕುಮಾರ್, ಸುಳ್ಳುಗಳ ಕಂತೆಯನ್ನೇ ಹರಿಯಬಿಟ್ಟಿದ್ದಾರೆ. ಆಯೋಗ ಮತ್ತು ಬಿಜೆಪಿ ನಡುವಿನ ಅಪವಿತ್ರ ಮೈತ್ರಿಯನ್ನು ಇದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಬಿಚ್ಚಿಡಲು ಬೇರೆ ಯಾವುದಕ್ಕೂ ಸಾಧ್ಯವಿರಲಾರದು.

ಸಂಘರ್ಷ ಇದೀಗ ಜನತಾ ನ್ಯಾಯಾಲಯದಲ್ಲಿದೆ. ಬಿಹಾರದ ಪ್ರಜೆಗಳ ಮತದಾನದ ಹಕ್ಕನ್ನು ರಕ್ಷಿಸುವ ಉದ್ದೇಶದಿಂದ ಆಗಸ್ಟ್ 17ರಂದು ಆರಂಭವಾಗಿರುವ 'ಮತ ಅಧಿಕಾರ ಯಾತ್ರೆ' ಪಟನಾದಲ್ಲಿ ಸೆಪ್ಟೆಂಬರ್ 1ರಂದು ಮುಕ್ತಾಯಗೊಳ್ಳಲಿದೆ. ಈ ನಡುವೆ, ಚುನಾವಣೆ ಆಯೋಗದ ಸ್ವತಂತ್ರ ಸಾಂವಿಧಾನಿಕ ಅಧಿಕಾರವನ್ನು ಕಿತ್ತು ಹಾಕುವ ಹಾಗೂ ನಾಗರಿಕರ ಅಮೂಲ್ಯ ಸಾಂವಿಧಾನಿಕ ಹಕ್ಕಾದ ಮತದಾನದ ಹಕ್ಕನ್ನು ನಾಶ ಮಾಡುವ ಯತ್ನಗಳ ವಿರುದ್ಧ ದೇಶದಾದ್ಯಂತದ ಜನರು ಒಗ್ಗಟ್ಟಾಗಬೇಕಿದೆ.

ಪರಿಶಿಷ್ಟ ಜಾತಿಗಳ ಶೇ. 85 ಜನರಿಗೆ ಭೂ ಒಡೆತನವಿಲ್ಲ

ಪುಟ 8 ರಿಂದ

ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ 6,10,95,297. ಪರಿಶಿಷ್ಟ ಜಾತಿ ಜನಸಂಖ್ಯೆ 1,04,74,992)

ಸುಮಾರು 14 ವರ್ಷಗಳ ನಂತರ ಇಂದು ನಡೆದಿರುವ ಸಮಗ್ರ ಸಮೀಕ್ಷೆಯಲ್ಲಿ ಈ 101 ಪರಿಶಿಷ್ಟ ಜಾತಿಗಳಲ್ಲಿ ಸ್ವಂತ ಭೂಮಿ ಹೊಂದಿದ ಕುಟುಂಬಗಳ ವಿವರ ಹೀಗಿದೆ:

1. ಪರಿಶಿಷ್ಟ ಜನಸಂಖ್ಯೆಯ 11 ಜಾತಿಗಳಲ್ಲಿ ಶೇ. 90ರಷ್ಟು ಕುಟುಂಬಗಳು ಭೂಮಿ ಹೊಂದಿಲ್ಲ.
2. 24 ಜಾತಿಗಳಲ್ಲಿ ಶೇ. 80ರಿಂದ ಶೇ. 89 ಕುಟುಂಬಗಳು ಭೂಮಿ ಹೊಂದಿಲ್ಲ.
3. 17 ಜಾತಿಗಳಲ್ಲಿ ಶೇ. 70ರಿಂದ 79 ಕುಟುಂಬಗಳು ಭೂಮಿ ಹೊಂದಿಲ್ಲ.
4. 19 ಜಾತಿಗಳಲ್ಲಿ ಶೇ. 60ರಿಂದ 69 ಕುಟುಂಬಗಳು ಭೂಮಿ ಹೊಂದಿಲ್ಲ.
5. 21 ಜಾತಿಗಳಲ್ಲಿ ಶೇ. 50ರಿಂದ 59 ಕುಟುಂಬಗಳು ಭೂಮಿ ಹೊಂದಿಲ್ಲ.
6. 9 ಜಾತಿಗಳಲ್ಲಿ ಶೇ. 49ರಷ್ಟು ಕುಟುಂಬಗಳು ಭೂಮಿ ಹೊಂದಿಲ್ಲ.

ಪರಿಶಿಷ್ಟ ಜಾತಿಗಳ ಜನರಲ್ಲಿ ಭೂಮಿಯ ಒಡೆತನ ಹೊಂದಿರುವ ಭೂಮಿಯ ವಿಸ್ತೀರ್ಣ ತುಂಬಾ ಕಡಿಮೆಯಿದೆ. ಒಟ್ಟು 101 ಪರಿಶಿಷ್ಟ ಜಾತಿಗಳ ಕುಟುಂಬಗಳಲ್ಲಿ 0–5 ಎಕರೆ ವಿಸ್ತೀರ್ಣದ ಭೂಮಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 26,77,726 (ಶೇ. 96.98). ಇದರಲ್ಲಿ ಭೂರಹಿತ ಕುಟುಂಬಗಳೂ ಸೇರಿವೆ ಎಂಬುದನ್ನು ಗಮನಿಸಿ. 5ರಿಂದ 15 ಎಕರೆ ಭೂಮಿ ಹೊಂದಿದ ಕುಟುಂಬಗಳ ಸಂಖ್ಯೆ 60,199 (ಶೇ. 2,18) ಮಾತ್ರ. 15 ಎಕರೆ ಮತ್ತು ಅದಕ್ಕಿಂತ ಅಧಿಕ ಭೂಮಿ ಹೊಂದಿದ ಮಧ್ಯಮ ಮತ್ತು ದೊಡ್ಡ ಹಿಡುವಳಿದಾರ ಕುಟುಂಬಗಳ ಸಂಖ್ಯೆ ಕೇವಲ 23,050 (ಶೇ. 0.84). ಇವರ ಬಳಿ ಒಟ್ಟು 1.89 ಲಕ್ಷ ಹೆಕ್ಟೇರ್ ಭೂಮಿ ಇದೆ.

ಈ ಹಿಡುವಳಿಗಳ ಆರ್ಥಿಕ ಸಾಮರ್ಥ್ಯ ಕಡಿಮೆ. ಈ ಹಿಡುವಳಿಗಳಲ್ಲಿ ಬಂಡವಾಳ ಹೂಡುವುದು, ಹೆಚ್ಚು ಆದಾಯ ಪಡೆಯುವುದು ಸಾಧ್ಯವಿಲ್ಲ. ಪರಿಶಿಷ್ಟ ಜಾತಿಯ ಅನೇಕ ಜಾತಿಗಳಿಗೆ ಭೂಮಿಯಿದ್ದರೂ ಅದರಿಂದ ಅವರಿಗೆ ಹೆಚ್ಚು ವರಮಾನ ದೊರೆಯುತ್ತಿಲ್ಲ. ಏಕೆಂದರೆ ಅವು ಆರ್ಥಿಕವಾಗಿ ಲಾಭದಾಯಕ ಹಿಡುವಳಿಗಳಲ್ಲ ಎಂದೂ ವರದಿಯಲ್ಲಿ ಹೇಳಲಾಗಿದೆ.

ಶೇ.21 ಕುಟುಂಬಗಳಿಗೆ ಸ್ವಂತ ವಾಸದ ಮನೆ ಇಲ್ಲ

ಸಮುದಾಯವೊಂದರ ಆರ್ಥಿಕ ಸ್ಥಿತಿಯನ್ನು ತಿಳಿಸುವ ಮತ್ತೊಂದು ಸೂಚಿ ಅಂದರೆ ಕುಟುಂಬಗಳು ಹೊಂದಿರುವ ವಾಸದ ಮನೆಗಳು. ವಾಸದ ಮನೆಗೆ ಸಂಬಂಧಿಸಿದ ಮಾಹಿತಿ ಪ್ರಕಾರ ಪರಿಶಿಷ್ಟ ಜಾತಿ ಕುಟುಂಬಗಳ ಸಂಖ್ಯೆ 27,25,585. ಈ ಕುಟುಂಬಗಳಲ್ಲಿ ವಾಸದ ಮನೆ ಹೊಂದಿದ ಕುಟುಂಬಗಳ ಸಂಖ್ಯೆ 25,35,748 (ಶೇ. 93.03). ಇವರು ವಾಸಿಸುವ ಎಲ್ಲಾ ಮನೆಗಳೂ ಅವರ ಸ್ವಂತ ಮನೆಗಳಲ್ಲ ಎಂಬುದನ್ನು ಗಮನಿಸಬೇಕು. ಇನ್ನು ವಾಸಕ್ಕೆ ಮನೆ ಇಲ್ಲದ ಕುಟುಂಬಗಳು 1,89,837 (ಶೇ. 6.97). ಪರಯಾನ್ ಪರಯ್ಯಾ, ಆಡಿಯ ಜಾತಿಗಳಲ್ಲಿನ ಶೇ. 40ಕ್ಕೂ ಹೆಚ್ಚಿನ ಕುಟುಂಬಗಳಿಗೆ ವಾಸದ ಮನೆಯಿಲ್ಲ. ಒಟ್ಟು ಪರಿಶಿಷ್ಟ ಜಾತಿ ಕುಟುಂಬಗಳಲ್ಲಿ ಶೇ. 79.10 ಕುಟುಂಬಗಳು ಸ್ವಂತ ವಾಸದ ಮನೆ ಹೊಂದಿವೆ. ಶೇ. 18.69ರಷ್ಟು ಕುಟುಂಬಗಳು ಗುಡಿಸಲಿನಲ್ಲಿ ವಾಸಿಸುತ್ತಿವೆ.

ಹಾಗಾದರೆ, ಭೂಮಿ ಮತ್ತು ವಸತಿ ವಿಷಯದಲ್ಲಿ ನಮ್ಮ ಬೇಡಿಕೆ ಏನಿರಬೇಕು? ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಆದ್ಯತೆಯೊಂದಿಗೆ ಭೂರಹಿತ ಮತ್ತು ಬಡ ರೈತ ಕುಟುಂಬಗಳಿಗೆ ಕೃಷಿಯೋಗ್ಯ ಬಂಜರು ಭೂಮಿಯನ್ನು ಉಚಿತವಾಗಿ ಹಸ್ತಾಂತರಿಸಬೇಕು. ಭೂಮಿಯ ಮೇಲೆ ಮಹಿಳೆಯರ ಸಮಾನ ಹಕ್ಕು ಸೇರಿದಂತೆ ಜಂಟಿ ಪಟ್ಟಾಗಳನ್ನು ವಿತರಿಸಬೇಕು. ಗ್ರಾಮೀಣ ಮತ್ತು ನಗರ ಭೂರಹಿತರ ಎಲ್ಲಾ ವಿಭಾಗಗಳಿಗೆ ಮನೆ ನಿವೇಶನಗಳು ಮತ್ತು ಮನೆಯ ಹಿತ್ತಲು ನಿವೇಶನಕ್ಕೆ ಭೂಮಿಯನ್ನು ಒದಗಿಸಬೇಕು.

ಪರಿಶಿಷ್ಟರ ಶೇ. 1.4 ರಷ್ಟು ಜನರಿಗೆ ಮಾತ್ರ ಸರ್ಕಾರಿ ಉದ್ಯೋಗ

ಕರ್ನಾಟಕ ಸರ್ಕಾರದ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆ ಮತ್ತು ಪ್ರಮಾಣ ಈ ರೀತಿ ಇದೆ. (ಕೆ. ರತ್ನಪ್ರಭ ಸಮಿತಿ ವರದಿಯಲ್ಲಿನ ಮಾಹಿತಿ):

1. 2018ರಲ್ಲಿ ಮಂಜೂರಾದ ಒಟ್ಟು ಹುದ್ದೆಗಳು– 7,65,859.
2. ಭರ್ತಿ ಮಾಡಿದ ಹುದ್ದೆಗಳು– 5,26,393.
3. ಭರ್ತಿಮಾಡಿದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಸಂಖ್ಯೆ– 85,427.
4. ಪರಿಶಿಷ್ಟ ಜಾತಿ ಮೀಸಲಾತಿ ಶೇ.15ರ ಪ್ರಕಾರ ಇರಬೇಕಾಗಿದ್ದ ಹುದ್ದೆಗಳ ಸಂಖ್ಯೆ– 1,14,879.
5. ವ್ಯತ್ಯಾಸ– 29,452.
6. ಮಂಜೂರಾದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಶೇ. ಪ್ರಮಾಣ 11.15.
7. ಕೊರತೆ ಶೇ. 3.85.

ಅಂದರೆ, ಶಾಸನಾತ್ಮಕವಾಗಿ ನೀಡಿರುವ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಉದ್ಯೋಗದಲ್ಲಿ ಪ್ರಾತಿನಿಧ್ಯವು ದೊರೆತಿಲ್ಲ. ಕರ್ನಾಟಕ ಸರ್ಕಾರದ 45 ಇಲಾಖೆಗಳಲ್ಲಿ ಇರುವ ಒಟ್ಟು ಸರ್ಕಾರಿ ಎ.ಬಿ.ಸಿ.ಡಿ ಉದ್ಯೋಗಗಳು:

1. ಮಂಜೂರಾದ ಒಟ್ಟು ಹುದ್ದೆಗಳು– 11,73,297.
2. ನೇಮಕ ನಡೆದಿರುವ ಹುದ್ದೆಗಳು ? 7,31,214.
3. **ನೇಮಕಾತಿಯಾಗದ ಖಾಲಿ ಹುದ್ದೆಗಳು– 4,42,686.**

ಕರ್ನಾಟಕ ಸರ್ಕಾರದ 45 ಇಲಾಖೆಗಳಲ್ಲಿ ಇರುವ ಪರಿಶಿಷ್ಟ ಜಾತಿಯ ಪ್ರಾತಿನಿಧ್ಯತೆಯ ಶೇ. 17ರಷ್ಟು ಸರ್ಕಾರಿ ಎ,ಬಿ,ಸಿ,ಡಿ ಉದ್ಯೋಗಗಳು:

1. ಮಂಜೂರಾದ ಒಟ್ಟು ಹುದ್ದೆಗಳು– 1,99,460.

ಕರ್ನಾಟಕ ಸರ್ಕಾರದ 45 ಇಲಾಖೆಗಳಲ್ಲಿ ಇರುವ ಒಟ್ಟು ಸರ್ಕಾರಿ ಉದ್ಯೋಗಗಳು

ಕ್ರ.ಸ.	ಹುದ್ದೆಗಳ ವಿವರ	A	B	C	D	ಒಟ್ಟು
1	ಸರ್ಕಾರ ಮಂಜೂರು ಮಾಡಿರುವ ಹುದ್ದೆಗಳು	51,550	81,754	8,15,405	2,24,588	**11,73,297**
2	ನೇಮಕಾತಿ ಮಾಡಿರುವ ಹುದ್ದೆಗಳು	32,121	51,394	5,66,927	80,772	**7,31,214**
3	ನೇಮಕಾತಿ ಯಾಗದಿರುವ ಖಾಲಿ ಹುದ್ದೆಗಳು	18,918	30,610	2,48,491	1,43,667	**4,41,686**

ಕರ್ನಾಟಕ ಸರ್ಕಾರದ 45 ಇಲಾಖೆಗಳಲ್ಲಿ ಇರುವ ಪರಿಶಿಷ್ಟ ಜಾತಿಯ ಸರ್ಕಾರಿ ಉದ್ಯೋಗಗಳು

ಕ್ರ.ಸ.	ಹುದ್ದೆಗಳ ವಿವರ	A	B	C	D	ಒಟ್ಟು
1	ಪರಿಶಿಷ್ಟ ಜಾತಿಯ ಪ್ರಾತನಿಧ್ಯತೆ ಶೇ.17%ರಷ್ಟು	8764	13898	138619	38180	**1,99,460**
2	ನೇಮಕಾತಿ ಮಾಡಿರುವ ಪರಿಶಿಷ್ಟ ಜಾತಿಯ ಹುದ್ದೆಗಳು	6,468	10,424	1,02,920	27,860	**1,47,672**
3	ನೇಮಕಾತಿ ಮಾಡದೇ ಇರುವ ಪರಿಶಿಷ್ಟ ಜಾತಿಯ ಹುದ್ದೆಗಳು	2296	3474	35699	10320	**51,788**

2. ನೇಮಕ ನಡೆದಿರುವ ಹುದ್ದೆಗಳು– 1,47,672.
3. **ನೇಮಕಾತಿಯಾಗದ ಖಾಲಿ ಹುದ್ದೆಗಳು– 51,788.**

ಅಂದರೆ, ಸರ್ಕಾರದ ಈ 45 ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಿದರೆ, ಪರಿಶಿಷ್ಟ ಜಾತಿಯ 51,788 ಯುವಜನರಿಗೆ ಸರ್ಕಾರಿ ಉದ್ಯೋಗ ಸಿಗುತ್ತಿತ್ತು.

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಿದೆ. ಪರಿಶಿಷ್ಟ ಜಾತಿಯ ಒಟ್ಟಾರೆ ಜನಸಂಖ್ಯೆ 1.05 ಕೋಟಿ. ಅದರಲ್ಲಿ ಸರ್ಕಾರಿ ಉದ್ಯೋಗ ಪಡೆದ ಪರಿಶಿಷ್ಟ ಜಾತಿ ಜನರು 1.47 ಲಕ್ಷ. ಅಂದರೆ ಪರಿಶಿಷ್ಟರ ಶೇ. 1.4ರಷ್ಟು ಜನರಿಗೆ ಮಾತ್ರ ಸರ್ಕಾರಿ ಉದ್ಯೋಗ ದಕ್ಕಿದೆ. ಎಲ್ಲರಿಗೂ ಸರ್ಕಾರಿ ಉದ್ಯೋಗಗಳನ್ನು ಕೊಡಲು ಸಾಧ್ಯವಿಲ್ಲ ಎಂಬುದು ನಿಜವಾದರೂ, ಎಲ್ಲಾ 101 ಪರಿಶಿಷ್ಟ ಜಾತಿಗಳ ಉಳಿದ ಶೇ. 98.5 ಜನರಿಗೆ ಸಾಮಾಜಿಕ ನ್ಯಾಯ ಹೇಗೆ ಸಾಧ್ಯ?

ಕರ್ನಾಟಕ ಸರ್ಕಾರದ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆ ಮತ್ತು ಪ್ರಮಾಣ
(ಕೆ. ರತ್ನಪ್ರಭ ಸಮಿತಿ ವರದಿಯಲ್ಲಿನ ಮಾಹಿತಿ)

ವರ್ಷ	ಮಂಜೂರಾದ ಹುದ್ದೆಗಳು	ಭರ್ತಿ ಮಾಡಿದ ಹುದ್ದೆಗಳು	ಭರ್ತಿ ಮಾಡಿದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಸಂಖ್ಯೆ	ಪರಿಶಿಷ್ಟ ಜಾತಿ ಮೀಸಲಾತಿ ಶೇ.15ರ ಪ್ರಕಾರ ಇರಬೇಕಾಗಿದ್ದ ಹುದ್ದೆಗಳ ಸಂಖ್ಯೆ	ವ್ಯತ್ಯಾಸ (5–6)	ಮಂಜೂರಾದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಶೇಕಡ ಪ್ರಮಾಣ (5/1)	ಪ್ರಾತಿನಿಧ್ಯದ ಕೊರತೆಯ ಶೇಕಡ ಪ್ರಮಾಣ
1990	455948	401926	55061	68392	46274	12.07	2.93
2000	573062	489212	67189	85959	18770	11.72	3.28
2010	667756	546691	92675	100163	77488	13.87	1.13
2015	740653	541289	97022	111098	14076	13.09	1.91
2016	745593	523574	79401	111839	32438	10.65	4.35
ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮಾಹಿತಿ 2017 ಮತ್ತು 2018							
2017	742370	516268	81318	111356	30038	10.95	4.05
2018	765859	526393	85427	114879	29452	11.15	3.85

ಒಟ್ಟು ಸರ್ಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿ ಪ್ರಾತಿನಿಧ್ಯವನ್ನು ಮೇಲಿನ ಕೋಷ್ಟಕಗಳಲ್ಲಿ ತೋರಿಸಲಾಗಿದೆ. ಸರ್ಕಾರಿ ಹುದ್ದೆಗಳಲ್ಲಿ ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಶ್ರೇಣಿಗಳಿವೆ. ಪ್ರತಿ ಶ್ರೇಣಿಯಲ್ಲಿ ಪರಿಶಿಷ್ಟ ಜಾತಿಯ ಪ್ರಾತಿನಿಧ್ಯದ ವಿವರಗಳನ್ನು ನೀಡಲಾಗಿದೆ.

ಒಟ್ಟಾರೆಯಾಗಿ ನಾವೀಗ ಮಾಡಬೇಕಾದ್ದು, ಖಾಲಿ ಇರುವ 4,42,686 ಹುದ್ದೆಗಳ ನೇಮಕಾತಿ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು. ಇದಕ್ಕಾಗಿ ಪರಿಶಿಷ್ಟ ಜಾತಿಯ 101 ಜಾತಿಗಳ ಜನರೂ ಸೇರಿದಂತೆ ಎಲ್ಲಾ ಜಾತಿಗಳ, ಎಲ್ಲಾ ಧರ್ಮಗಳ ಜನರೂ ಹೋರಾಟ ನಡೆಸಬೇಕು. ಈ ರೀತಿ ನೇಮಕಾತಿಯಾದರೆ, ಪರಿಶಿಷ್ಟ ಜಾತಿಗೆ ಮೀಸಲಿರುವ 51,788 ಹುದ್ದೆಗಳು ಅವರಿಗೆ ಸಿಗುತ್ತವೆ.

ಕ್ಷೀಣಿಸುತ್ತಿರುವ ಮೀಸಲಾತಿ ಉದ್ಯೋಗಗಳು

ಸರ್ಕಾರಿ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಮತ್ತು, ಆಳುವವರು ಅನುಸರಿಸುತ್ತಿರುವ ಖಾಸಗೀಕರಣ ಮತ್ತು ನವ ಉದಾರವಾದಿ ನೀತಿಗಳಿಂದಾಗಿ, ಸರ್ಕಾರದ ಇಲಾಖೆಗಳು ಮತ್ತು ಸರ್ಕಾರಿ ಒಡೆತನದ ಸಂಸ್ಥೆಗಳಲ್ಲಿ ಉದ್ಯೋಗಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿವೆ. ಉದ್ಯೋಗಿಗಳು ಅತ್ಯಗತ್ಯವಾಗಿರುವ ಕಡೆಗಳಲ್ಲಿ ಖಾಯಂ ಉದ್ಯೋಗ ನೇಮಕಾತಿ ಬದಲಿಗೆ, ಹೊರಗುತ್ತಿಗೆ, ದಿನಗೂಲಿ ಮತ್ತು ಕಾಂಟ್ರಾಕ್ಟ್ ಪದ್ಧತಿಯನ್ನು ಅನುಸರಿಸಬೇಕೆಂಬ ಕಾರ್ಪೊರೇಟ್ ಪರ 'ಆಡಳಿತ ಸುಧಾರಣಾ ನೀತಿ'ಗಳನ್ನು ಸರ್ಕಾರ ಅನುಸರಿಸುತ್ತಿದೆ. ಇದು ಹೀಗೆಯೇ ಮುಂದುವರೆದರೆ ಪರಿಶಿಷ್ಟರ ಪಾಲಿನ ಉದ್ಯೋಗಗಳ ಪ್ರಮಾಣ ಮತ್ತಷ್ಟು ಕ್ಷೀಣಿಸುತ್ತದೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರವು ಉದ್ಯೋಗ ಸೃಷ್ಟಿ ಮಾಡುವ ಬದಲು, ಇರುವ ಉದ್ಯೋಗಗಳನ್ನೇ ನಾಶಮಾಡತೊಡಗಿದೆ.

ಅಳಿದುಳಿದ ಉದ್ಯೋಗಗಳಲ್ಲಿ ತಮ್ಮ ಪಾಲಿನ ಉದ್ಯೋಗಕ್ಕಾಗಿ ಜಾತಿ, ಜಾತಿಗಳು ಪರಸ್ಪರ ಕಚ್ಚಾಡುವಂತೆ ಮಾಡುತ್ತಿದೆ.

ಅದೇ ಸಂದರ್ಭದಲ್ಲಿ ಮೀಸಲಾತಿಯ ಮೂಲಕ ಈ ಸಮುದಾಯಗಳು ಪಡೆಯುತ್ತಿದ್ದ ಶಿಕ್ಷಣದ ಫಲಗಳು ಅವರಿಗೆ ಸಿಗದಂತೆ ಸರ್ಕಾರಗಳು ತಮ್ಮ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳ ಜಾರಿಯ ಮೂಲಕ ಮಾಡುತ್ತಿವೆ. ಶಿಕ್ಷಣದ ಖಾಸಗೀಕರಣವನ್ನು ಪ್ರೋತ್ಸಾಹಿಸಲಾಗುತ್ತಿದೆ. ಪ್ರಾಥಮಿಕ ಶಾಲೆಗಳನ್ನು ವಿದ್ಯಾರ್ಥಿಗಳ ಕೊರತೆಯ ಹೆಸರಿನಲ್ಲಿ ಮುಚ್ಚಲಾಗುತ್ತಿದೆ.

ಆಳುವವರ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (ಎಲ್‌ಪಿಜಿ) ನೀತಿಗಳಿಂದಾಗಿ, ಸರ್ಕಾರಿ ಒಡೆತನದ ಉದ್ದಿಮೆಗಳು ಸ್ವದೇಶಿ ಮತ್ತು ವಿದೇಶಿ ಖಾಸಗಿ ಬಂಡವಾಳಗಾರರ ಪಾಲಾಗುತ್ತಿವೆ. ಉತ್ಪಾದನಾ ವಲಯ, ಸೇವಾ ವಲಯ, ವಿಮಾ ವಲಯ, ಹಣಕಾಸು ವಲಯ, ರಸ್ತೆ ಸಾರಿಗೆ, ರೈಲು ಮಾರ್ಗ... ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬಂಡವಾಳ ಹೂಡಲು ಸ್ವದೇಶಿ ಮತ್ತು ವಿದೇಶಿ ಖಾಸಗಿ ಬಂಡವಾಳಗಾರರಿಗೆ ಮುಕ್ತ ಅವಕಾಶ ಕೊಡಲಾಗಿದೆ. **ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಇಲ್ಲದ ಕಾರಣ, ಮೀಸಲಾತಿ ಸೌಲಭ್ಯ ನಿಧಾನವಾಗಿ ಕಣ್ಮರೆಯಾಗುವ ಅಪಾಯವಿದೆ.** ಈ ಕಾರಣದಿಂದಾಗಿಯೇ, ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ನಿಯಮ ಜಾರಿಗೆ ತರಬೇಕೆಂಬ ಹೋರಾಟಗಳು ನಡೆಯುತ್ತಿವೆ.

ಸಾಕ್ಷರತಾ ಪ್ರಮಾಣ ಶೇ. 65.33

ನ್ಯಾ. ದಾಸ್ ಅವರ ವರದಿಯಲ್ಲಿ ಹೇಳಿರುವಂತೆ, ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ ಒಟ್ಟು ಸಾಕ್ಷರತಾ ಪ್ರಮಾಣ ಶೇ. 75.60. ಆದರೆ, ಪರಿಶಿಷ್ಟ ಜಾತಿ ಸಾಕ್ಷರತಾ ಪ್ರಮಾಣ ಶೇ. 65.33. ಇಲ್ಲಿನ ಅಸಮಾನತೆಯ ಪ್ರಮಾಣ ಶೇ. 10.27.

ಭಾರತದ ಸಂವಿಧಾನದಲ್ಲಿ ಶಿಕ್ಷಣ ಮೂಲಭೂತ ಹಕ್ಕಾಗಲಿಲ್ಲ. ಬದಲಾಗಿ ಅನುಚ್ಛೇದ 45ರಲ್ಲಿ ಶಿಕ್ಷಣವು ಪ್ರಭುತ್ವನಿರ್ದೇಶನ ತತ್ವಗಳಡಿಯಲ್ಲಿ ಸೇರಲ್ಪಟ್ಟಿತ್ತು. ಅದರಂತೆ: "ಭಾರತದ ಸಂವಿಧಾನವು ಜಾರಿಗೆ ಬಂದ ಹತ್ತು ವರ್ಷಗಳೊಳಗಾಗಿ ಎಲ್ಲಾ ಮಕ್ಕಳಿಗೆ 14 ವರ್ಷದ ವಯಸ್ಸಿನ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ರಾಜ್ಯ ಸರ್ಕಾರಗಳು ನೀಡಲು ಪ್ರಯತ್ನಿಸಬೇಕು".

ದೇಶದಲ್ಲಿ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಒಕ್ಕೂಟ ಸರ್ಕಾರವು 1948ರಿಂದ 2009 ರವರೆಗೆ 6 ಆಯೋಗಗಳನ್ನು ರಚಿಸಿತು. ಈ ಆಯೋಗಗಳು ದೇಶದ ಒಟ್ಟು ಜಿಡಿಪಿಯಲ್ಲಿ ಶೇ.6ರಷ್ಟು ಹಣವನ್ನು ಶಿಕ್ಷಣಕ್ಕಾಗಿ ಮೀಸಲಿಡಬೇಕೆಂದು ಸೂಚಿಸಿವೆ. ಆದರೆ, ನಮ್ಮ ಸರ್ಕಾರ ಶಿಕ್ಷಣಕ್ಕೆ ಮಾಡುವ ಖರ್ಚು ಶೇ. 3.5 ರಷ್ಟನ್ನು ದಾಟಲಿಲ್ಲ.

ಗುಣಮಟ್ಟದ ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ ಮತ್ತು ವಸತಿ ಇವುಗಳು ಹಕ್ಕುಗಳಾಗಬೇಕು. ಖಾಸಗಿ ವಲಯದಲ್ಲಿ ಮೀಸಲಾತಿ ಬರಬೇಕು. ಇವುಗಳನ್ನು ಸಾಧಿಸಿದರೆ ಮಾತ್ರ ದಲಿತರು ಮತ್ತು ಇತರ ದುರ್ಬಲ ವರ್ಗಗಳು ಮೀಸಲಾತಿಯ ಮಿತಿಗಳನ್ನು ದಾಟಿ ತಮ್ಮ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಶಕ್ತಿ ಬರುತ್ತದೆ.

ಇವೆಲ್ಲ ಈಗ ದೇಶದಲ್ಲಿ ಅನುಸರಿಸಲಾಗುತ್ತಿರುವ ನವ–ಉದಾರವಾದಿ ಆಳ್ವಿಕೆ ಒಲ್ಲದ ವಿಷಯಗಳು. ಆದ್ದರಿಂದ ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳ ನವ ಉದಾರವಾದಿ "ಸುಧಾರಣಾ ನೀತಿಗಳ" ವಿರುದ್ಧ, ದೇಶದ ಸಂಪತ್ತಿನಲ್ಲಿ ದಮನಿತರ ಪಾಲನ್ನು ಕಸಿಯುವ ಕಾರ್ಪೊರೇಟ್–ಪರ ನೀತಿಗಳ ವಿರುದ್ಧ ಹೋರಾಟ ನಡೆಯಬೇಕಾಗಿದೆ. ಮತ್ತು ಇದರಲ್ಲಿ ಪರಿಶಿಷ್ಟ ಜಾತಿಗಳ ಎಲ್ಲಾ ಸಮುದಾಯಗಳು, ಒಬಿಸಿಗಳೂ ಮತ್ತು ಎಲ್ಲಾ ಬಡವರು ಮತ್ತು ದಮನಿತರು ಜಾತಿ, ಧರ್ಮ, ಭಾಷೆ, ಪ್ರದೇಶ ಎಂಬ ಬೇಧವಿಲ್ಲದೆ ಕೈಜೋಡಿಸಿ ಒಗ್ಗಟ್ಟಿನ ಹೋರಾಟ ನಡೆಸುವ ಅಗತ್ಯವಿದೆ.

●

ಎನ್‌ಡಿಎ ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಆರೆಸ್ಸೆಸ್‌ನ ಸಿ.ಪಿ.ರಾಧಾಕೃಷ್ಣನ್

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿರುವ ಸಿ.ಪಿ.ರಾಧಾಕೃಷ್ಣನ್ ಚಿಕ್ಕ ವಯಸ್ಸಿನಿಂದಲೂ ಆರ್‌ಎಸ್‌ಎಸ್ ಪ್ರಚಾರಕರಾಗಿ ಕೆಲಸ ಮಾಡುತ್ತಿದ್ದವರು. ರಾಜ್ಯಪಾಲರಾಗಿ ನೇಮಕಗೊಂಡ ನಂತರವೂ ಅವರು ಅದೇ ಕೆಲಸವನ್ನು ಮುಂದುವರೆಸಿದರು. ಜಾರ್ಖಂಡ್ ಮತ್ತು ಮಹಾರಾಷ್ಟ್ರ ರಾಜ್ಯಪಾಲರಾಗಿದ್ದ ಅವಧಿಯಲ್ಲಿ ತಮ್ಮ ರಾಜ್ಯ ತಮಿಳುನಾಡಿಗೆ ಹೋದಾಗಲೆಲ್ಲ ಬಿಜೆಪಿ ರಾಜ್ಯಾಧ್ಯಕ್ಷರಂತೆ ತಮಿಳುನಾಡು ಸರ್ಕಾರದ ವಿರುದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ರಾಜ್ಯಪಾಲ ಹುದ್ದೆಗೆ ಕನಿಷ್ಠ ಗುಣಲಕ್ಷಣಗಳನ್ನು ಅವರು ಅನುಸರಿಸಲಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ, ಆರೆಸ್ಸೆಸ್ ವ್ಯಕ್ತಿಯೊಬ್ಬರು ಉಪರಾಷ್ಟ್ರಪತಿ ಆಗದಿರುವುದು ಭಾರತಕ್ಕೆ ಒಳ್ಳೆಯದು. ಸಂವಿಧಾನವನ್ನು ರಕ್ಷಿಸಬೇಕಾದರೆ, ಸಂವಿಧಾನವನ್ನು ಗೌರವಿಸಲು ತಿಳಿದಿರುವ ಯಾರಾದರೂ ಉಪರಾಷ್ಟ್ರಪತಿ ಆಗುವುದು ಸೂಕ್ತವಾಗಿದೆ.



ಜುಲೈ 21 ರಂದು ಜಗದೀಪ್ ಧಂಖರ್ ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಮುಂದಿನ ಉಪರಾಷ್ಟ್ರಪತಿಯವರನ್ನು ಆಯ್ಕೆ ಮಾಡುವ ಚುನಾವಣೆ ಸೆಪ್ಟೆಂಬರ್ 9ರಂದು ನಡೆಯಲಿದೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಮತ್ತು ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಯಾಗಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಸ್ಪರ್ಧಿಸುತ್ತಿದ್ದಾರೆ. ಈ ಹಿಂದೆ ತಮಿಳುನಾಡು ಬಿಜೆಪಿಯ ರಾಜ್ಯಾಧ್ಯಕ್ಷರಾಗಿದ್ದ ಸಿ.ಪಿ.ರಾಧಾಕೃಷ್ಣನ್ ಅವರು ಪ್ರಸ್ತುತ ಮಹಾರಾಷ್ಟ್ರ ರಾಜ್ಯಪಾಲರಾಗಿದ್ದಾರೆ.

ಕೊಯಮತ್ತೂರು ಕೋಮು ಗಲಭೆ ನಂತರ ಸಂಸದರಾದರು

ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್ ಅವರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಆರ್‌ಎಸ್‌ಎಸ್‌ನಲ್ಲಿ ಸಕ್ರಿಯರಾಗಿದ್ದರು. 1996ರಲ್ಲಿ, ಅವರನ್ನು ತಮಿಳುನಾಡಿನಲ್ಲಿ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಫೆಬ್ರವರಿ 14, 1998ರಂದು ಕೊಯಮತ್ತೂರಿನಲ್ಲಿ ನಡೆದ ಬಾಂಬ್ ಸ್ಫೋಟ ಘಟನೆ ಸಿ.ಪಿ.ರಾಧಾಕೃಷ್ಣನ್ ಅವರ ಜೀವನದಲ್ಲಿ ಒಂದು ಪ್ರಮುಖ ತಿರುವು ಪಡೆಯಿತು. ಕೊಯಮತ್ತೂರಿನಲ್ಲಿ ಸೆಲ್ವರಾಜ್ ಎಂಬ ಪೊಲೀಸ್ ಅಧಿಕಾರಿಯ ಹತ್ಯೆಯ ನಂತರ, ಆರ್‌ಎಸ್‌ಎಸ್–ಬಿಜೆಪಿ ಪರಿವಾರವು ದೊಡ್ಡ ಹಿಂಸಾಚಾರದಲ್ಲಿ ತೊಡಗಿತು. ಕ್ರಿಶ್ಚಿಯನ್ ಆಗಿದ್ದ ಸೆಲ್ವರಾಜ್‌ನನ್ನು ಹಿಂದೂ ಎಂದು ಕರೆದು ಗಲಭೆ ಎಬ್ಬಿಸಿದರು. ಪೊಲೀಸ್ ಕಾನ್‌ಸ್ಟೆಬಲ್ ಹತ್ಯೆಯ ನಂತರ ಪೊಲೀಸರ ಒಂದು ವಿಭಾಗವು ಹಿಂದೂ ಮುನ್ನಾನಿ ಮತ್ತು ಹಿಂದೂ ಮಕ್ಕಳ್ ಕಚ್ಚಿ ಸದಸ್ಯರೊಂದಿಗೆ ಸೇರಿಕೊಂಡು ಗಲಭೆ ನಡೆಸಿತು.

ಅಂತಹ ಸಂಕೀರ್ಣ ಸಮಯದಲ್ಲಿ ಮತ್ತು ಯಾವುದೇ ವಿಷಯದ ಬಗ್ಗೆ ಸಿ.ಪಿ.ರಾಧಾಕೃಷ್ಣನ್ ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿ ಸದಸ್ಯರಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಯೇ ಹೊರತು, ತಮಿಳುನಾಡು ಮತ್ತು ತಮಿಳುನಾಡಿನ ಜನರನ್ನು ಬಾಧಿಸುವ ಸಮಸ್ಯೆಗಳ ಬಗ್ಗೆ ಅವರು ಎಂದಿಗೂ ತಮಿಳುನಾಡಿನವರಾಗಿ ಮಾತನಾಡಿಲ್ಲ. ಸ್ಫೋಟದ ನಂತರ, ಹಿಂದೂ ಸಮುದಾಯದ ಮತಗಳನ್ನು ಸೆಳೆದು, ಸಂಸತ್ ಚುನಾವಣೆಯಲ್ಲಿ 1,50,000 ಮತಗಳ ಭಾರಿ ಅಂತರದಿಂದ ಸಿ.ಪಿ. ರಾಧಾಕೃಷ್ಣನ್ ಗೆದ್ದರು. ಇದು ತಮಿಳುನಾಡಿನಲ್ಲಿ ಬಿಜೆಪಿಯ ರಾಜಕೀಯ ಇತಿಹಾಸದಲ್ಲಿ ಮಹತ್ವದ ಗೆಲುವು.

ಮಿತ್ರ ಪಕ್ಷಗಳ ಜೊತೆಗೂ ಸಮಾಲೋಚನೆ ನಡೆಸಲಿಲ್ಲ

ಸಿ.ಪಿ.ರಾಧಾಕೃಷ್ಣನ್ ಅವರನ್ನು ಆಯ್ಕೆಮಾಡಲು ವಿರೋಧ ಪಕ್ಷಗಳು ಸೇರಿದಂತೆ ಎಲ್ಲಾ ಪಕ್ಷಗಳು ಒಗ್ಗಟ್ಟಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆದರೆ ಅಭ್ಯರ್ಥಿಯ ಹೆಸರನ್ನು ಘೋಷಿಸುವ ಮೊದಲು, ಬಿಜೆಪಿ ಯಾವುದೇ ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಿಲ್ಲ. ಮಾತ್ರವಲ್ಲ, ಎನ್‌ಡಿಎ ಪಕ್ಷಗಳ ಜೊತೆಗೂ ಅವರು ಸಮಾಲೋಚನೆ ನಡೆಸಲಿಲ್ಲ. ಆರ್‌ಎಸ್‌ಎಸ್‌ಗೆ ಸೇರಿದವರು ಎಂಬ ಒಂದೇ ಕಾರಣಕ್ಕಾಗಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಕಣಕ್ಕಿಳಿಸಲಾಗಿದೆ. ಅವರನ್ನು ಏಕೆ ಕಣಕ್ಕಿಸಲಾಯಿತು ಎಂಬ ಪ್ರಶ್ನೆಗೆ ಕೇಂದ್ರ ಸಚಿವ ಕಿರಣ್ ರಿಜಿಜು ಅವರು, "ರಾಧಾಕೃಷ್ಣನ್ ಎಂಬುದು ತುಂಬಾ ಒಳ್ಳೆಯ ಹೆಸರು" ಎಂಬ ವಿಚಿತ್ರವಾದ ಕಾರಣ ನೀಡುತ್ತಾರೆ.

ಜಗದೀಪ್ ಧಂಖರ್ ಅವರನ್ನು ಎಲ್ಲಿಗೆ ಕಳುಹಿಸಿದರು?

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸದ ಎಸ್.ವೆಂಕಟೇಶನ್ ಅವರು ಹೇಳಿರುವಂತೆ, ಹಠಾತ್ತನೆ ರಾಜೀನಾಮೆ ನೀಡಿದ ಜಗದೀಪ್ ಧಂಖರ್ ಅವರು ಸಂಸತ್ತಿನ ಕಟ್ಟಡದಿಂದ ಮಧ್ಯಾಹ್ನ 2 ಗಂಟೆಗೆ ಹೊರಟರು. ಆ ನಂತರ ಅವರಿಗೆ ಏನಾಯಿತು ಎಂಬುದು ದೇಶಕ್ಕೆ ಇನ್ನೂ ತಿಳಿದಿಲ್ಲ. ರಾಜೀನಾಮೆ ನೀಡಿದ ಧಂಖರ್ ಅವರನ್ನು ಕಳುಹಿಸಲು ಎಷ್ಟು ಕೇಂದ್ರ ಸಚಿವರು ಹೋಗಿದ್ದರು, ಅವರನ್ನು ಎಲ್ಲಿಗೆ ಕಳುಹಿಸಿದರು? ಈ ಪ್ರಶನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ.

ತಮಿಳುನಾಡಿನ ಎಲ್ಲಾ ಪಕ್ಷಗಳು ಯಾಕಾಗಿ ಬೆಂಬಲಿಸಬೇಕು?

ಈ ನಡುವೆ, ತಮಿಳಿಗರೊಬ್ಬರು ಉಪರಾಷ್ಟ್ರಪತಿ ಹುದ್ದೆ ಅಲಂಕರಿಸುವ ಅವಕಾಶ ಪಡೆದಿದ್ದಾರೆ. ಆದ್ದರಿಂದ, ತಮಿಳುನಾಡಿನ ಎಲ್ಲಾ ಪಕ್ಷಗಳು ಒಟ್ಟಾಗಿ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಮತ ನೀಡಿ ಅವರನ್ನು ಗೆಲ್ಲಿಸಬೇಕು ಎಂದು ಎಡಪ್ಪಾಡಿ ಪಳನಿಸ್ವಾಮಿಯಿಂದ ಆರಂಭಿಸಿ ನೈನಾರ್ ನಾಗೇಂದ್ರನ್‌ವರೆಗೆ ಮಾತನಾಡತೊಡಗಿದ್ದಾರೆ. ತಮಿಳುನಾಡಿನ ಎಲ್ಲಾ ಪಕ್ಷಗಳು ಸಿ.ಪಿ.ರಾಧಾಕೃಷ್ಣನ್ ಅವರನ್ನು ಯಾಕಾಗಿ ಬೆಂಬಲಿಸಬೇಕು? ಮಧುರೈ ಏಮ್ಸ್ ಆಸ್ಪತ್ರೆಯ ವಿಳಂಬದ ಬಗ್ಗೆ ಅವರು ಎಂದಾದರೂ ಕೇಂದ್ರ ಸರ್ಕಾರವನ್ನು ಕೇಳಿದ್ದಾರೆಯೇ? ಭಾರತೀಯ ಪುರಾತತ್ವ ಸಮೀಕ್ಷೆ (ASI) ವೈಗೈ ನದಿ ಜಲಾನಯನ ಪ್ರದೇಶದಲ್ಲಿ ಸಮೀಕ್ಷೆ ನಡೆಸಿ, ಕೀಝಾಡಿಯ ಪುರಾತತ್ವ ಸಾಮರ್ಥ್ಯವನ್ನು ಗುರುತಿಸಿದೆ. ಕೀಝಾಡಿ ಉತ್ಖನನದ ವರದಿಯನ್ನು ಬಿಡುಗಡೆ ಮಾಡಲು ನಿರಾಕರಿಸಿದ ಮೋದಿ ಸರ್ಕಾರದ ವಿರುದ್ಧ ಅವರು ಧ್ವನಿ ಎತ್ತಿದ್ದಾರೆಯೇ? ಅರಿಟಪಟ್ಟಿ ಬೆಟ್ಟ ಪ್ರದೇಶವನ್ನು ಕೇಂದ್ರ ಸರ್ಕಾರ ವೇದಾಂತ ಕಂಪನಿಗೆ ಹಸ್ತಾಂತರಿಸಲು ಮುಂದಾದಾಗ, ಅವರು ವಿರೋಧ ವ್ಯಕ್ತಪಡಿಸಿದರೆ? ತಮಿಳುನಾಡು ವಿದ್ಯಾರ್ಥಿಗಳಿಗೆ ನೀಡಬೇಕಾದ 2,000 ಕೋಟಿ ರೂಪಾಯಿಗಳನ್ನು ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದಾಗ ಅವರು ಪೋಸ್ಟ್‌ಕಾರ್ಡ್ ಅನ್ನಾದರೂ ಕಳುಹಿಸಿದ್ದಾರೆಯೇ? ಅಷ್ಟೇ ಏಕೆ, ಅವರು ವಾಸಿಸುವ ಕೊಯಮತ್ತೂರು ಪ್ರದೇಶವು ಮೋದಿ ಸರ್ಕಾರದ ನೋಟು ಅಮಾನ್ಯೀಕರಣದಿಂದ ಸಂಪೂರ್ಣ ಅಪಮೌಲ್ಯಗೊಂಡಿದೆ. ಜಿಎಸ್‌ಟಿ ತೆರಿಗೆಯಿಂದ ನೇಯ್ಗೆ ಉದ್ಯಮದ ಬೆನ್ನುಮೂಳೆ ಮುರಿದುಹೋಯಿತು. ಮೋದಿ ಸರ್ಕಾರದ ನೀತಿಗಳಿಂದ ಜವಳಿ ಉದ್ಯಮವು ಸಂಪೂರ್ಣವಾಗಿ ನಾಶವಾಯಿತು, ನೂಲಿನ ಬೆಲೆಗಳು ಏರಿಕೆಯಾಗಿವೆ. ಆ ಸಮಯದಲ್ಲಿ, ಅವರು ಒಂದು ಮಾತನ್ನೂ ಹೇಳಲಿಲ್ಲ. ಅವರು ದಮನಕಾರಿ ಆರ್‌ಎಸ್‌ಎಸ್ ವ್ಯಕ್ತಿಯಾಗಿದ್ದರು ಮತ್ತು ತಮಿಳುನಾಡಿನ ಜನರಿಗಾಗಿ ಅವರು ಕನಸಿನಲ್ಲಿಯೂ ಮಾತನಾಡಲಿಲ್ಲ. ತಮಿಳು ಭಾಷೆಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದೆ, ಸಂಸ್ಕೃತ ಭಾಷೆಯ ಬಗ್ಗೆ ಕಾಳಜಿ ನೀಡಿದರು.

ಹಿಂದಿ ಹೇರಿಕೆಯ ವಿರುದ್ಧ ಮಹಾರಾಷ್ಟ್ರದ ಜನರ ಭಾವನೆಗಳನ್ನು ಗೌರವಿಸಲಿಲ್ಲ

ಸಿ.ಪಿ.ರಾಧಾಕೃಷ್ಣನ್ ಅವರು ಮಹಾರಾಷ್ಟ್ರ ರಾಜ್ಯದ ರಾಜ್ಯಪಾಲರಾಗಿದ್ದಾಗ, ಹಿಂದಿ ಹೇರಿಕೆಯ ವಿರುದ್ಧ ಮಹಾರಾಷ್ಟ್ರದಲ್ಲಿ ಪ್ರತಿಭಟನೆ ನಡೆಯಿತು. ಆ ಸಮಯದಲ್ಲಿ, ಅವರು ಮಹಾರಾಷ್ಟ್ರದ ಜನರ ಭಾವನೆಗಳನ್ನು ಗೌರವಿಸಲಿಲ್ಲ. ಇದಕ್ಕೆ ವಿರುದ್ಧವಾಗಿ, ಭಾಷಾ ದ್ವೇಷ ಇರಬಾರದು ಎಂದು ಅವರು ಅಲ್ಲಿನ ಜನರಿಗೆ ಬೋಧಿಸಿದರು. ಹಿಂದಿ ಹೇರಿಕೆಯ ವಿರುದ್ಧ ಭಾರಿ ಪ್ರತಿಭಟನೆ ನಡೆದ ತಮಿಳುನಾಡಿನಿಂದ ಬಂದ ಅವರು, ಮಹಾರಾಷ್ಟ್ರದ ಜನರ ಕಾನೂನುಬದ್ಧ ಧ್ವನಿಯನ್ನು ಆಲಿಸಿದ್ದಾರೆಯೇ?

ಸಿ.ಪಿ.ರಾಧಾಕೃಷ್ಣನ್ ಅವರನ್ನು ಉಪ ರಾಷ್ಟ್ರಪತಿಯನ್ನಾಗಿ ಮಾಡುವುದರಿಂದ ತಮಿಳುನಾಡು ವಿಧಾನಸಭಾ ಚುನಾವಣೆಗೆ ಸಹಾಯವಾಗುತ್ತದೆ ಮತ್ತು 'ಇಂಡಿಯ' ಮೈತ್ರಿಕೂಟಕ್ಕೆ ಬಿಕ್ಕಟ್ಟು ಉಂಟಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಅವರನ್ನು ಕಣಕ್ಕಿಳಿಸುವುದರಿಂದ ಬಿಜೆಪಿ ಅಥವಾ ಎಐಎಡಿಎಂಕೆ ಹೊರತುಪಡಿಸಿ ಒಂದೇ ಒಂದು ಹೆಚ್ಚುವರಿ ಮತ ಸಿಗುವುದಿಲ್ಲ. ತಮಿಳು ಮತ್ತು ತಮಿಳುನಾಡಿನ ಬಗ್ಗೆ ಅವರು ಹೇಳುತ್ತಿರುವುದು ಸುಳ್ಳು ಎಂದು ತಮಿಳುನಾಡಿನ ಜನರಿಗೆ ಚೆನ್ನಾಗಿ ತಿಳಿದಿದೆ.

ಉಪರಾಷ್ಟ್ರಪತಿ ಚುನಾವಣೆಯೂ ಸೈದ್ಧಾಂತಿಕ ಯುದ್ಧ

ವಾಸ್ತವವಾಗಿ, ಉಪರಾಷ್ಟ್ರಪತಿ ಚುನಾವಣೆಯೂ ಸೈದ್ಧಾಂತಿಕ ಯುದ್ಧವಾಗಿದೆ. ಆ ಸ್ಥಾನಕ್ಕೆ ಆರ್‌ಎಸ್‌ಎಸ್ ವ್ಯಕ್ತಿಯೊಬ್ಬರು ಬರುವುದು ಸಂವಿಧಾನವನ್ನು ದುರ್ಬಲಗೊಳಿಸುವ ಹಿಂದುತ್ವ ಪರಿವಾರದ ಪ್ರಯತ್ನಗಳನ್ನು ಮಾತ್ರ ಬೆಂಬಲಿಸುತ್ತದೆ. ರಾಜ್ಯಸಭೆಯ ಅಧ್ಯಕ್ಷತೆ ವಹಿಸುವ ಜವಾಬ್ದಾರಿಯೂ ಉಪರಾಷ್ಟ್ರಪತಿ ಮೇಲಿದೆ. ವಾಸ್ತವವೆಂದರೆ ಸಿ.ಪಿ.ರಾಧಾಕೃಷ್ಣನ್ ಕೇಂದ್ರ ಆಡಳಿತಗಾರರ ಪ್ರಕಾರ ಸದನದ ಅಧ್ಯಕ್ಷತೆ ವಹಿಸುತ್ತಾರೆ ಹೊರತು, ಸಂಸತ್ತಿನ ನಿಯಮಗಳ ಪ್ರಕಾರ ಅದನ್ನು ನಡೆಸುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ, ಆರೆಸ್ಸೆಸ್ ವ್ಯಕ್ತಿಯೊಬ್ಬರು ಉಪರಾಷ್ಟ್ರಪತಿ ಆಗದಿರುವುದು ಭಾರತಕ್ಕೆ ಒಳ್ಳೆಯದು. ಸಂವಿಧಾನವನ್ನು ರಕ್ಷಿಸಬೇಕಾದರೆ, ಅದನ್ನು ಗೌರವಿಸಲು ತಿಳಿದಿರುವ ಯಾರಾದರೂ ಉಪರಾಷ್ಟ್ರಪತಿ ಆಗುವುದು ಸೂಕ್ತವಾಗಿದೆ.

– ಸಿಟಿ

....ಚಾರ್ಟಿಸ್ಟ್ ಚಳುವಳಿ

ಪುಟ 2 ರಿಂದ

ಯಾಗಿತ್ತು. ದೇಶಾದ್ಯಂತ ಕಾರ್ಮಿಕರ ನಡುವೆ ಬಿಸಿ ಬಿಸಿಯಾಗಿ ಮಾರಾಟವಾಗುತ್ತಿತ್ತು. ಅಷ್ಟೇ ಅಲ್ಲ ಅದರಲ್ಲಿನ ಲೇಖನಗಳು ಬಿಸಿ ಬಿಸಿಯಾಗಿ ಚರ್ಚೆಗೆ ಒಳಗಾಗುತ್ತಿತ್ತು. ಈ ಪತ್ರಿಕೆಯನ್ನು ಕಾರ್ಮಿಕರು ಸೇರುವೆಡೆಗಳಲ್ಲಿ, ಪಬ್‌ಗಳಲ್ಲಿ ಗಟ್ಟಿಯಾಗಿ ಓದುತ್ತಿದ್ದರು. ಕಾರ್ಮಿಕರ ಬದುಕಿನ ವಿಚಾರಗಳು, ಅವರ ಹೋರಾಟಗಳು, ಚಾರ್ಟಿಸ್ಟ್ ಸಭೆಗಳು ಇದರಲ್ಲಿ ವಿವರವಾಗಿ ವರದಿಯಾಗುತ್ತಿದ್ದವು.

ಈ ಪತ್ರಿಕೆಯ ಸಂಪಾದಕೀಯಗಳು ಕೇವಲ ಚಾರ್ಟರ್ ಮತ್ತು ಕಾರ್ಮಿಕರ ಬದುಕಿನ ವಿಚಾರಗಳಿಗೆ ಮಾತ್ರ ಸೀಮಿತವಾಗದೆ, ಆ ಎಲ್ಲ ಸಮಸ್ಯೆಯ ಮೂಲಗಳನ್ನು ಶೋಧಿಸುತ್ತಿತ್ತು. ಕಾರ್ಮಿಕರಿಗೆ ಶಿಕ್ಷಣದ ಬಹು ದೊಡ್ಡ ಮಾಧ್ಯಮವಾಗಿತ್ತು. ಈ ಪತ್ರಿಕೆ ಹತ್ತು ಸಾವಿರ ಪ್ರಸಾರದಿಂದ ಆರಂಭವಾಗಿ ಐವತ್ತು ಸಾವಿರದವರೆಗೆ ಮುಟ್ಟಿತು. ಪೂರ್ ಮಾನ್ಸ್ ಗಾರ್ಡಿಯನ್, ನಾರ್ದರ್ನ್ ಲಿಬರೇಟರ್, ಇಂಗ್ಲೀಷ್ ಚಾರ್ಟಿಸ್ಟ್ ಸರ್ಕುಲರ್, ಮಿಡ್‌ಲ್ಯಾಂಡ್ ಕೌಂಟಿಸ್ ಇಲ್ಯುಮಿನೇಟರ್ ಮೊದಲಾದ ಪತ್ರಿಕೆಗಳೂ ಕೂಡಾ ಚಾರ್ಟಿಸ್ಟ್ ವಿಚಾರಗಳು, ಸುದ್ದಿಗಳನ್ನು ಜನರ ನಡುವೆ ಹರಡಲು ಕಾರಣವಾದವು. ಚಾರ್ಟಿಸ್ಟರಾಗಿದ್ದ ಕ್ರಿಶ್ಚಿಯನ್ನರಿಗೆ ಇಂಗ್ಲೆಂಡ್‌ನ ಚರ್ಚ್‌ಗಳ ಬಗ್ಗೆ ನಂಬಿಕೆ ಉಳಿಯಲಿಲ್ಲ. ಅವರು ತಮ್ಮ ಪ್ರಜಾಪ್ರಭುತ್ವದ ವಿಚಾರಗಳನ್ನು ಕ್ರಿಶ್ಚಿಯನ್ ವಿಚಾರಗಳೊಂದಿಗೆ ಮೇಳೈಸಿ ತಮ್ಮದೇ ಆದ ಚಾರ್ಟಿಸ್ಟ್ ಚರ್ಚ್‌ಗಳನ್ನೇ ರೂಪಿಸಿಕೊಂಡರು. ಅಂತಹ 20 ಚರ್ಚ್‌ಗಳಿದ್ದವೆಂದು ಗುರುತಿಸಲಾಗಿದೆ.

ಪಾರ್ಲಿಮೆಂಟ್‌ಗೆ ಸಹಿ ಸಹಿತ ಅರ್ಜಿ ಸಲ್ಲಿಕೆ

ಈ ಸಭೆಗಳಲ್ಲಿ ಸಹಿ ಸಂಗ್ರಹದ ಜೊತೆಗೆ ಚಾರ್ಟಿಸ್ಟ್ ರಾಷ್ಟ್ರ ಸಮಾವೇಶಕ್ಕಾಗಿ ಪ್ರತಿನಿಧಿಗಳನ್ನು ಆರಿಸಲಾಯಿತು. ಈ ಪ್ರತಿನಿಧಿಗಳು ಎಂಪಿ ಎಂಬ ಮಾದರಿಯಲ್ಲಿ ತಮ್ಮನ್ನು ತಾವು ಎಂಸಿ (ಮೆಂಬರ್ ಆಫ್ ಕನ್ವೆನ್ಷನ್) ಎಂದು ಕರೆದುಕೊಂಡರು. ಈ ಸಮಾವೇಶವನ್ನು ಪಾರ್ಲಿಮೆಂಟ್‌ಗೆ ಪರ್ಯಾಯ ಎಂದು ಭಾವಿಸಿದರು. 1639ರಲ್ಲಿ ಲಂಡನ್‌ನಲ್ಲಿ ರಾಷ್ಟ್ರಮಟ್ಟದ ಸಮಾವೇಶ ನಡೆಯಿತು. ಅದೇ ಸಮಯದಲ್ಲಿ 60 ಲಕ್ಷ ಸಹಿಗಳ ಅರ್ಜಿಯನ್ನು ಸಂಸತ್ತಿಗೆ ಸಲ್ಲಿಸಿದರು. ಈ ಅರ್ಜಿಯನ್ನು ಸಂಸತ್ತಿನಲ್ಲಿ ಚರ್ಚಿಸಲು ಕೂಡಾ ನಿರಾಕರಿಸಲಾಯಿತು. ಕೇವಲ ಸರ್ಕಾರಿ ಲೆಕ್ಕವನ್ನೇ ಪರಿಗಣಿಸಿದರೂ ಕೂಡ, ಅಂದು ಈ ಕಾಮನ್ಸ್ ಸಭೆಯ ಸದಸ್ಯರು ಎಷ್ಟು ಮತದಾರರಿಂದ ಆಯ್ಕೆಯಾಗಿದ್ದರೋ ಅದಕ್ಕಿಂತ ಹಲವು ಪಟ್ಟು ಹೆಚ್ಚು ಜನರ ಅಭಿಪ್ರಾಯ, ಜನಾಭಿಪ್ರಾಯವನ್ನು ಈ ಅರ್ಜಿ ಪ್ರತಿನಿಧಿಸಿತ್ತು. ಆದರೆ ಜಗತ್ತಿನ ಮೊದಲ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಯ ಈ ಸಂಸತ್ತು ಇಷ್ಟೊಂದು ದೊಡ್ಡ ಪ್ರಮಾಣದ ಜನರ ಅಭಿಪ್ರಾಯವನ್ನು ಹಿಂದೆ ಮುಂದೆ ನೋಡದೆ ತಿರಸ್ಕರಿಸಿತು.

ಚಾರ್ಟಿಸ್ಟ್‌ಗಳು ಈ ತಿರಸ್ಕಾರದಿಂದ ಕುದಿದು ಹೋದರು. ಅವರು ಮುಂದೇನು ಮಾಡಿದರು? ಮುಂದಿನ ಲೇಖನದಲ್ಲಿ ನೋಡೋಣ.

ಪ್ರಧಾನಿಗಳ ಸ್ವಾತಂತ್ರ್ಯ ದಿನದ ಭಾಷಣದಲ್ಲಿ 'ನುಸುಳುಕೋರರು' 'ಜನಸಂಖ್ಯಾ ಮಿಷನ್', ಆರೆಸ್ಸೆಸ್ ಉಲ್ಲೇಖ ಇತ್ಯಾದಿ

ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನ ಮಂತ್ರಿಯವರು 'ಜನಸಂಖ್ಯಾ ಮಿಷನ್' ರಚನೆಯನ್ನು ಘೋಷಿಸಿದರು. ಇದನ್ನು ನುಸುಳುಕೋರರನ್ನು ಗುರುತಿಸುವ ಹೆಸರಿನಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕಿರುಕುಳ ನೀಡಲು ಬಳಸಲಾಗುತ್ತದೆ. ಎಲ್ಲಾ ಮುಸ್ಲಿಮರು ನುಸುಳುಕೋರರು, ಅವರನ್ನು ದೇಶದಿಂದ ಹೊರಹಾಕಬೇಕಾಗಿದೆ ಎಂದು ಬಿಂಬಿಸುವ ಆರ್‌ಎಸ್‌ಎಸ್ ಅಭಿಯಾನವನ್ನು ನ್ಯಾಯಸಮ್ಮತಗೊಳಿಸುವುದು ಇದರ ಉದ್ದೇಶ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ಭಾಷಣದಲ್ಲಿ ಆರ್‌ಎಸ್‌ಎಸ್‌ನ ಉಲ್ಲೇಖವನ್ನು ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಈ ಮೂಲಕ, ಮೋದಿ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರ ವಹಿಸದ ಆರ್‌ಎಸ್‌ಎಸ್ ಅನ್ನು ನ್ಯಾಯಸಮ್ಮತಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅದು ಹೇಳಿದೆ. ಈ ಭಾಷಣದಲ್ಲಿ ಅವರ "ನುಸುಳುಕೋರ"ರ (ಘುಸ್‌ಪೈಟಿಯೇ) ವಿರುದ್ಧದ ಮಾತುಗಳಲ್ಲಿ ವ್ಯಕ್ತವಾಗಿರುವ ಆರ್‌ಎಸ್‌ಎಸ್‌ನ ಕಾರ್ಯಸೂಚಿಯನ್ನು ಜಾರಿಗೆ ತರುತ್ತಿರುವ ಚುನಾವಣಾ ಆಯೋಗದ ಪಕ್ಷಪಾತೀ ಸ್ವರೂಪವನ್ನು ಜನರ ನಡುವೆ ಪ್ರಚಾರ ಮಾಡುವ ಮೂಲಕ ಬಯಲಿಗೆಳೆಯಬೇಕು ಮತ್ತು ಈ ವಿಷಯದ ಮೇಲೆ ಜನಗಳನ್ನು ಸಜ್ಜುಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗಸ್ಟ್ 18, 2025 ರಂದು ಸಭೆ ಸೇರಿದ ನಂತರ ಆಗಸ್ಟ್ 19ರಂದು ಪ್ರಕಟಿಸಿರುವ ಹೇಳಿಕೆಯಲ್ಲಿ ಈ ಕರೆಯನ್ನು ನೀಡಲಾಗಿದೆ. ಈ ಹೇಳಿಕೆಯ ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:

ಎಸ್‌ಐಆರ್ ಮತ್ತು ಚುನಾವಣಾ ಆಯೋಗ

ಬಿಹಾರದಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಆರಂಭದಿಂದಲೂ ವಿವಾದದಲ್ಲಿ ಸಿಲುಕಿತ್ತು, ಏಕೆಂದರೆ ಸ್ಥಾಪಿತ ಸಂಪ್ರದಾಯಕ್ಕೆ ವಿರುದ್ಧವಾಗಿ, ಜೂನ್ 24ರಂದು ಅದರ ಘೋಷಣೆಗೆ ಮುಂಚಿತವಾಗಿ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಿಲ್ಲ. ತೀವ್ರ ಪರಿಷ್ಕರಣೆಗಳಿಗೆ ಯಾವಾಗಲೂ ದೀರ್ಘಾವಧಿಯ ತಯಾರಿ ಮತ್ತು ಸಮಾಲೋಚನೆಯ ಅಗತ್ಯವಿರುತ್ತದೆ. ಮೊತ್ತ ಮೊದಲ ಚುನಾವಣಾ ಆಯೋಗದ ಸಮಯದಿಂದಲೇ, ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಹಕ್ಕು ಸಾರ್ವತ್ರಿಕವಾಗಿರಬೇಕು ಎಂಬುದು ಸಾಮಾನ್ಯ ತತ್ವವಾಗಿದೆ ಮತ್ತು ಮತದಾರರ ಪಟ್ಟಿಯನ್ನು ರಚಿಸುವ ಜವಾಬ್ದಾರಿಯು 326ನೇ ವಿಧಿಯನ್ನು ಅನುಸರಿಸಿ ಸಂಪೂರ್ಣವಾಗಿ ಮತ್ತು ಪ್ರತ್ಯೇಕವಾಗಿ ಚುನಾವಣಾ ಆಯೋಗದ ಮೇಲೆ ನಿಂತಿದೆ. ನಿಗದಿಪಡಿಸಿದ ಕಾರ್ಯವಿಧಾನದ ಅಡಿಯಲ್ಲಿ, ಗೃಹ ಸಚಿವಾಲಯದೊಂದಿಗೆ ಸಮಾಲೋಚಿಸಿ ಪರಿಶೀಲಿಸಿದ ಆಕ್ಷೇಪಣೆಗಳ ಆಧಾರದ ಮೇಲೆ ಮಾತ್ರ ಕರಡು ಪಟ್ಟಿಯಿಂದ ಹೆಸರುಗಳನ್ನು ಅಳಿಸಬಹುದು.

ಎಸ್‌ಐಆರ್ ಮನೆ–ಮನೆಗೆ ಹೋಗಿ ಗಣತಿ ಮಾಡುವ, ಜೊತೆಗೆ ಹನ್ನೊಂದು ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಲಿಖಿತ ಅರ್ಜಿಯೊಂದಿಗೆ ಸಲ್ಲಿಸಬೇಕು ಎಂಬ ಕಾರ್ಯವಿಧಾನವನ್ನು ಸೂಚಿಸಿದೆ. ಈ ದಾಖಲೆಗಳಲ್ಲಿ ಹೆಚ್ಚಿನವು ಬಿಹಾರದಲ್ಲಿ ಅತ್ಯಂತ ಕಡಿಮೆ ವ್ಯಾಪ್ತಿಯನ್ನು ಹೊಂದಿವೆ. ಅಂದರೆ, ವಾಸ್ತವವಾಗಿ, ಇದು ಪಟ್ಟಿಯಲ್ಲಿ ಸೇರ್ಪಡೆ ಮಾಡದಿರುವುದನ್ನು ಸೂಚಿಸುತ್ತದೆ. ಏಕೆಂದರೆ ಇದು ದಾಖಲೆರಹಿತ ನಾಗರಿಕರನ್ನು ನಾಗರಿಕರಲ್ಲ ಎಂದು ಪರಿಗಣಿಸಲಾಗುವ ಒಂದು ಹೊಸದಾಗಿ ಆರಂಭಿಸುವ ಕಾರ್ಯಕ್ರಮ ಅದರಿಂದಾಗಿ ಅವರ ಹೆಸರುಗಳು ತಂತಾನೇ ಅಳಿಸಿ ಹೋಗುತ್ತವೆ. ಇದು ಕಲಮು 326 ಮತ್ತು ಸಾರ್ವತ್ರಿಕ ಮತಾಧಿಕಾರದ ತತ್ವದ ಸಂಪೂರ್ಣ ಉಲ್ಲಂಘನೆಯಾಗಿದೆ. ವಿರೋಧ ಪಕ್ಷಗಳು ಸಾಮೂಹಿಕವಾಗಿ ಚುನಾವಣಾ ಆಯೋಗವನ್ನು ಭೇಟಿಯಾದವು ಆದರೆ ಸಾಮೂಹಿಕವಾಗಿ ಮತಾಧಿಕಾರವನ್ನು ಕಿತ್ತುಕೊಳ್ಳುವ ಬೆದರಿಕೆ ಉಂಟಾಗಿರುವ ಪರಿಸ್ಥಿತಿಯನ್ನು ಸರಿಪಡಿಸಲಾಗುವುದು ಎಂಬ ಯಾವುದೇ ಭರವಸೆ ನೀಡದೆ ಸಾರಾಸಗಟು ಬದಿಗೊತ್ತಲಾಯಿತು.

ಇದರ ಪರಿಣಾಮವಾಗಿ, ವಿರೋಧ ಪಕ್ಷಗಳು ನಾಗರಿಕರನ್ನು ಮತಾಧಿಕಾರ ವಂಚನೆಯಿಂದ ರಕ್ಷಿಸಲು ಮುಂದಾದವು. ದೀರ್ಘ ಚರ್ಚೆಗಳ ನಂತರ, ಸುಪ್ರೀಂ ಕೋರ್ಟ್ ಎಸ್‌ಐಆರ್ ಸಮಯದಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕಲಾದ ಎಲ್ಲಾ 65 ಲಕ್ಷ ಜನರ ಹೆಸರುಗಳನ್ನು ಮತ್ತು ಅವರನ್ನು ತೆಗೆದು ಹಾಕಲು ಕಾರಣಗಳನ್ನು ಪ್ರಕಟಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತು. ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ, ಏಕೆಂದರೆ ಈ ಪ್ರಕ್ರಿಯೆಯ ಉದ್ದಕ್ಕೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಚುನಾವಣಾ ಆಯೋಗ ವಿಫಲವಾಗಿದೆ. ಅನೇಕ ಸಂಶೋಧಕರು ಗಮನಸೆಳೆದಿರುವಂತೆ, ಮತಾಧಿಕಾರದಿಂದ ವಂಚಿತರಾಗಿರುವವರಲ್ಲಿ ಗಣನೀಯ ಸಂಖ್ಯೆಯಲ್ಲಿರುವವರು ಅಲ್ಪಸಂಖ್ಯಾತ ಸಮುದಾಯಗಳು, ಮಹಿಳೆಯರು ಮತ್ತು ಬಡ ಕುಟುಂಬಗಳಿಗೆ ಸೇರಿದವರು. ಈ ಪ್ರಕ್ರಿಯೆಯ ಬಗ್ಗೆ ಬಿಹಾರದಲ್ಲಿ ವ್ಯಾಪಕ ಅಸಮಾಧಾನವಿದೆ. ಈ ಪ್ರಕ್ರಿಯೆಯನ್ನು ವಿರೋಧಿಸುವಲ್ಲಿ ಎಲ್ಲಾ ವಿರೋಧ ಪಕ್ಷಗಳು ಒಂದಾಗಿವೆ. ಆಗಸ್ಟ್ 15 ರಂದು ಕೆಂಪು ಕೋಟೆಯಿಂದ ಮಾಡಿದ ಭಾಷಣದಲ್ಲಿ ಪ್ರಧಾನ ಮಂತ್ರಿ ಮೋದಿಯವರು "ನುಸುಳುಕೋರರು" (ಘುಸ್‌ಪೈಟಿಯೇ) ವಿರುದ್ಧದ ಮಾತುಗಳಲ್ಲಿ ವ್ಯಕ್ತಪಡಿಸಿರುವ ಆರ್‌ಎಸ್‌ಎಸ್‌ನ ಕಾರ್ಯಸೂಚಿಯನ್ನು ಜಾರಿಗೆ ತರುತ್ತಿರುವ ಚುನಾವಣಾ ಆಯೋಗದ ಪಕ್ಷಪಾತೀ ಸ್ವರೂಪವನ್ನು ಜನರ ನಡುವೆ ಪ್ರಚಾರ ಮಾಡುವ ಮೂಲಕ ಬಯಲಿಗೆಳೆಯಬೇಕು ಮತ್ತು ಈ ವಿಷಯದ ಮೇಲೆ ಜನಗಳನ್ನು ಸಜ್ಜುಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಎಸ್‌ಐಆರ್ ವಿರುದ್ಧದ ಪ್ರತಿಭಟನೆಗಳು ಸಂಸತ್ತನ್ನು ನಡುಗಿಸಿದವು ಮತ್ತು ಹೊರಗೆ, ದೆಹಲಿಯಲ್ಲಿ ಸಾರ್ವಜನಿಕವಾಗಿ ನಡೆದವು. ಈ ವಿಷಯದ ಬಗ್ಗೆ ತೆಗೆದುಕೊಳ್ಳಬೇಕಾದ ಜಂಟಿ ನಿಲುವನ್ನು ಚರ್ಚಿಸಲು 'ಇಂಡಿಯ' ಬಣವು ದೀರ್ಘ ಅಂತರದ ನಂತರ ಸಭೆ ಸೇರಿತು, ಇದು ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದಿರುವ ಪೊಲಿಟ್‌ಬ್ಯುರೊ, 'ಇಂಡಿಯ' ಬಣವು ಬಿಹಾರದ 25 ಜಿಲ್ಲೆಗಳನ್ನು ಒಳಗೊಂಡ 16 ದಿನಗಳ 'ಮತದಾರ ಅಧಿಕಾರ ಯಾತ್ರೆ' ನಡೆಸಲು ನಿರ್ಧರಿಸಿದೆ, ಇದು ಸೆಪ್ಟೆಂಬರ್ 1 ರಂದು ಪಾಟ್ನಾದಲ್ಲಿ ಬೃಹತ್ ಸಾರ್ವಜನಿಕ ರ್‍ಯಾಲಿಯೊಂದಿಗೆ ಕೊನೆಗೊಳ್ಳುತ್ತದೆ ಎಂದು ತಿಳಿಸಿದೆ.

ಒಂದು ಸ್ವತಂತ್ರ ಪಾತ್ರ ವಹಿಸುವ ಆದೇಶವನ್ನು ಪಡೆದಿರುವ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗ, ಲೋಕಸಭಾ ಚುನಾವಣೆಯ ಸಮಯದಲ್ಲಿ ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದರಲ್ಲಿ ನಡೆದ ಬೃಹತ್ 'ಮತಗಳ್ಳತನ' ಅನಾವರಣಗೊಂಡಿರುವ ಪ್ರಶ್ನೆಯನ್ನು ನಿಭಾಯಿಸಲು ವಿಫಲವಾಗಿರುವುದರಿಂದ, ಆಯೋಗದ ಬಗ್ಗೆ ಆತಂಕಗಳು ಹೆಚ್ಚುತ್ತಿವೆ. ಚುನಾವಣಾ ಆಯೋಗದ ಸ್ವಂತ ದಾಖಲೆಗಳಿಂದಲೇ ಪಡೆದ ಸಾಕ್ಷ್ಯಗಳನ್ನು ಆಧರಿಸಿಯೇ ಇದನ್ನು ಬಯಲುಗೊಳಿಸಲಾಗಿದೆ. ಮುಖ್ಯ ಚುನಾವಣಾ ಆಯುಕ್ತರು ಈ ಆರೋಪಗಳನ್ನು ಸಾರ್ವಜನಿಕವಾಗಿಯೇ ಲೇವಡಿ ಮಾಡಿದರು, ಸುಳ್ಳುಗಳ ಹಂದರವನ್ನು ಹರಡಿದರು, ಈ ಮೂಲಕ ಸ್ಪಷ್ಟವಾಗಿ ಬಿಜೆಪಿಗೆ ಅನುಕೂಲಕ ಕಲ್ಪಿಸುವ ಚುನಾವಣಾ ಆಯೋಗದ ಪಕ್ಷಪಾತದ ಮನೋಭಾವವನ್ನು ಮತ್ತಷ್ಟು ಪ್ರತಿಷ್ಠಾಪಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣ

ಪ್ರಧಾನಿಯವರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಆರ್‌ಎಸ್‌ಎಸ್‌ನ ಉಲ್ಲೇಖವನ್ನು ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಈ ಮೂಲಕ, ಮೋದಿ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರ ವಹಿಸದ ಆರ್‌ಎಸ್‌ಎಸ್ ಅನ್ನು ನ್ಯಾಯಸಮ್ಮತಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಜನವಿರೋಧಿ ಸುಧಾರಣೆಗಳ ಘೋಷಣೆಯ ಜೊತೆಗೆ, ಪ್ರಧಾನ ಮಂತ್ರಿಯವರು 'ಜನಸಂಖ್ಯಾ ಮಿಷನ್' ರಚನೆಯನ್ನು ಸಹ ಘೋಷಿಸಿದರು. ಇದನ್ನು ನುಸುಳುಕೋರರನ್ನು ಗುರುತಿಸುವ ಹೆಸರಿನಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕಿರುಕುಳ ನೀಡಲು ಬಳಸಲಾಗುತ್ತದೆ. ಎಲ್ಲಾ ಮುಸ್ಲಿಮರು ನುಸುಳುಕೋರರು, ಅವರನ್ನು ದೇಶದಿಂದ ಹೊರಹಾಕಬೇಕಾಗಿದೆ ಎಂದು ಬಿಂಬಿಸುವ ಆರ್‌ಎಸ್‌ಎಸ್ ಅಭಿಯಾನವನ್ನು ನ್ಯಾಯಸಮ್ಮತಗೊಳಿಸುವುದು ಇದರ ಉದ್ದೇಶ ಎಂದು ಪೊಲಿಟ್‌ಬ್ಯುರೊ ಹೇಳಿದೆ

ದೀಪಾವಳಿಯಂದು ಜಿಎಸ್‌ಟಿ ದರಗಳನ್ನು ಕಡಿಮೆ ಮಾಡಲಾಗುವುದು ಎಂದು ಕೂಡ ಪ್ರಧಾನಿ ಘೋಷಿಸಿದರು. ಈ ಕಡಿತದ ಪ್ರಯೋಜನಗಳು ಕಾರ್ಪೊರೇಟ್‌ಗಳಿಗೆ ಅಲ್ಲ, ಗ್ರಾಹಕರನ್ನು ತಲುಪುವಂತೆ ಸರ್ಕಾರ ಖಚಿತಪಡಿಸಬೇಕು. ಅಲ್ಲದೆ, ರಾಜ್ಯಗಳಿಗೆ ಇದರಿಂದ ಉಂಟಾಗುವ ಯಾವುದೇ ಆದಾಯ ನಷ್ಟಕ್ಕೆ ಕೇಂದ್ರ ಸರ್ಕಾರವು ಪರಿಹಾರ ನೀಡಬೇಕು ಎಂದು ಸಿಪಿಐ(ಎಂ) ಹೇಳಿದೆ.

ಸಂಸತ್ ಅಧಿವೇಶನ

ಸಂಸತ್ತಿನ ಮಳೆಗಾಲದ ಅಧಿವೇಶನವು ಎಲ್ಲಾ ವಿರೋಧ ಪಕ್ಷಗಳ ತೀವ್ರ ಪ್ರತಿಭಟನೆಗೆ ಸಾಕ್ಷಿಯಾಯಿತು. ಬಿಹಾರದಲ್ಲಿ ಎಸ್‌ಐಆರ್ ವಿಷಯದ ಕುರಿತು ಚರ್ಚೆಗೆ ಸರ್ಕಾರ ಅವಕಾಶ ನೀಡಲು ನಿರಾಕರಿಸಿತು. ವಿರೋಧ ಪಕ್ಷಗಳ ಪ್ರತಿಭಟನೆಗಳ ನಡುವೆ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಉಲ್ಲಂಘಿಸುವ ಕ್ರೀಡಾ ಮಸೂದೆ ಸೇರಿದಂತೆ ಹಲವಾರು ಮಸೂದೆಗಳನ್ನು ಮಂಡಿಸಿತು. ಗಣಿ ಮತ್ತು ಖನಿಜ ಕಾಯ್ದೆ ಮತ್ತು ಪರಮಾಣು ಹೊಣೆಗಾರಿಕೆ ಕಾಯ್ದೆಯನ್ನು ತಿದ್ದುಪಡಿ ಮಾಡುವ ಮಸೂದೆಗಳನ್ನು ಪರಿಚಯಿಸಲು ಸರ್ಕಾರ ಉದ್ದೇಶಿಸಿದೆ. ಖನಿಜ ಪರಿಶೋಧನೆ ಮತ್ತು ಪರಮಾಣು ಇಂಧನ ಉತ್ಪಾದನೆಯ ಪ್ರಮುಖ ವಲಯಗಳಿಗೆ ಖಾಸಗಿ ಮತ್ತು ವಿದೇಶಿ ಬಂಡವಾಳದ ಪ್ರವೇಶವನ್ನು ಸುಗಮಗೊಳಿಸಲು ಈ ಮಸೂದೆಗಳನ್ನು ಪರಿಚಯಿಸಲಾಗುತ್ತಿದೆ ಎಂದಿರುವ ಪೊಲಿಟ್‌ಬ್ಯುರೊ, ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಈ ಮಸೂದೆಗಳನ್ನು ವಿರೋಧಿಸಲು ಎಲ್ಲಾ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿದೆ. ಗಂಭೀರ ವಿಷಯಗಳ ಕುರಿತು ಚರ್ಚೆಗೆ ಅವಕಾಶ ನೀಡಲು ಸರ್ಕಾರದ ಹಠಮಾರಿ ನಿರಾಕರಣೆಯು ಅದರ ಸರ್ವಾಧಿಕಾರಿ ಸ್ವರೂಪವನ್ನು ಬಿಂಬಿಸುತ್ತದೆ. ಪರಿಣಾಮವಾಗಿ, ಸಂಸತ್ತಿನಲ್ಲಿ ಚರ್ಚಿಸಬೇಕಾದ ಜನರ ಮೇಲೆ ಪರಿಣಾಮ ಬೀರುವ ಅನೇಕ ವಿಷಯಗಳು ಎಂದಿಗೂ ಪ್ರಸ್ತಾಪಕ್ಕೇ ಬರುವುದಿಲ್ಲ ಎಂದು ಅದು ಖೇದ ವ್ಯಕ್ತಪಡಿಸಿದೆ.


ಭಾರತದ ಮೇಲಿನ ಸುಂಕಗಳು

ಯುನೈಟೆಡ್ ಸ್ಟೇಟ್ಸ್ ಭಾರತದ ಮೇಲೆ ಶೇ. 50 ಸುಂಕಗಳನ್ನು ಘೋಷಿಸಿದೆ – ವ್ಯಾಪಾರ ಒಪ್ಪಂದವನ್ನು ತಲುಪಲು ವಿಫಲವಾದದ್ದಕ್ಕೆ ಶೇ. 25 ಮತ್ತು ರಷ್ಯಾದಿಂದ ತೈಲ ಮತ್ತು ಅನಿಲ ಖರೀದಿಗೆ ಶೇ. 25. ಇದು ಭಾರತದ ಕೃಷಿ, ಮೀನುಗಾರಿಕೆ ವಲಯ ಮತ್ತು ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಉದ್ದಿಮೆಗಳ (MSME) ಮೇಲೆ, ವಿಶೇಷವಾಗಿ ಜವಳಿ ತಯಾರಕರ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ರಷ್ಯಾದಿಂದ ತೈಲ

ಪುಟ 14 ನೋಡಿ

ಟ್ರಂಪ್ ಸುಂಕಗಳು ಮತ್ತು ಭಾರತದ ಮುಂದಿರುವ ದಾರಿ

ಟ್ರಂಪ್ MAGA ಮೂಲಕ ಪ್ರಯತ್ನಿಸುತ್ತಿರುವುದು ಬಂಡವಾಳಶಾಹಿ ಜಗತ್ತಿನ ಬಿಕ್ಕಟ್ಟನ್ನು ನಿವಾರಿಸುವಲ್ಲಿ ಮುಂದಾಳತ್ವ ವಹಿಸುವ ಮೂಲಕ ಅಲ್ಲ, ಬದಲಾಗಿ ಉಳಿದ ಬಂಡವಾಳಶಾಹಿ ಜಗತ್ತಿನ, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣದ ದೇಶಗಳ ಕೈ ತಿರುಚಿ ಅವು ಇನ್ನೂ ಹೆಚ್ಚು ದುಃಖವನ್ನು ನುಂಗುವಂತೆ ಮಾಡುವ ಮೂಲಕ ಅಮೆರಿಕ ಮಾತ್ರವೇ ಬಿಕ್ಕಟ್ಟಿನಿಂದ ಹೊರಬರುವುದಕ್ಕಾಗಿ. ಟ್ರಂಪ್ ಸುಂಕಗಳು ನಮ್ಮ ದೇಶವನ್ನು, ರೈತರ ಹಿತಾಸಕ್ತಿಗಳನ್ನು ಬಲಿ ಕೊಡಬೇಕೋ, ಅಥವಾ ಔಷಧಗಳು, ರತ್ನಾಭರಣಗಳು, ಬಟ್ಟೆ ಮುಂತಾದವುಗಳನ್ನು ಉತ್ಪಾದಿಸುವವರ ಹಿತಾಸಕ್ತಿಗಳನ್ನು ಬಲಿ ಕೊಡಬೇಕೋ ಎಂಬುದರ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದಂತಹ ಒಂದು ಸನ್ನಿವೇಶವನ್ನು ಸೃಷ್ಟಿಸಿವೆ. ಇದರಿಂದ ಹೊರಬರುವ ಮಾರ್ಗವೆಂದರೆ, ಅಂತಹ ಯಾವುದೇ ಆಯ್ಕೆಯನ್ನು ಮಾಡುವುದಲ್ಲ, ಬದಲಿಗೆ ನಮ್ಮ ದೇಶವನ್ನು ಈ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳುವ ಬಲವಂತಕ್ಕೆ ಒಳಗಾಗಿಸುವ ಸ್ಥಿತಿಗೆ ತಂದು ನಿಲ್ಲಿಸಿರುವ ನವ–ಉದಾರವಾದಿ ವ್ಯವಸ್ಥೆಯನ್ನೇ ಮೀರಿ ನಿಲ್ಲುವುದು.



ಪ್ರೊ. ಪ್ರಭಾತ್ ಪಟ್ನಾಯಕ್
ಅನು. ಕೆ.ಎಂ.ನಾಗರಾಜ್

ಡೊನಾಲ್ಡ್ ಟ್ರಂಪ್ ಅವರ ಸುಂಕಗಳ ಬಗ್ಗೆ ಮಾಮೂಲಿನ ಮಾಧ್ಯಮ ಚರ್ಚೆಗಳು ಈ ಸುಂಕಗಳನ್ನು ಹೇರಿದ ಒಂದು ವಿಲಕ್ಷಣ ಸನ್ನಿವೇಶವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಅಮೆರಿಕ ಸರ್ಕಾರವು ಸರಕುಗಳ ಮತ್ತು ಸೇವೆಗಳ ಖರೀದಿಯ ಮೇಲೆ ಅಧಿಕವಾಗಿ ಹೇರಿದ ಸುಂಕಗಳ ಮೂಲಕ ಬರುವ ಆದಾಯವನ್ನು ಖರ್ಚು ಮಾಡಲು ಇಷ್ಟಪಡುವುದಿಲ್ಲ ಎಂಬುದೇ ಆ ಸನ್ನಿವೇಶ. ಈ ವಿಷಯವನ್ನು ಈ ಕೆಳಗೆ ವಿವರಿಸಲಾಗಿದೆ. ಟ್ರಂಪ್ ಹೇರಿದ ಸುಂಕಗಳ ಪರಿಣಾಮವಾಗಿ ಅಮೆರಿಕದ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಿರುವ ಇತರ ದೇಶಗಳು ತಮಗೆ ಉಂಟಾಗುವ ನಷ್ಟವನ್ನು ತಮ್ಮ ತಮ್ಮ ದೇಶೀಯ ಮಾರುಕಟ್ಟೆಗಳನ್ನು ವಿಸ್ತರಿಸುವ ಮೂಲಕ ಸರಿದೂಗಿಸಿಕೊಳ್ಳುವುದು ಕೂಡ ಸಾಧ್ಯವಾಗುತ್ತಿಲ್ಲ. ಇಂತಹ ಆಂತರಿಕ ಮಾರುಕಟ್ಟೆ ವಿಸ್ತರಣೆ ಸರಕಾರ ಹೆಚ್ಚು ಖರ್ಚು ಮಾಡುವ ಮೂಲಕ ಮಾತ್ರಸಾಧ್ಯವಿದ್ದು, ಅದನ್ನು ಒಂದೋ ವಿತ್ತೀಯ ಕೊರತೆಯ ಮೂಲಕ ಮಾಡಬೇಕು, ಇಲ್ಲವೇ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಮೂಲಕ ಮಾಡಬೇಕು. ಆದರೆ, ಈ ಕ್ರಮಗಳನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಇಷ್ಟಪಡುವುದಿಲ್ಲ. ಈಗಿನ ನವ–ಉದಾರವಾದಿ ಆಳ್ವಿಕೆಯಡಿಯಲ್ಲಿ ರಾಷ್ಟ್ರ–ಪ್ರಭುತ್ವವು ಜಾಗತಿಕ ಹಣಕಾಸು ಬಂಡವಾಳದ ಇಚ್ಛೆಯನ್ನು ಪಾಲಿಸಬೇಕಾಗುತ್ತದೆ. ಆದ್ದರಿಂದ, ಅಮೇರಿಕ ಅನುಸರಿಸಬಯಸುವ ವ್ಯಾಪಾರ–ರಕ್ಷಣಾ ನೀತಿಯು ಅಂತಿಮವಾಗಿ ಒಟ್ಟು ವಿಶ್ವ ಬೇಡಿಕೆಯನ್ನು ಕುಗ್ಗಿಸುತ್ತದೆ ಮತ್ತು ಆಮೂಲಕ ನವ–ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತದೆ. ಟ್ರಂಪ್ ಹೇರುವ ಸುಂಕಗಳು ಅಮೆರಿಕದೊಳಗೆ ಉತ್ಪಾದನೆಯನ್ನು ಮತ್ತು ಉದ್ಯೋಗಾವಕಾಶಗಳನ್ನು ಒಂದು ವೇಳೆ ಹೆಚ್ಚಿಸಿದರೂ ಸಹ, ವಿಶ್ವ ಬಂಡವಾಳಶಾಹಿ ಬಿಕ್ಕಟ್ಟನ್ನು ಅವು ಮತ್ತಷ್ಟು ಹದಗೆಡಿಸುತ್ತವೆ. ಏಕೆಂದರೆ, ಅಮೆರಿಕ ಮತ್ತು ಇತರ ದೇಶಗಳನ್ನು ಒಟ್ಟಿಗೆ ತೆಗೆದುಕೊಂಡು ಲೆಕ್ಕಹಾಕಿದಾಗ ಉತ್ಪಾದನೆಯ ಮಟ್ಟವು ಇಳಿಕೆಯಾಗಿರುತ್ತದೆ. ಮಾಧ್ಯಮ ಚರ್ಚೆಗಳು ಈ ಅಂಶದ ಬಗ್ಗೆ ಗಮನವನ್ನೇ ಹರಿಸಿಲ್ಲ.

ಒಟ್ಟು ವಿಶ್ವ ಬೇಡಿಕೆಯ ಇಳಿಕೆ ಹೇಗೆ ಸಂಭವಿಸುತ್ತದೆ ಎಂಬುದನ್ನು ನಾವೀಗ ನೋಡೋಣ. ಸುಂಕಗಳು, ಹಣ ಕೂಲಿಗೆ ಹೋಲಿಸಿದರೆ, ಆಮದು ಮಾಡಿಕೊಂಡ ಸರಕುಗಳ ಬೆಲೆಗಳನ್ನು ದೇಶೀಯ ಮಾರುಕಟ್ಟೆಯಲ್ಲಿ ಏರಿಸುತ್ತವೆ. ಹಾಗಾಗಿ, ಸರಕುಗಳನ್ನು ದೇಶೀಯವಾಗಿ ಉತ್ಪಾದಿಸಿದಾಗ ಆಮದುಗಳನ್ನು ಭಾಗಶಃವಾಗಿಯಾದರೂ ಬದಲಾಯಿಸುವುದು ಸಾಧ್ಯವಾಗುತ್ತದೆ. ಸುಂಕಗಳು ಆಮದುಗಳೇ ಇಲ್ಲದಂತೆ ಮಾಡುವಲ್ಲಿ ಪರಿಣಮಿಸದಿದ್ದರೂ ಸಹ, ಕೆಲವು ವಸ್ತುಗಳ ಆಮದನ್ನು ಸ್ವಲ್ಪಮಟ್ಟಿಗಾದರೂ ತಗ್ಗಿಸುತ್ತವೆ. ಮುಂದುವರಿಯುವ ಆಮದುಗಳ ಮೇಲೆ ಹೇರುವ ಸುಂಕಗಳು ಬೆಲೆ ಏರಿಕೆಯನ್ನು ಉಂಟುಮಾಡುತ್ತವೆ. ಗ್ರಾಹಕರು ಪಾವತಿಸುವ ಸುಂಕದ ಆದಾಯವನ್ನು ಸರ್ಕಾರ ಸಂಗ್ರಹಿಸುತ್ತದೆ. ಈ ಗ್ರಾಹಕರು ಪ್ರಧಾನವಾಗಿ ದುಡಿಯುವ ಜನರೇ ಆಗಿರುತ್ತಾರೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಸುಂಕಗಳು ಆಮದುಗಳು ಇಲ್ಲವೇ ಇಲ್ಲ ಎನ್ನುವಂತೆ ಮಾಡುವುದಿಲ್ಲವಾದರೂ, ಸ್ವಲ್ಪ ಆದಾಯವನ್ನಂತೂ ತರುತ್ತವೆ ಮತ್ತು ಕೊಳ್ಳುವ ಶಕ್ತಿಯನ್ನು ದುಡಿಯುವ ಜನರಿಂದ ಸರ್ಕಾರಕ್ಕೆ ವರ್ಗಾಯಿಸುತ್ತವೆ.



ದುಡಿಯುವ ಜನರು ತಮ್ಮ ಕೊಳ್ಳುವ ಶಕ್ತಿಯನ್ನು ಸಂಪೂರ್ಣವಾಗಿ ಸರಕು ಮತ್ತು ಸೇವೆಗಳ ಮೇಲೆ ಖರ್ಚು ಮಾಡುವುದರಿಂದ ಮತ್ತು ಕೊಳ್ಳುವ ಶಕ್ತಿಯು ಅವರ ಜೇಬಿನಿಂದ ಸರ್ಕಾರದ ಖಜಾನೆಗೆ ಹೋಗುವುದರಿಂದ ಮತ್ತು ಈ ಸುಂಕದ ಆದಾಯವನ್ನು ಸರ್ಕಾರವು ಸರಕು ಮತ್ತು ಸೇವೆಗಳ ಖರೀದಿಗೆ ಖರ್ಚು ಮಾಡುವಂತಿದ್ದರೆ, ಈ ಮರುಹಂಚಿಕೆಯು ಸುಂಕ ವಿಧಿಸುವ ದೇಶದೊಳಗಿನ ಒಟ್ಟು ಬೇಡಿಕೆಯ ಮಟ್ಟವನ್ನು ಕಡಿಮೆ ಮಾಡುವುದಿಲ್ಲ. ಆದರೆ, ಈ ಸುಂಕದಿಂದ ಬರುವ ಆದಾಯವನ್ನು ಸರಕು ಮತ್ತು ಸೇವೆಗಳ ಮೇಲೆ ಒಂದು ವೇಳೆ ಖರ್ಚು ಮಾಡದಿದ್ದರೆ, ಆಗ ಸುಂಕ ವಿಧಿಸುವ ದೇಶದಲ್ಲಿ ಒಟ್ಟು ಬೇಡಿಕೆಯ ಮಟ್ಟದಲ್ಲಿ ಇಳಿಕೆ ಕಂಡುಬರುತ್ತದೆ. ಅಮೆರಿಕದಲ್ಲಿ ಸಂಭವಿಸುವ ವಿದ್ಯಮಾನವು ನಿಖರವಾಗಿ ಇದುವೇ. ಏಕೆಂದರೆ, ಟ್ರಂಪ್ ತಾನು ಹೇರಿದ ಸುಂಕಗಳಿಂದ ಬರುವ ಆದಾಯವನ್ನು ಸರಕು ಮತ್ತು ಸೇವೆಗಳ ಮೇಲೆ ಖರ್ಚು ಮಾಡುವುದಿಲ್ಲ.

ಅಮೆರಿಕದಿಂದ "ನಿರುದ್ಯೋಗ ರಫ್ತು"ವಿನ ಪ್ರಕರಣವಷ್ಟೇ ಅಲ್ಲ

ಟ್ರಂಪ್ ಆಡಳಿತವು ಶ್ರೀಮಂತರಿಗೆ ಭಾರಿ ತೆರಿಗೆ ರಿಯಾಯಿತಿಗಳನ್ನು ನೀಡುತ್ತಿದೆ ಮತ್ತು ಈ ರಿಯಾಯಿತಿಗಳಿಂದ ಉಂಟಾಗುವ ಹಣಕಾಸಿನ ಕೊರತೆಯನ್ನು ನೀಗಿಸಿಕೊಳ್ಳಲು ಸುಂಕದಿಂದ ಬಂದ ಆದಾಯವನ್ನು ಬಳಸಿಕೊಳ್ಳಲಾಗುವುದು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ ಸುಂಕದ ಆದಾಯವನ್ನು ಖರ್ಚುಗಳಿಗಾಗಿ ಬಳಸಿಕೊಳ್ಳದೆ ಅದನ್ನು ಹಣಕಾಸಿನ ಕೊರತೆಯನ್ನು ತಗ್ಗಿಸಿಕೊಳ್ಳಲು ಬಳಸಲಾಗುವುದು. ಅಂದರೆ, ಸರ್ಕಾರವು ಪಡೆಯುವ ಪ್ರತಿ ಡಾಲರ್ ಸುಂಕದ ಆದಾಯವೂ ಅಮೆರಿಕದಲ್ಲಿ ಒಟ್ಟು ಬೇಡಿಕೆಯ ಮಟ್ಟವನ್ನು ಇಳಿಕೆ ಮಾಡುವ ಪರಿಣಾಮವನ್ನು ಹೊಂದಿರುತ್ತದೆ. ವಿಶ್ವದ ಉಳಿದ ಭಾಗಗಳ ಸರ್ಕಾರಗಳ ಖರ್ಚುಗಳು ಅಮೆರಿಕದಲ್ಲಿ ಬೇಡಿಕೆಯ ಈ ಇಳಿಕೆಯನ್ನು ಸರಿದೂಗಿಸುವ ಮಟ್ಟಕ್ಕೆ ಏರಿಕೆಯಾಗುವುದಿಲ್ಲ. ಆದ ಕಾರಣ, ಇಡೀ ವಿಶ್ವವನ್ನು ಒಟ್ಟಾರೆಯಾಗಿ ತೆಗೆದುಕೊಂಡಾಗ, ಒಟ್ಟು ಬೇಡಿಕೆಯ ಮಟ್ಟವು ಇಳಿಯುತ್ತದೆ. ಇದು ವಿಶ್ವ ಅರ್ಥವ್ಯವಸ್ಥೆಯಲ್ಲಿ ಹಿಂಜರಿತದ ಸ್ಥಿತಿಯನ್ನು ಹೆಚ್ಚಿಸುತ್ತದೆ. ಅಮೆರಿಕದಲ್ಲಿ, ಒಟ್ಟು ಮಟ್ಟವನ್ನು ವಾಸ್ತವವಾಗಿ ಇಳಿಕೆ ಮಾಡುವ ವಿದ್ಯಮಾನದ ಒಂದು ಪ್ರಕರಣವಾಗುತ್ತದೆ.

ಇದು, ಅಮೆರಿಕದ ಸುಂಕಗಳ ವಿರುದ್ಧ ಇತರ ದೇಶಗಳು ಪ್ರತೀಕಾರ ಕ್ರಮಗಳನ್ನು ಕೈಗೊಂಡರೂ ಸಹ, ಎಳ್ಳಷ್ಟೂ ಬದಲಾಗುವುದಿಲ್ಲ. ಈ ಇತರ ದೇಶಗಳು ತಮ್ಮ ಕಾರ್ಮಿಕರಿಗೆ ನಷ್ಟವನ್ನುಂಟುಮಾಡಿ ಸಂಗ್ರಹಿಸಿದ ತಮ್ಮ ಸುಂಕದ ಆದಾಯವನ್ನು ಒಂದೊ ತಮ್ಮ ಹಣಕಾಸಿನ ಕೊರತೆಯನ್ನು ನೀಗಿಸಿಕೊಳ್ಳುವ ಮಟ್ಟಿಗೆ ಅಥವಾ ಶ್ರೀಮಂತರಿಗೆ ತೆರಿಗೆ ರಿಯಾಯಿತಿಗಳನ್ನು ನೀಡಲು ಬಳಕೆಮಾಡಿಕೊಳ್ಳಬಹುದು. ಇದರ ಒಟ್ಟು ಪರಿಣಾಮವು ವಿಶ್ವದ ಒಟ್ಟು ಬೇಡಿಕೆಯನ್ನು ಅಷ್ಟರಮಟ್ಟಿಗೆ ಕುಗ್ಗಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅಮೆರಿಕ ಹೇರುವ ಸುಂಕಗಳ ವಿರುದ್ಧ ಇತರ ದೇಶಗಳು ಪ್ರತೀಕಾರದ ಕ್ರಮವಾಗಿ ಅಮೆರಿಕದಿಂದ ಬೇಡಿಕೆಯ ಇಳಿಕೆಯ ಹೊರತಾಗಿಯೂ, ಆಮದುಗಳ ವೆಚ್ಚದಲ್ಲಿ ದೇಶೀಯ ಉತ್ಪಾದನೆಯು ಏರಿಕೆಯಾಗಬಹುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಸುಂಕದಿಂದಾಗಿ ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಪರಿಸ್ಥಿತಿ ಸುಧಾರಿಸಬಹುದಾದರೂ, ಬಂಡವಾಳಶಾಹಿ ಜಗತ್ತನ್ನು ಒಟ್ಟಾರೆಯಾಗಿ ನೋಡಿದಾಗ, ಅಂದರೆ ಅಮೆರಿಕ ಮತ್ತು ಉಳಿದ ಪ್ರಪಂಚವನ್ನು ಒಟ್ಟಿಗೆ ತೆಗೆದುಕೊಂಡರೆ, ಚಟುವಟಿಕೆಯ ಮಟ್ಟದಲ್ಲಿ ಇಳಿಕೆ ಕಂಡುಬರುತ್ತದೆ.

ಇದು ಅಮೆರಿಕದಿಂದ "ನಿರುದ್ಯೋಗ ರಫ್ತು"ವಿನ ಪ್ರಕರಣವಷ್ಟೇ ಅಲ್ಲ, ಅಂದರೆ, ಅಮೆರಿಕವು ಅನುಸರಿಸುತ್ತಿರುವ "ನಿನ್ನ ನೆರೆಯವನು ಹಾಳಾಗಲಿ" ನೀತಿಯ ಒಂದು ಸರಳ ಪ್ರಕರಣವಷ್ಟೇ ಅಲ್ಲ, ಅದಕ್ಕಿಂತಲೂ ಹೆಚ್ಚು ಕ್ರೂರವಾದುದು. ಆಮದುಗಳ ಮೇಲೆ ಹೇರಿದ ಸುಂಕದ ಪರಿಣಾಮವಾಗಿ ಅಮೆರಿಕದಲ್ಲಿ ದೇಶೀಯ ಉತ್ಪಾದನೆಯು ಒಂದು ವೇಳೆ ಶೇ. 100ರಷ್ಟು ಏರಿಕೆಯಾದರೆ, ಆಗ, ಉಳಿದ ಜಗತ್ತಿನ ಉತ್ಪಾದನೆಯು 120 ಅಥವಾ 150ರಷ್ಟು ಕುಗ್ಗುತ್ತದೆ. ಹಾಗಾಗಿ, ಇಡೀ ಜಗತ್ತಿನಲ್ಲಿ ಉತ್ಪಾದನೆಯ ಮಟ್ಟದಲ್ಲಿ ಇಳಿಕೆ ಕಂಡುಬರುತ್ತದೆ. ಇದು, ಸಂಕ್ಷಿಪ್ತವಾಗಿ, ಅಮೆರಿಕದಲ್ಲಿ ಚಟುವಟಿಕೆಯ ಮಟ್ಟವನ್ನು ಹೆಚ್ಚಿಸುವ ಸಮಯದಲ್ಲೇ ಇಡೀ ಜಗತ್ತಿನಲ್ಲಿ ಚಟುವಟಿಕೆಯ ಬೇಡಿಕೆಯನ್ನು ಮತ್ತು ಆಮೂಲಕ ಉತ್ಪಾದನೆಯನ್ನು ತಮ್ಮ ತಮ್ಮ ಅರ್ಥವ್ಯವಸ್ಥೆಗಳಿಗೆ ವರ್ಗಾಯಿಸಿಕೊಂಡಾಗ, ಒಟ್ಟಾರೆಯಾಗಿ ಅದು ವಿಶ್ವ ಅರ್ಥವ್ಯವಸ್ಥೆಯ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ ಮತ್ತು ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತದೆ.

ಸುಂಕಗಳ ಕುರಿತಾದ ಮಾಧ್ಯಮಗಳ ಮಾಮೂಲಿನ ಚರ್ಚೆಯು ಈ ಬಿಕ್ಕಟ್ಟು ಉಲ್ಬಣಗೊಳ್ಳುವ ಅಂಶವನ್ನು ಗಮನಿಸದೆ ಬಿಟ್ಟುಬಿಡುತ್ತದೆ. ಈ ಚರ್ಚೆಯು ಸುಂಕಗಳನ್ನು ಅವು ಬೇರೆ ದೇಶಗಳಿಂದ ಸ್ವದೇಶಕ್ಕೆ ಬೇಡಿಕೆಯನ್ನು ವರ್ಗಾಯಿಸುವ ಒಂದು ಸಾಧನ ಎಂದು ಮಾತ್ರವೇ ನೋಡುತ್ತದೆ. ಆದರೆ, ದುಡಿಯುವ ಜನರಿಗೆ ನಷ್ಟವನ್ನುಂಟುಮಾಡುವ ಮೂಲಕ ಸಂಗ್ರಹಿಸುವ ಸುಂಕದ ಆದಾಯವನ್ನು ಸರ್ಕಾರವು ಖರ್ಚು ಮಾಡುವುದರ ಬದಲು ಅದನ್ನು ತನ್ನ ಬೊಕ್ಕಸಕ್ಕೆ ಸೇರಿಸುವ ಸನ್ನಿವೇಶದಲ್ಲಿ, ಈ ಸುಂಕಗಳ ಹೆಚ್ಚುವರಿ ಪರಿಣಾಮವಾಗಿ, ಒಟ್ಟಾರೆಯಾಗಿ ಜಗತ್ತಿನಲ್ಲಿ ಬೇಡಿಕೆಯನ್ನು ಮತ್ತು ಉತ್ಪಾದನೆಯ ಮಟ್ಟವನ್ನು ಕುಗ್ಗಿಸುತ್ತವೆ. ಅಂದರೆ, ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟನ್ನು ಜಟಿಲಗೊಳಿಸುತ್ತವೆ.

MAGA ಅಂದರೆ ಅಮೆರಿಕದ ಸ್ವಂತ ಹಿತಾಸಕ್ತಿ

ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಅಮೆರಿಕ ವಹಿಸುವ ಪಾತ್ರವು ಮುಖ್ಯವಾಗುತ್ತದೆ. ಉದಾರವಾದಿ ಬೂರ್ಜ್ವಾ ಅಭಿಪ್ರಾಯದ ಪ್ರಕಾರ, ಬಿಕ್ಕಟ್ಟನ್ನು ನಿವಾರಿಸಲು ಮುಂದುವರಿದ ಬಂಡವಾಳಶಾಹಿ ದೇಶಗಳ ಸಂಯೋಜಿತ ಅಭಿಪ್ರಾಯವನ್ನು ರೂಪಿಸುವಲ್ಲಿ ಬಂಡವಾಳಶಾಹಿ ಜಗತ್ತಿನ ನಾಯಕನಾಗಿ ಅಮೆರಿಕವು ಮುಂಚೂಣಿಯಲ್ಲಿರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಉದಾರವಾದಿ ಬೂರ್ಜ್ವಾ ಅರ್ಥಶಾಸ್ತ್ರಜ್ಞರ ಅಭಿಪ್ರಾಯವೂ ಇದೇ ಆಗಿತ್ತು. ಹಾಗೆ ನೋಡಿದರೆ, ಮುಂದುವರಿದ ಬಂಡವಾಳಶಾಹಿ ದೇಶಗಳ ಇಂತಹ ಒಂದು ಸಂಯೋಜಿತ ಕ್ರಮವನ್ನು ಪ್ರಖ್ಯಾತ ಬೂರ್ಜ್ವಾ ಅರ್ಥಶಾಸ್ತ್ರಜ್ಞ ಜೆ.ಎಂ.ಕೀನ್ಸ್

ಪುಟ 15 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ ಆಗಸ್ಟ್ 25–31, 2025 **13** August 25-31, 2025 JANASHAKTHI KANNADA VARA PATRIKE

ಪ್ರಧಾನಿಗಳ ಸ್ವಾತಂತ್ರ್ಯ ದಿನದ ಭಾಷಣದಲ್ಲಿ 'ನುಸುಳುಕೋರರು'....

ಪುಟ 12 ರಿಂದ

ಖರೀದಿಯನ್ನು ನಿಲ್ಲಿಸುವುದರಿಂದ ಹಣದುಬ್ಬರ ಹೆಚ್ಚಾಗುತ್ತದೆ, ಏಕೆಂದರೆ ನಾವು ಪಾವತಿಸಲೇಬೇಕಾಗಿ ಬರುವ ಹೆಚ್ಚಿನ ಬೆಲೆಗಳಿಂದಾಗಿ ಎಲ್ಲಾ ಸರಕುಗಳ ಬೆಲೆಗಳು ಹೆಚ್ಚಾಗುತ್ತವೆ.

ಭಾರತ ಸರ್ಕಾರವು ರಷ್ಯಾದ ತೈಲ ಆಮದುಗಳನ್ನು ಕಡಿಮೆ ಮಾಡಬೇಕೆಂದು ಮತ್ತು ತನ್ನ ಇಂಧನ ಅಗತ್ಯಗಳಿಗಾಗಿ ಯುಎಸ್ ಅನ್ನು ಹೆಚ್ಚು ಅವಲಂಬಿಸಬೇಕೆಂದು ಬಯಸುತ್ತದೆ. ರಿಯಾಯಿತಿಗಳನ್ನು ಪಡೆಯುವ ಆಶಯದೊಂದಿಗೆ, ಯುಎಸ್ ವೈಮಾನಿಕ ಕಂಪನಿಗಳಿಂದ ರಕ್ಷಣಾ ಖರೀದಿಗಳನ್ನು ಗಮನಾರ್ಹವಾಗಿ ಹೆಚ್ಚಿಸುವ ಭರವಸೆ ನೀಡುವ ಮೂಲಕ ಯುಎಸ್ ಅನ್ನು ತುಷ್ಟೀಕರಿಸಲು ಸರ್ಕಾರ ಪ್ರಯತ್ನಿಸಿದೆ. ಯುಎಸ್ ಒತ್ತಡಕ್ಕೆ ಭಾರತ ಸರ್ಕಾರ ಮಣಿಯಬಾರದು. ಬದಲಾಗಿ, ಅದು ತನ್ನ ಸಂಬಂಧಗಳಲ್ಲಿ ವೈವಿಧ್ಯತೆಯನ್ನು ತರುವತ್ತ ಗಮನಹರಿಸಬೇಕು ಮತ್ತು ಬಹು–ಧ್ರುವೀಯತೆಯನ್ನು ಬಲಪಡಿಸಲು ಶ್ರಮಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಜಮ್ಮು ಮತ್ತು ಕಾಶ್ಮೀರ

370ನೇ ವಿಧಿಯನ್ನು ರದ್ದುಪಡಿಸಿ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿ ಐದು ವರ್ಷಗಳು ಕಳೆದಿವೆ. ಆಗ ಮುಂದಿಟ್ಟ ಯಾವುದೇ ಗುರಿ ಈಡೇರಿಲ್ಲ. ಕೇಂದ್ರ ಸರ್ಕಾರವು ಭಯೋತ್ಪಾದನೆಯನ್ನು ತೊಡೆದುಹಾಕಲು ಅಥವಾ ಜಮ್ಮು ಮತ್ತು ಕಾಶ್ಮೀರದ ಜನರಿಗೆ ಭದ್ರತೆಯನ್ನು ಒದಗಿಸಲು ವಿಫಲವಾಗಿದೆ. ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸುಳ್ಳು ಹೇಳಿಕೆಗಳನ್ನು ಬಯಲಿಗೆ ತಂದಿತು. ಆರು ತಿಂಗಳೊಳಗೆ ರಾಜ್ಯ ಸ್ಥಾನಮಾನವನ್ನು ಪುನಃಸ್ಥಾಪಿಸುವ ಭರವಸೆಯನ್ನು ಈಡೇರಿಸುವಲ್ಲಿ ವಿಫಲವಾದ ಕೇಂದ್ರ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡುವ ಬದಲು ಸುಪ್ರೀಂ ಕೋರ್ಟ್, ಪಹಲ್ಗಾಮ್ ದಾಳಿಯಿಂದಾಗಿ ರಾಜ್ಯ ಸ್ಥಾನಮಾನದ ಬಗ್ಗೆ ಚರ್ಚಿಸಲು ಇದು ಸಮಯವಲ್ಲ ಎಂದು ಗಮನಿಸಿದ್ದು ದುರದೃಷ್ಟಕರ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ. ಕೇಂದ್ರದ ಈ ಐದು ವರ್ಷಗಳ ನೇರ ಆಡಳಿತದ ಉದ್ದಕ್ಕೂ, ಜಮ್ಮು ಮತ್ತು ಕಾಶ್ಮೀರದ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ತುಳಿದು ಹಾಕಲಾಗಿದೆ. ಆಶ್ವಾಸನೆ ನೀಡಿದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯದ ಕಾರಣ ಜಮ್ಮು, ಕಾಶ್ಮೀರ ಮತ್ತು ಲಡಾಖ್ – ಎಲ್ಲಾ ಪ್ರದೇಶಗಳ ಜನರಲ್ಲಿ ವ್ಯಾಪಕ ಅಸಮಾಧಾನ ಮತ್ತು ಕೋಪವಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಪುನಃಸ್ಥಾಪಿಸಲು ಮತ್ತು ಅದರ ಸ್ವಾಯತ್ತತೆಯನ್ನು ಒತ್ತಾಯಿಸಲು ಜನರನ್ನು ಸಜ್ಜುಗೊಳಿಸಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ

ಮಹಾರಾಷ್ಟ್ರ ರಾಜ್ಯ ಸರ್ಕಾರವು – ಮುಂಬೈ ರೈಲು ಸ್ಫೋಟ ಪ್ರಕರಣ (2006) ಮತ್ತು ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣ, ಈ ಎರಡು ಭಯೋತ್ಪಾದಕ ದಾಳಿಗಳಿಗೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳಿಗೆ ವಿಭಿನ್ನವಾಗಿ ಪ್ರತಿಕ್ರಿಯಿಸಿತು. ಮುಂಬೈ ರೈಲು ಸ್ಫೋಟ ಪ್ರಕರಣದಲ್ಲಿ, ಆರೋಪಿಗಳು ಹೆಚ್ಚಾಗಿ ಮುಸ್ಲಿಮರಾಗಿದ್ದರು, ಸರ್ಕಾರವು ತಕ್ಷಣವೇ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತು ಮತ್ತು ನ್ಯಾಯಾಲಯದ ಆದೇಶದ ಮೇಲೆ ತಡೆ ತಂದಿತು. ಇದಕ್ಕೆ ವ್ಯತಿರಿಕ್ತವಾಗಿ, ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ, ಆರೋಪಿಗಳು ಹಿಂದುತ್ವ ಉಗ್ರಗಾಮಿ ವ್ಯಕ್ತಿಗಳಾಗಿದ್ದರು, ಸರ್ಕಾರವು ಆರೋಪಿಗಳ ಖುಲಾಸೆಯ ವಿರುದ್ಧ ಮೇಲ್ಮನವಿ ಸಲ್ಲಿಸಲಿಲ್ಲ. ಇದು ಮಹಾರಾಷ್ಟ್ರದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಕೋಮುವಾದಿ ಪಕ್ಷಪಾತವನ್ನು ಸ್ಪಷ್ಟವಾಗಿ ಬಯಲುಗೊಳಿಸುತ್ತದೆ.

ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕು ಮತ್ತು ಆರೋಪಿಗಳನ್ನು ಸರಿಯಾದ ವಿಚಾರಣೆಗೆ ಒಳಪಡಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಪೊಲಿಟ್‌ಬ್ಯುರೊ ಮಹಾರಾಷ್ಟ್ರ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಉಪರಾಷ್ಟ್ರಪತಿ ಚುನಾವಣೆ

ಧಂಕರ್ ಅವರ ಹಠಾತ್ ರಾಜೀನಾಮೆಯಿಂದ ಅನಿವಾರ್ಯವಾದ ಉಪರಾಷ್ಟ್ರಪತಿ ಹುದ್ದೆಗೆ ನಡೆಯಬೇಕಾದ ಚುನಾವಣೆಯ ಬಗ್ಗೆ ಪೊಲಿಟ್‌ಬ್ಯುರೊ ಚರ್ಚಿಸಿತು. 'ಇಂಡಿಯ' ಬಣದ ಅಭ್ಯರ್ಥಿ ನ್ಯಾಯಮೂರ್ತಿ ಬಿ.ಸುದರ್ಶನ್ ರೆಡ್ಡಿ ಅವರ ಯಶಸ್ಸಿಗೆ ಸಿಪಿಐ(ಎಂ) ಇತರ ವಿರೋಧ ಪಕ್ಷಗಳು ಮತ್ತು 'ಇಂಡಿಯ' ಬಣದೊಂದಿಗೆ ಸಂಯೋಜಿಸಿ ಕೆಲಸ ಮಾಡುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

"ಪ್ರತಿಪಕ್ಷಗಳ ರಾಜ್ಯ ಸರಕಾರಗಳ ವಿರುದ್ಧ ಅಸ್ತ್ರವಾಗಿ ಬಳಸಲು ಮೂರು ಪ್ರಜಾಪ್ರಭುತ್ವ–ವಿರೋಧಿ ಮಸೂದೆಗಳು"

ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಇತರ ಸಚಿವರನ್ನು 30 ದಿನಗಳ ಬಂಧನದ ನಂತರ ಪದಚ್ಯುತಗೊಳಿಸಲು ಮೂರು ಮಸೂದೆಗಳನ್ನು ಮಂಡಿಸುವ ಮೋದಿ ಸರ್ಕಾರದ ನಡೆಯು ಸ್ಥಾಪಿತ ಕಾನೂನು ಕಾರ್ಯವಿಧಾನಗಳನ್ನು ತಪ್ಪಿಸುವ ಅದರ ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿಯನ್ನು ಎತ್ತಿ ತೋರುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಈ ಹಿಂದೆಯೂ ಸಹ ಬಿಜೆಪಿ ಸದಾ ನ್ಯಾಯಾಂಗ ಪರಿಶೀಲನೆಯನ್ನು ತಪ್ಪಿಸಲು, ವಿಶೇಷವಾಗಿ 'ಹೇಯ ಕೃತ್ಯಗಳು' ಎಂದು ಪ್ರತ್ಯೇಕಿಸಿ ತೋರಿಸಿ ಒಂದು ಸಾರಾಸಗಟು ಶಾಸನವನ್ನು ಹೇರುವ ಪ್ರವೃತ್ತಿಯನ್ನು ತೋರಿಸಿದೆ. ಪ್ರಸ್ತುತ ಸರ್ಕಾರದ ನವ–ಫ್ಯಾಸಿಸ್ಟ್ ಪ್ರವೃತ್ತಿಗಳನ್ನು ಗಮನಿಸಿದರೆ, ಇದನ್ನು ಪ್ರತಿಪಕ್ಷಗಳ ರಾಜ್ಯ ಸರ್ಕಾರಗಳನ್ನು ಗುರಿಯಾಗಿಸಲು ಒಂದು ಅಸ್ತ್ರವಾಗಿ ಬಳಸಲಾಗುತ್ತದೆ ಎಂಬುದು ಸ್ವಯಂವೇದ್ಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ನಡೆ ಅಸಹ್ಯಕರವಾಗಿದೆ ಮತ್ತು ಪ್ರಜಾಪ್ರಭುತ್ವ ಎಂದು ಹೇಳಿಕೊಳ್ಳುವುದಕ್ಕೆ ಅಗತ್ಯವಾದ ತಡೆಗಳು ಮತ್ತು ಸಮತೋಲನಗಳನ್ನು ದುರ್ಬಲಗೊಳಿಸುತ್ತದೆ. ನಿಜವಾದ ಆಶಯವನ್ನು ಮರೆಮಾಚುವ ಆಶಯದಿಂದಷ್ಟೇ ಅಪರಾಧದ ಬಗ್ಗೆ ಉಲ್ಲೇಖ ಮಾಡಲಾಗಿದೆ ಎಂದು ಹೇಳಿದೆ.

ಈ ಶಾಸಕೀಯ ಪ್ರಸ್ತಾವವನ್ನು ಸಿಪಿಐ(ಎಂ) ತನ್ನೆಲ್ಲಾ ಶಕ್ತಿ ಹಾಕಿ ಎದುರಿಸಲು ನಿರ್ಧರಿಸಿದೆ ಮತ್ತು ಎಲ್ಲಾ ಸಮಾನ ಮನಸ್ಕ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಪಕ್ಷಗಳು ಈ ಅನಗತ್ಯ ನಡೆಯನ್ನು ಜಂಟಿಯಾಗಿ ಪ್ರತಿರೋಧಿಸಬೇಕು ಎಂದು ಆಗ್ರಹಿಸಿದೆ.

"ಪರಿಶಿಷ್ಟ ಬುಡಕಟ್ಟುಗಳು/ ಜನಜಾತಿ/ಆದಿವಾಸಿ ನಂಬಿಕೆಗಳು" ಎಂಬುದನ್ನು ಈ ಬಾರಿಯ ಜನಗಣತಿಯಲ್ಲಿ ಸೇರಿಸಲು ಆಗ್ರಹ

ಮುಂಬರುವ ಜನಗಣತಿಯಲ್ಲಿ ದೇಶದ ಪ್ರಮುಖ ಧಾರ್ಮಿಕ ಸಮುದಾಯಗಳಲ್ಲಿ ಆದಿವಾಸಿಗಳ/ ಪರಿಶಿಷ್ಟ ಬುಡಕಟ್ಟುಗಳ ನಂಬಿಕೆಗಳನ್ನು ದಾಖಲಿಸಲು ಅವಕಾಶ ಮಾಡಿಕೊಡಬೇಕು ಎಂದು 'ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್' (ಎಎಆರ್‌ಎಂ) ಆಗಸ್ಟ್ 19ರಂದು ಭಾರತದ ಜನಗಣತಿ ಆಯೋಗದ ರಿಜಿಸ್ಟ್ರಾರ್ ಜನರಲ್‌ರವರನ್ನು ಭೇಟಿ ಮಾಡಿ ಕೋರಿದೆ. ಮರುದಿನ ಈ ಕುರಿತು ಎಎಆರ್‌ಎಂ ಪರವಾಗಿ ಅದರ ಅಧ್ಯಕ್ಷರಾದ ಜಿತೇಂದ್ರ ಚೌಧರಿ ಮತ್ತು ಉಪಾಧ್ಯಕ್ಷರೂ, ಮಾಜಿ ಸಂಸತ್ ಸದಸ್ಯರೂ ಆದ ಬೃಂದಾ ಕಾರಟ್ ಸಹಿ ಹಾಕಿದ ಒಂದು ಪತ್ರವನ್ನು ಕೂಡ ಸಲ್ಲಿಸಿ, ದೇಶದ ಇತರ "ಪ್ರಮುಖ" ಧಾರ್ಮಿಕ ಸಮುದಾಯಗಳ ಮಟ್ಟದಲ್ಲೇ ಆದಿವಾಸಿಗಳು ಅಥವ ಪರಿಶಿಷ್ಟ ಬುಡಕಟ್ಟುಗಳ ನಿರ್ದಿಷ್ಟ ನಂಬಿಕೆಗಳನ್ನು ಜನಗಣತಿಯಲ್ಲಿ ಸೇರಿಸಿ ನ್ಯಾಯ ಒದಗಿಸಲಾಗುವುದು ಎಂದು ಆಶಿಸಲಾಗಿದೆ.

2011ರ ಜನಗಣತಿಯ ಪ್ರಕಾರ ಪರಿಶಿಷ್ಟ ಬುಡಕಟ್ಟುಗಳು/ಜನಜಾತಿ/ಆದಿವಾಸಿಗಳ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಶೇ.8.6. ಇವರಲ್ಲಿ ಬಹುಸಂಖ್ಯಾತರು ತಮ್ಮದೇ ಆದ ಪ್ರತ್ಯೇಕ ನಂಬಿಕೆಗಳು ಮತ್ತು ಆಚರಣೆಗಳನ್ನು ಹೊಂದಿದ್ದಾರೆ. ಜನಗಣತಿ ಡಿಜಿಟಲ್ ಲೈಬ್ರರಿಯ ಪ್ರಕಾರ ಧಾರ್ಮಿಕ ಸಮುದಾಯವಾರು ಜನಗಣತಿ ಕೋಷ್ಟಕದಲ್ಲಿ ಆರು "ಪ್ರಮುಖ" ಧರ್ಮಗಳನ್ನು ಪಟ್ಟಿಮಾಡಲಾಗಿದೆ: ಹಿಂದುಗಳು, ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಬೌದ್ಧರು ಮತ್ತು ಜೈನರು. ಈ ಕೋಷ್ಟಕದಲ್ಲಿ ಇತರ ಎಲ್ಲರನ್ನೂ 'ಇತರ ಧರ್ಮಗಳು ಮತ್ತು ಅನುಸರಣೆಗಳು' (ಒಆರ್‌ಪಿ) ಎಂಬ ಶಿರೋನಾಮೆಯ ಅಡಿಯಲ್ಲಿ ಒಳಗೊಳ್ಳಲಾಗಿದೆ. ಆದಿವಾಸಿಗಳು ಅಥವ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆ ಕೆಲವು 'ಪ್ರಮುಖ' ಎಂದು ಪಟ್ಟಿಮಾಡಲಾದ ಧಾರ್ಮಿಕ ಸಮುದಾಯಗಳಿಗಿಂತಲೂ ಹೆಚ್ಚಿರುವುದರಿಂದಾಗಿ, ಇವರ ನಂಬಿಕೆಗಳು–ಆಚರಣೆಗಳು 'ಇತರ' ಎಂಬುದರ ಅಡಿಯಲ್ಲಿ ಸೇರಿ ಹೋಗದೆ, ಅವು ಜನಗಣತಿಯಲ್ಲಿ ನಿರ್ದಿಷ್ಟ ಉಲ್ಲೇಖವನ್ನು ಹೊಂದಿರಬೇಕು ಎಂದು ಈ ಸಮುದಾಯಗಳು ಕೇಳುತ್ತಲೇ ಬಂದಿವೆ. ಝಾರ್ಖಂಡ್ ವಿಧಾನಸಭೆ ಈ ಕುರಿತು ಒಂದು ಠರಾವನ್ನು ಅಂಗೀಕರಿಸಿ ಆದಿವಾಸಿಗಳ ನಂಬಿಕೆಗಳನ್ನು ದಾಖಲು ಮಾಡಲು ಒಂದು ಪ್ರತ್ಯೇಕ ಕಾಲಂ ಅನ್ನು ಜನಗಣತಿಯಲ್ಲಿ ಸೇರಿಸಬೇಕು ಎಂದು ಕೋರಿದೆ.

ಧರ್ಮ ಕುರಿತ ಕಾಲಂ ಅನ್ನು ಸೇರಿಸಿರುವುದು "ಭಾರತದ ಧಾರ್ಮಿಕ ವೈವಿಧ್ಯವನ್ನು ದಾಖಲು ಮಾಡುವುದಕ್ಕಾಗಿ" ಎಂದು ಹೇಳಲಾಗಿತ್ತು. ಹಾಗಿರುವಾಗ ಕೆಲವು "ಪ್ರಮುಖ" ಎಂದು ಗುರುತಿಸಲಾದ ಧಾರ್ಮಿಕ ಸಮುದಾಯಗಳಿಗಿಂತ ಹೆಚ್ಚಿನ ಸಂಖ್ಯೆಯನ್ನು ಹೊಂದಿರುವ ಆದಿವಾಸಿಗಳ ನಂಬಿಕೆಗಳನ್ನು ಪ್ರಭುತ್ವದ ಧೋರಣೆ/ನೀತಿಯನ್ನು ರೂಪಿಸಲು ಆಧಾರವಾಗುವ ಜನಗಣತಿಯಲ್ಲಿ 'ಇತರ'ರಲ್ಲಿ ಸೇರಿಸಿಬಿಡುವುದು ಈ ಉದ್ದೇಶಕ್ಕೆ ಬಗೆಯುವ ಅಪಚಾರವಾಗುತ್ತದೆ ಎಂದಿರುವ ಈ ಪತ್ರವು, ವಿವಿಧ ಆದಿವಾಸಿ ಸಮುದಾಯಗಳು ತಮ್ಮದೇ ನಂಬಿಕೆ–ಆಚರಣೆಗಳನ್ನು ಹೊಂದಿರುವುದರಿಂದ ಜನಗಣತಿಯಲ್ಲಿ "ಪರಿಶಿಷ್ಟ ಬುಡಕಟ್ಟುಗಳು/ ಜನಜಾತಿ/ಆದಿವಾಸಿ ನಂಬಿಕೆಗಳು" ಎಂಬ ಒಂದು ಕಾಲಂ ಅನ್ನು ಸೇರಿಸುವುದು ಸೂಕ್ತ ಮತ್ತು ನ್ಯಾಯದ ವಿಚಾರವಾಗುತ್ತದೆ ಎಂದು ಹೇಳಿದೆ.

ಪತ್ರಿಕಾ ಸ್ವಾತಂತ್ರ್ಯ ಹರಣಕ್ಕೆ 'ರಾಜದ್ರೋಹ' ಕಾಯ್ದೆಯ ದುರುಪಯೋಗ– 15 ಸಂಸತ್ ಸದಸ್ಯರ ಖಂಡನೆ

ಸಿಪಿಐ(ಎಂ)ನ ಸಂಸದರಾದ ಜಾನ್ ಬ್ರಿಟ್ಟಾಸ್, ಎ.ಎ.ರಹೀಮ್ ಮತ್ತು ವಿ.ಶಿವದಾಸನ್ ಸೇರಿದಂತೆ 15 ಸಂಸದರು ಅಸ್ಸಾಂನಲ್ಲಿ ಬಿಜೆಪಿ ಸರ್ಕಾರವು ಭಾರತೀಯ ನ್ಯಾಯಸಂಹಿತೆ (ಬಿಎನ್‌ಎಸ್) ಯಲ್ಲಿ ಮಾರುವೇಷ ತೊಡಿಸಿದ ದೇಶದ್ರೋಹದ ಕಾನೂನನ್ನು ದುರುಪಯೋಗಪಡಿಸಿಕೊಂಡು, 'ದಿ ವೈರ್'ನ ಸಿದ್ಧಾರ್ಥ್ ವರದರಾಜನ್, ಕರಣ್ ಥಾಪರ್ ಮತ್ತು ಇತರ ಪತ್ರಕರ್ತರನ್ನು ಕಿರುಕುಳಗಳಿಗೆ ಗುರಿಪಡಿಸಲಾಗುತ್ತಿದೆ ಎಂದು ಖಂಡಿಸಿದ್ದಾರೆ. ಅಸ್ಸಾಂ ಪೊಲೀಸ್ ಬಳಸಿರುವ ಬಿಎನ್‌ಎಸ್‌ನ ಸೆಕ್ಷನ್ 152ರ ಅಡಿಯಲ್ಲಿ 'ದೇಶದ್ರೋಹ'ಕ್ಕೆ ಆಜೀವ ಜೈಲು ಶಿಕ್ಷೆ ವಿಧಿಸಬಹುದು.

ಸುಪ್ರಿಂ ಕೋರ್ಟಿನ ರಕ್ಷಣೆಯ ಹೊರತಾಗಿಯೂ ಪತ್ರಕರ್ತರಿಗೆ ಅಸ್ಸಾಂ ಪೊಲೀಸ್ ಸಮನ್ಸ್ ಪತ್ರಿಕಾ ಸ್ವಾತಂತ್ರ್ಯದ ಮೇಲಷ್ಟೇ ಅಲ್ಲ, ಪ್ರಜಾಪ್ರಭುತ್ವದ ಮೇಲೆಯೇ ಒಂದು ನಿರ್ಲಜ್ಜ ದಾಳಿ ಎಂದು ಈ ಸಂಸದರು ತಮ್ಮ ಜಂಟಿ ಪತ್ರಿಕಾಹೇಳಿಕೆಯಲ್ಲಿ ವರ್ಣಿಸಿದ್ದಾರೆ. ಅಸ್ಸಾಂನ ಬಿಜೆಪಿ ಸರಕಾರ ಸ್ವತಂತ್ರ ದನಿಗಳನ್ನು ಹೆದರಿಸಲು ಮತ್ತು ವಿಮರ್ಶೆಗಳ ಬಾಯಿ ಮುಚ್ಚಿಸಲು ಮಾರುವೇಷ ತೊಡಿಸಿದ ದೇಶದ್ರೋಹದ ಕಾಯ್ದೆಗಳ ದುರುಪಯೋಗ ಮಾಡುತ್ತಿದೆ ಎನ್ನುತ್ತ ಇದನ್ನು ಬಲವಾಗಿ ಖಂಡಿಸುತ್ತ, ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ತಕ್ಷಣವೇ ಈ ದುರುದ್ದೇಶದ ಕೇಸುಗಳನ್ನು ವಾಪಾಸು ಪಡೆಯಬೇಕು ಮತ್ತು ಮಾಧ್ಯಮಗಳ ವಿರುದ್ಧ ಸೆಕ್ಷನ್ 152ರ ಬಳಕೆಯನ್ನು ಕೊನೆಗೊಳಿಸಬೇಕು ಎಂದೂ ಇವರು ಆಗ್ರಹಿಸಿದ್ದಾರೆ.

ಜಾನ್ ಬ್ರಿಟ್ಟಾಸ್, ಜೈರಾಮ್ ರಮೇಶ್, ತಿರುಚಿ ಶಿವ, ರಾಮಗೋಪಾಲ್ ಯಾದವ್, ದಿಗ್ವಿಜಯ್ ಸಿಂಗ್, ಜಯಾ ಬಚನ್, ರೇಣುಕಾ ಚೌಧರಿ, ಮುಕುಲ್ ವಾಸ್ನಿಕ್, ಶಕ್ತಿಸಿಂಹ ಗೋಹಿಲ್, ಸೈಯದ್ ನಾಸೀರ್ ಹುಸೇನ್, ಜಾವೇದ್ ಅಲಿ ಖಾನ್, ಎ.ಎ.ರಹೀಮ್, ವಿ.ಶಿವದಾಸನ್, ಆರ್. ಗಿರಿರಾಜನ್ ಮತ್ತು ಅನಿಲ್ ಕುಮಾರ್ ಯಾದವ್ ಈ ಜಂಟಿ ಹೇಳಿಕೆಗೆ ಸಹಿ ಹಾಕಿರುವ ಸಂಸದರು.

ಸುಪ್ರಿಂ ಕೋರ್ಟ್ ಆಗಸ್ಟ್ 12ರಂದು ವರದರಾಜನ್ ಮತ್ತು ವೈರ್ ವಿರುದ್ಧ ಯಾವುದೇ 'ಬಲಾತ್ಕಾರದ ಕ್ರಮ' ಕೈಗೊಳ್ಳಬಾರದು ಎಂದು ಅಸ್ಸಾಂ ಪೊಲಿಸ್‌ಗೆ ನಿರ್ದೇಶನ ನೀಡಿದರೂ, ಅದನ್ನು ಉಲ್ಲಂಘಿಸಿ, ಅದೇ ದಿನ ಎರಡನೇ ಎಫ್‌ಐಆರ್ ದಾಖಲಿಸಿ ಈ ಇಬ್ಬರು ಪತ್ರಕರ್ತರಿಗೆ ಸಮನ್ಸ್ ಹೊರಡಿಸಲಾಗಿದೆ ಎಂದು ವರದಿಯಾಗಿದೆ. ಅಲ್ಲದೆ, ಇಂತಹ ಸಮನ್ಸ್ ಜೊತೆಗೆ ಎಫ್‌ಐಆರ್ ಪ್ರತಿಯನ್ನು ಲಗತ್ತಿಸಬೇಕು ಎಂದು ನ್ಯಾಯಾಲಯ ಈ ಹಿಂದೆ ಸ್ಪಷ್ಟಗೊಳಿಸಿದ್ದರೂ, ಎಫ್‌ಐಆರ್ ಇಲ್ಲದೇ ಸಮನ್ಸ್ ಜಾರಿ ಮಾಡಲಾಗಿದೆ ಎಂದೂ ವರದಿಯಾಗಿದೆ.

.....

ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರಕೃತಿ ವಿಕೋಪಗಳಲ್ಲಿ ಸಾವನ್ನಪ್ಪಿದ ನೂರಕ್ಕೂ ಹೆಚ್ಚು ಜನರ ಸಾವಿಗೆ ಪೊಲಿಟ್‌ಬ್ಯೂರೋ ಸಂತಾಪ ಸೂಚಿಸಿತು. ●

ಟ್ರಂಪ್ ಸುಂಕಗಳು.....

ಪುಟ 13 ರಿಂದ

ಅವರು 1930ರ ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ಸೂಚಿಸಿದ್ದರು. ಈ ನಿರೀಕ್ಷೆಗೆ ವ್ಯತಿರಿಕ್ತವಾಗಿ ಇಂದು ಅಮೆರಿಕವು ತಾನು ಮಾತ್ರವೇ ಬಿಕ್ಕಟ್ಟಿನಿಂದ ಹೊರಬರಲು ಪ್ರಯತ್ನಿಸುತ್ತಿದೆ ಮತ್ತು ಅದೇ ಸಮಯದಲ್ಲಿ ಅದು ಇಡೀ ಬಂಡವಾಳಶಾಹಿ ಜಗತ್ತಿನ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, "ಮತ್ತೊಮ್ಮೆ ಅಮೆರಿಕವನ್ನು ಅಗ್ರ ಮಾನ್ಯ ದೇಶವನ್ನಾಗಿಸಲು" (MAGA) ಟ್ರಂಪ್ ಪ್ರಯತ್ನಿಸುತ್ತಿರುವುದು ಬಂಡವಾಳಶಾಹಿ ಜಗತ್ತಿನ ಬಿಕ್ಕಟ್ಟನ್ನು ನಿವಾರಿಸುವಲ್ಲಿ ಮುಂದಾಳತ್ವ ವಹಿಸುವ ಮೂಲಕ ಅಲ್ಲ, ಬದಲಾಗಿ ಉಳಿದ ಬಂಡವಾಳಶಾಹಿ ಜಗತ್ತಿನ, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣದ ದೇಶಗಳ ಕೈ ತಿರುಚಿ ಅವು ಇನ್ನೂ ಹೆಚ್ಚು ದುಃಖವನ್ನು ನುಂಗುವಂತೆ ಮಾಡುವ ಮೂಲಕ ಅಮೆರಿಕ ಮಾತ್ರವೇ ಬಿಕ್ಕಟ್ಟಿನಿಂದ ಹೊರಬರುವುದಕ್ಕಾಗಿ.

ಟ್ರಂಪ್ ಒಬ್ಬ ದುಷ್ಟನೋ ಅಥವಾ ಪೆದ್ದನೋ ಆಗಿರುವುದರಿಂದಾಗಿ ಬಿಕ್ಕಟ್ಟಿನಿಂದ ಹೊರಬರುವ ಒಂದು "ಪ್ರಬುದ್ಧ" ಮಾರ್ಗವನ್ನು ತೊರೆದಿದ್ದಾರೆ ಎನ್ನಲಾಗದು. ಅವರು ಏನು ಮಾಡುತ್ತಿದ್ದಾರೋ ಅದು ಉದಾರವಾದಿ ಬೂರ್ಜ್ವಾ ಬುದ್ಧಿಜೀವಿಗಳು ಕಲ್ಪಿಸಿಕೊಳ್ಳುವ ಆಶಾದಾಯಕ ಪರಿಸ್ಥಿತಿಗಿಂತ ಭಿನ್ನವಾಗಿದೆ ಮತ್ತು ಬಂಡವಾಳಶಾಹಿಯ ಸ್ವರೂಪಕ್ಕೆ ಅನುಗುಣವಾಗಿದೆ. ಬಂಡವಾಳಶಾಹಿಯು ಒಂದು ಯೋಜಿತ ವ್ಯವಸ್ಥೆಯಲ್ಲದ ಕಾರಣ ಅದು ಎದುರಿಸುತ್ತಿರುವ ಬಿಕ್ಕಟ್ಟಿಗೆ ಯಾವುದೇ "ತರ್ಕಬದ್ಧ" ಪರಿಹಾರವನ್ನೂ ಅದು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಅಮೆರಿಕವು ಈ ಬಿಕ್ಕಟ್ಟಿನಲ್ಲಿ ತನ್ನ ಹಿತಾಸಕ್ತಿಯನ್ನು ತಾನು ಕಾಪಾಡಿಕೊಳ್ಳುತ್ತಿದೆ.

ಬಿಕ್ಕಟ್ಟಿನಿಂದ ಹೊರಬರಲು ಅಮೆರಿಕ ಮಾಡುತ್ತಿರುವ ಪ್ರಯತ್ನವು ಉಳಿದ ವಿಶ್ವವನ್ನು, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣವನ್ನು, ಇನ್ನೂ ಆಳದಲ್ಲಿ ಮುಳುಗಿಸುತ್ತಿದೆ ಎಂಬುದು ಬೇರೆ ಬೇರೆ ದೇಶಗಳೊಂದಿಗಿನ ಅದರ ವ್ಯಾಪಾರ ಮಾತುಕತೆಗಳಲ್ಲಿ ಅಮೆರಿಕವು ಮಾಡುತ್ತಿರುವ ಬೇಡಿಕೆಗಳಿಂದ ಸ್ಪಷ್ಟವಾಗುತ್ತದೆ. ಅತಿ ಹೆಚ್ಚಿನ ಸುಂಕಗಳನ್ನು ವಿಧಿಸುವುದಾಗಿ ಅದು ಆರಂಭದಲ್ಲಿ ಬೆದರಿಕೆ ಹಾಕುತ್ತದೆ. ಆದರೆ, ಮಾತುಕತೆ ನಡೆಸುವ ದೇಶವು ಅಮೇರಿಕದ ವಿವಿಧ ರೀತಿಯ ಸರಕುಗಳನ್ನು ಶೂನ್ಯ ಸುಂಕದಲ್ಲಿ ಆಮದು ಮಾಡಿಕೊಳ್ಳಲು ಒಪ್ಪಿಕೊಂಡರೆ, ತಾನು ಅತಿ ಸಣ್ಣ ಪ್ರಮಾಣದ ಸುಂಕ ಹೇರುವೆ ಎನ್ನುತ್ತದೆ. ಈ ರೀತಿಯಲ್ಲಿ ಅದು ಹಲವಾರು ದೇಶಗಳೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ.

ಸುಂಕಗಳ ಹೇರಿಕೆಯು ಜಾಗತಿಕ ದಕ್ಷಿಣದ ದೇಶಗಳಿಗೆ ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡಬಲ್ಲದು. ಉದಾಹರಣೆಗೆ, ಜವಳಿ, ರತ್ನಾಭರಣಗಳು ಮತ್ತು ಔಷಧೀಯ ಉತ್ಪನ್ನಗಳೂ ಸೇರಿದಂತೆ ನಮ್ಮ ಪ್ರಮುಖ ರಫ್ತುಗಳ ಮೇಲೆ ಕೆಲವು ರಿಯಾಯಿತಿಗಳನ್ನು ಪಡೆಯಲು, ಭಾರತವು ಅಮೆರಿಕದ ಡೈರಿ ಉತ್ಪನ್ನಗಳು, ಒಣಗಿಸಿದ ಹಣ್ಣುಗಳು, ಗೇರು ಬೀಜಗಳು ಮುಂತಾದ ಸರಕುಗಳನ್ನು ಯಾವ ನಿರ್ಬಂಧವೂ ಇಲ್ಲದೆ ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದು ಭಾರತದ ಲಕ್ಷಾಂತರ ಮಂದಿ ರೈತರಿಗೆ ಸಂಕಷ್ಟವನ್ನು ತರುತ್ತದೆ. ಆಮದು ಮಾಡಿಕೊಂಡ ಅಮೆರಿಕದ ಸರಕುಗಳು ಉಂಟುಮಾಡುವ ಪೈಪೋಟಿಯನ್ನು ಭಾರತದ ರೈತರು ತಡೆದುಕೊಳ್ಳುವುದು ಸಾಧ್ಯವಾಗದು. ಸಾಧ್ಯವಾಗದಿರುವುದು ಅಮೆರಿಕದ ರೈತರು ಹೆಚ್ಚು "ದಕ್ಷರು" ಎಂಬ ಕಾರಣದಿಂದಲ್ಲ; ತಮ್ಮ ಉತ್ಪನ್ನಗಳಿಗೆ ಅಮೆರಿಕದ ರೈತರು ಅತ್ಯಧಿಕ ಪ್ರಮಾಣದ ಸಬ್ಸಿಡಿಯನ್ನು ಸರ್ಕಾರದಿಂದ ಪಡೆಯುವ ಕಾರಣದಿಂದ. ಅಮೆರಿಕದ ರೈತರು ಪಡೆಯುವ ಸಬ್ಸಿಡಿಗಳನ್ನು ವಿಶ್ವ ವ್ಯಾಪಾರ ಸಂಸ್ಥೆಯು ನಿಷೇಧಿತ ಸಬ್ಸಿಡಿಗಳ ಪಟ್ಟಿಯಿಂದ ಅತಾರ್ಕಿಕವಾಗಿ, ಆಕ್ರೋಶಕಾರೀ ರೀತಿಯಲ್ಲಿ ಹೊರಗಿಟ್ಟಿದೆ.

ನವ ಉದಾರವಾದವು ದೇಶವನ್ನು, ರೈತರ ಹಿತಾಸಕ್ತಿಗಳನ್ನು ಬಲಿ ಕೊಡಬೇಕೋ, ಅಥವಾ ಔಷಧಗಳು, ರತ್ನಾಭರಣಗಳು, ಬಟ್ಟೆ ಮುಂತಾದವುಗಳನ್ನು ಉತ್ಪಾದಿಸುವವರ ಹಿತಾಸಕ್ತಿಗಳನ್ನು ಬಲಿ ಕೊಡಬೇಕೋ ಎಂಬುದರ ನಡುವೆ ಒಂದನ್ನು' ಆಯ್ಕೆ ಮಾಡಿಕೊಳ್ಳುವಂತಹ ಒಂದು ಸ್ಥಿತಿಗೆ ತಂದು ನಿಲ್ಲಿಸಿದೆ. ಇದರಿಂದ ಹೊರಬರುವ ಮಾರ್ಗವೆಂದರೆ, ಅಂತಹ ಯಾವುದೇ ಆಯ್ಕೆಯನ್ನು ಮಾಡುವುದಲ್ಲ, ಬದಲಿಗೆ ಈ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳುವಂತೆ ಬಲವಂತಪಡಿಸುವ ವ್ಯವಸ್ಥೆಯನ್ನೇ ಮೀರುವುದು, ಅಂದರೆ, ನವ–ಉದಾರವಾದವನ್ನೇ ಮೀರಿ ನಿಲ್ಲುವುದು ಎಂದಾಗುತ್ತದೆ. ●

ಫಿಡೆಲ್ ನಿನ್ನ ಹೆಸರದು.....

ಪುಟ 4 ರಿಂದ

ಶೋಷಣೆಯನ್ನು ಜಗದ ನೊಗದಿಂದ ಕಿತ್ತೆಸೆಯಬೇಕೆಂಬ ಧೃಡತೆಯೊಂದಿಗೆ, ಅದನ್ನು ಸಾಧಿಸಲು ಕಮ್ಯುನಿಸಂನಿಂದ ಮಾತ್ರ ಸಾಧ್ಯ ಎಂದು ಪ್ರಾಮಾಣಿಕವಾಗಿ ನಂಬಿದ ಅಸಂಖ್ಯಾತ ಪ್ರಗತಿಪರರು ಮತ್ತು ಬುದ್ದಿಜೀವಿಗಳು, ಅತ್ಯಂತ ಶ್ರೇಷ್ಠ ಮಹಿಳೆಯರು ಮತ್ತು ಪುರುಷರ ಜಾತಿಗೆ ಸೇರಿದವರು ಫಿಡೆಲ್. ಅಂದಿಗೆ ಲ್ಯಾಟಿನ್ ಅಮೇರಿಕದ ಹಲವಾರು ದೇಶಗಳಲ್ಲಿ ಅಮೇರಿಕದ ಬೆಂಬಲ ಮತ್ತು ಪಿತೂರಿಗಳಿಂದ ಸ್ಥಾಪನೆಗೊಂಡಿದ್ದ ಸರ್ವಾಧಿಕಾರಿ ನಾಯಕರಿದ್ದರು. ಕ್ಯೂಬಾದಲ್ಲಿ ಬಟಿಸ್ಟಾ, ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಟ್ರೂಜಿಲ್ಲೋ, ಹೈಟಿಯಲ್ಲಿ ಡುವೆಲಿಯರ್, ನಿಕರಾಗುವಾದಲ್ಲಿ ಸೊಮೊಜ್ಞ, ವೆನಿಜುವೆಲಾದಲ್ಲಿ ಪೆರೆಜ಼್ ಜಿಮೆನೆಜ಼್, ಪರಾಗ್ವೆಯಲ್ಲಿ ಸ್ಟ್ರೋಸ್ನರ್, ಮುಂತಾಗಿ ಕ್ರೂರ ಸರ್ವಾಧಿಕಾರಿಗಳು ವಸಾಹತುಶಾಹಿ ಮತ್ತು ಬಂಡವಾಳಶಾಹಿಗಳ ಸೇವೆ ಸಲ್ಲಿಸುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಫಿಡೆಲ್ ತನ್ನ 32ನೇ ವಯಸ್ಸಿನಲ್ಲಿ 1959 ಜನವರಿಯಲ್ಲಿ ಕ್ಯೂಬಾ ಕ್ರಾಂತಿಯನ್ನು ಯಶಸ್ವಿಯಾಗಿ ಸಂಘಟಿಸಿದರು. ಪಶ್ಚಿಮ ಭೂಗೋಳದಲ್ಲಿ ನಡೆದ ಮೊದಲ ಸಮಾಜವಾದಿ ಕ್ರಾಂತಿಯಿದು.

ಗೆರಿಲ್ಲಾ ಮಾದರಿ ಪ್ರತಿರೋಧ

ಫಿಡೆಲ್ ತಂದೆ ಏಂಜಲೋ ಕ್ಯಾಸ್ಟ್ರೋ ಮೂಲತಃ ಸ್ಪೈನ್ ದೇಶದವರು. ಒಂದು ಸಾಮಾನ್ಯ ಬಡಕುಟುಂಬದ ಹಿನ್ನೆಲೆಯಿಂದ ಬಂದು, ಕ್ಯೂಬಾದ ಪೂರ್ವ ಓರಿಯಂಟೆ ಪ್ರಾಂತದ ಬೈರನ್ ಪ್ರದೇಶದಲ್ಲಿ ನೆಲೆಸಿ, ಅಪಾರ ಪ್ರಮಾಣದ ಭೂಮಿಯನ್ನು ಗಳಿಸಿದ್ದರು. ಫಿಡೆಲ್ ಕುಟುಂಬ ಅತ್ಯಂತ ಶ್ರೀಮಂತವಾದರೂ ಸುತ್ತಲ ವಾತಾವರಣ ತೀರಾ ಬಡತನದಿಂದ ಕೂಡಿತ್ತು. ಫಿಡೆಲ್‌ಗೆ ಬಂಡಾಯ ಮತ್ತು ಸಾಹಸದ ಪ್ರವೃತ್ತಿ ಬಾಲ್ಯದಿಂದಲೂ ಬಂದಿತ್ತು. ಹವಾನಾ ವಿಶ್ವವಿದ್ಯಾಲಯದಲ್ಲಿ ಓದುವಾಗ ಈ ಪ್ರವೃತ್ತಿಗೆ ಒಂದು ಸ್ಪಷ್ಟವಾದ ದಾರಿಯನ್ನು ಕಂಡುಕೊಂಡರು. ಬಟಿಸ್ಟಾನ ಸರ್ವಾಧಿಕಾರದ ವಿರುದ್ಧ ಅಲ್ಲಿಂದಲೇ ಸಂಘಟನೆ ಆರಂಭಿಸಿದರು. ಕ್ಯೂಬಾದ ಪರಿಸ್ಥಿತಿಯನ್ನು ಅನುಸರಿಸಿ ಗೆರಿಲ್ಲಾ ಮಾದರಿ ಪ್ರತಿರೋಧವನ್ನು ರೂಪಿಸಿದರು. ಅದನ್ನು ಮೊದಲು ಪ್ರಯೋಗಿಸಿದ್ದು ಮೊಂಕಾಡಾ ಬ್ಯಾರಕ್ ದಾಳಿಯಲ್ಲಿ. ಆದರೆ ಲೆಕ್ಕಾಚಾರಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿ ದಾಳಿ ವಿಫಲವಾಯಿತು. ಸೆರೆ ಸಿಕ್ಕ ಫಿಡೆಲ್ ಮತ್ತು ಗೆಳೆಯರನ್ನು ಬಟಿಸ್ಟಾ ಸರ್ಕಾರ ಜೈಲಿಗೆ ಹಾಕಿತು. ಕೋರ್ಟಿನಲ್ಲಿ ಸ್ವತಃ ವಾದ ಮಾಡಿದ ಫಿಡೆಲ್ ಕೊನೆಯಲ್ಲಿ ಲಿಖಿತ ಭಾಷಣವನ್ನು ಮಂಡಿಸಿದರು. ಕ್ಯೂಬಾದ ಭೂತ, ವರ್ತಮಾನ ಮತ್ತು ಭವಿಷ್ಯತ್ ಬಗ್ಗೆಗಿನ ಮಾರ್ಗದರ್ಶಿಯಾದ ಇದು ಚರಿತ್ರೆಯಲ್ಲಿ **"ಇತಿಹಾಸ ನನ್ನನ್ನು ದೋಷಮುಕ್ತಗೊಳಿಸುತ್ತದೆ"** ಎಂದು ಹೆಸರಾಗಿದೆ. ಬಟಿಸ್ಟಾ ನ್ಯಾಯಾಲಯ ವಿಧಿಸಿದ ಜೈಲು ಶಿಕ್ಷೆಯಿಂದ ಮಧ್ಯದಲ್ಲೇ ಬಿಡುಗಡೆಯಾಗಿ, ಮೆಕ್ಸಿಕೋಗೆ ತಲೆಮರೆಸಿಕೊಂಡು ಹೋದರು.

– ಮುಂದುವರಿದ ಭಾಗ ಮುಂದಿನ ಸಂಚಿಕೆಯಲ್ಲಿ.

ಅಲಾಸ್ಕಾದಲ್ಲಿ ಟ್ರಂಪ್–ಪುಟಿನ್ ಶೃಂಗಸಭೆ.....

ಪುಟ 16 ರಿಂದ

* ಉಕ್ರೇನಿನ ಭದ್ರತೆಗೆ ಸೂಕ್ತ ವ್ಯವಸ್ಥೆ ಮಾಡಬೇಕು.
* ಇವನ್ನು ಚರ್ಚಿಸಲು ಝೆಲೆನ್ಸ್ಕಿ–ಪುಟಿನ್ ನೇರ ಮಾತುಕತೆ ಮತ್ತು ಅದರ ನಂತರ ಟ್ರಂಪ್–ಝೆಲೆನ್ಸ್ಕಿ–ಪುಟಿನ್ ತ್ರಿಪಕ್ಷೀಯ ಶೃಂಗಸಭೆ ನಡೆಸಬೇಕು.

ಇದು ಶೃಂಗಸಭೆಯ ನಂತರದ ಬೆಳವಣಿಗೆಗಳಿಂದ ಸ್ಪಷ್ಟವಾಗುತ್ತಿದೆ. ತಕ್ಷಣ ಕದನವಿರಾಮದ ಜಪ ಮಾಡುತ್ತಿದ್ದ ಝೆಲೆನ್ಸ್ಕಿ ಮತ್ತು ಯುರೋ ನಾಯಕರು ಈ ಬಗ್ಗೆ ಮಾತಾಡುತ್ತಿಲ್ಲ. ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರೋನ್ ಶಾಂತಿಗಾಗಿ ಉಕ್ರೇನ್ ಕೆಲವು ಭೂಪ್ರದೇಶ ಬಿಟ್ಟುಕೊಡಬೇಕಾಗಬಹುದು ಎಂದು ಟ್ರಂಪ್ ಜತೆ ದನಿಗೂಡಿಸಿದ್ದಾರೆ. ನಾಟೋ ಸದಸ್ಯತ್ವದ ಬಗ್ಗೆಯೂ ಯಾರೂ ಪ್ರಸ್ತಾಪಿಸಿಲ್ಲ. ಈಗ ಹೆಚ್ಚಿನ ಹೇಳಿಕೆಗಳು, ಚರ್ಚೆಗಳು "ಉಕ್ರೇನಿನ ಭದ್ರತೆಗೆ ಸೂಕ್ತ ವ್ಯವಸ್ಥೆ" ಅಂದರೆ ಏನು ಎಂಬುದರ ಬಗ್ಗೆ ಇದೆ. ಮಿನ್ಸ್ಕ್ ಒಪ್ಪಂದದಲ್ಲಿ ಸೂಚಿಸಲಾಗಿದ್ದ ಶಾಶ್ವತ 5+ಜರ್ಮನಿ ದೇಶಗಳ ಅಥವಾ OSCE ಯ ಜಂಟಿ ಆಶ್ವಾಸನೆ, ನಾಟೋ ಪಡೆಗಳು, ನಾಟೋದ ಕಲಮು 5 ಥರದ ವ್ಯವಸ್ಥೆ, ಅಂತರರಾಷ್ಟ್ರೀಯ ಶಾಂತಿಪಾಲನಾ ಪಡೆ – ಹೀಗೆ ಹಲವು ಮಾತುಗಳು ಕೇಳಿ ಬರುತ್ತಿವೆ. ಬಹುಶಃ ಮುಂದಿನ ಮಾತುಕತೆಗಳಲ್ಲಿ ಇದು ಮುಖ್ಯ ವಿಷಯವಾಗಿರುತ್ತದೆ.

ಇದಲ್ಲದೆ "ಶಾಂತಿಯ ಬದಲು ಭೂಪ್ರದೇಶದ ವಿನಿಮಯ ಆಗಬೇಕು" ಎಂಬುದರ ವಿವರಗಳು ಸಹ ಸ್ಪಷ್ಟವಿಲ್ಲ. ಪೂರ್ವ ಉಕ್ರೇನಿನ ಎಲ್ಲ 4 ಪ್ರಾಂತ್ಯಗಳು, ಈಗ ರಷ್ಯಾ ನಿಯಂತ್ರಣದಲ್ಲಿರುವ ಎಲ್ಲ ಪ್ರದೇಶಗಳು, ಡೊನ್ ಬಾಸ್ ಪ್ರದೇಶ ಮಾತ್ರ – ಹೀಗೆ ಈ ವಿಷಯದಲ್ಲೂ ಹಲವು ಸಾಧ್ಯತೆಗಳಿವೆ. ಇವಲ್ಲದೆ ರಷ್ಯಾದ ಮೇಲೆ ವಿಧಿಸಲಾದ ದಿಗ್ಬಂಧನಗಳನ್ನು ತೆಗೆಯುವುದು, ಪಾಶ್ಚಿಮಾತ್ಯ ಬ್ಯಾಂಕುಗಳು ಕಿತ್ತುಕೊಂಡ ರಷ್ಯನ್ ನಿಧಿ ಮತ್ತಿತರ ಆಸ್ತಿಗಳನ್ನು ಹಿಂತಿರುಗಿಸುವುದು ಮುಂತಾದ ವಿಷಯಗಳ ಇತ್ಯರ್ಥ ಸಹ ಆಗಬೇಕು. ಇವುಗಳಲ್ಲಿ ಯಾವುದು ಶಾಂತಿ ಪ್ರಕ್ರಿಯೆಗೆ ಬ್ರೇಕ್ ಆಗಬಹುದು.

ಯುರೋ ನಾಯಕರು ತಡೆಯೊಡ್ಡುವರೇ?

ಈ ಶಾಂತಿ ಮಾತುಕತೆಗಳು ಮುನ್ನಡೆಯುತ್ತಿದ್ದಂತೆ ಯುರೋ ನಾಯಕರು ಅತ್ಯಂತ ಸಂದಿಗ್ದ ಪರಿಸ್ಥಿತಿಯಲ್ಲಿದ್ದಾರೆ. ಈ ಮಾತುಕತೆಗಳ ಮೇಲೆ ಪ್ರಭಾವ ಬೀರಲು, ಉಕ್ರೇನ್ ಭದ್ರತೆ ಖಾತರಿ ಪಡಿಸುವಲ್ಲಿ ಮತ್ತು ಇಡೀ ಪ್ರಕ್ರಿಯೆಯಲ್ಲಿ ತಮ್ಮ ಪಾತ್ರವಿದೆ ಎಂದು ತೋರಿಸಿಕೊಳ್ಳಲು ಶತಪ್ರಯತ್ನ ಮಾಡುತ್ತಿದ್ದಾರೆ. ಬಿಡೆನ್ ಅಧ್ಯಕ್ಷರಾಗಿದ್ದಾಗ ಯುರೋ ಕೂಟ ಮತ್ತು ನಾಟೋವನ್ನು ಉಕ್ರೇನ್ ಯದ್ಧಕ್ಕೆ ಬಲವಂತವಾಗಿ ಸೆಳೆಯಲಾಯಿತು. ವಿಶೇಷವಾಗಿ ಜರ್ಮನಿ ಮತ್ತು ಫ್ರಾನ್ಸ್ ನಾಯಕರು ಇದರ ಬಗ್ಗೆ ಉತ್ಸುಕರಾಗಿರಲಿಲ್ಲ ಮತ್ತು ಅದರ ಪರವಾಗಿರಲಿಲ್ಲ. ಇದು ರಷ್ಯಾದ ಪೆಟ್ರೋಲ್–ಗ್ಯಾಸ್ ಮೇಲೆ ಬಹುಪಾಲು ಅವಲಂಬಿತವಾಗಿರುವ ಯುರೋಪಿನ ಇಂಧನ ಭದ್ರತೆಯನ್ನು ಹಾಳುಗೆಡವುತ್ತದೆ ಮತ್ತು ರಷ್ಯಾವನ್ನು ಅನಗತ್ಯವಾಗಿ ಎದುರು ಹಾಕಿಕೊಂಡ ಹಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ಆದರೆ ಯುಎಸ್ ನ ಮೇಲೆ ಮಿಲಿಟರಿ ಮತ್ತು ಆರ್ಥಿಕ ಅವಲಂಬನೆಯಿರುವ ಯುರೋ ಕೂಟ ಯುಎಸ್ ಹೇಳಿದಂತೆ ಉಕ್ರೇನ್ ಯುದ್ಧಕ್ಕೆ ಬೆಂಬಲ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕಾಯಿತು. ಇದರ ದುಷ್ಪರಿಣಾಮ ಯುರೋ ಕೂಟದ ಮತ್ತು ಜನತೆಯ ಮೇಲೆ ಆಗಿದೆ. ಯುರೋ ಕೂಟದ ದೇಶಗಳು ಮತ್ತು ಜನತೆ ಇಂಧನ ಕೊರತೆ, ದುಬಾರಿ ಬೆಲೆ ಮತ್ತು ತೀವ್ರ ಅಭದ್ರತೆಯಿಂದ ನರಳುತ್ತಿವೆ. ಯುಎಸ್ ದುಬಾರಿ ಇಂಧನ ಪೂರೈಕೆಮಾಡುವ ಮೂಲಕ ಹೆಚ್ಚಿನ ಲಾಭ ಗಳಿಸುತ್ತಿದೆ. ಇದರಿಂದಾಗಿ ಯುರೋಪಿನ ಕೈಗಾರಿಕಾ ಕೇಂದ್ರಗಳಾದ ಜರ್ಮನಿ ಮತ್ತು ಫ್ರಾನ್ಸ್ ಕೈಗಾರಿಕೆಗಳು ಬಿಕ್ಕಟ್ಟಿನಲ್ಲಿವೆ.

ಆದರೆ ಚೋದ್ಯದ ವಿಷಯವೆಂದರೆ ಈಗ ಯುಎಸ್ ಅಧ್ಯಕ್ಷ ಉಕ್ರೇನ್ ಶಾಂತಿ ಮಾತುಕತೆಗಳಲ್ಲಿ ಆಸಕ್ತಿ ವಹಿಸುತ್ತಿರುವಾಗ, ಯು.ಕೆ ಯುರೋ ನಾಯಕರು ಅಪಸ್ವರವೆತ್ತಿದ್ದಾರೆ, ಅಡ್ಡಗಾಲು ಹಾಕುತ್ತಿದ್ದಾರೆ ಎಂದೂ ಹೇಳಿದರೆ ತಪ್ಪಾಗಲಾರದು. ಉಕ್ರೇನ್ ಯುದ್ಧದ ಮುಂದುವರಿಕೆ ತಮ್ಮ ದೇಶ/ಜನಗಳ ಹಿತಾಸಕ್ತಿಗೆ ಮಾರಕವಾಗಿದ್ದರೂ, ಯುಎಸ್ ಮಿಲಿಟರಿ–ಆರ್ಥಿಕ ಬೆಂಬಲವಿಲ್ಲದೆ ಉಕ್ರೇನ್ ಒಂದು ದಿನವೂ ಯುದ್ಧ ಮುಂದುವರೆಸಲು ಸಾಧ್ಯವಿಲ್ಲವೆಂದು ಗೊತ್ತಿದ್ದರೂ, ಯುದ್ಧ ಮುಂದುವರಿಕೆ ಅನಿವಾರ್ಯವೆಂಬ ಸ್ಥಿತಿ ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಈ ನಡುವೆ ಯುರೋ ಕೂಟದ ದೇಶಗಳಲ್ಲಿ ಚುನಾವಣೆಗಳು ನಡೆದು ಹೊಸ ನಾಯಕರು ಬಂದಿರುವುದು ಸಹಾ ಕಾರಣವಾಗಿದೆ.

ಝೆಲೆನ್ಸ್ಕಿ ಮತ್ತು ಯುರೋ ನಾಯಕರು ಯಾವುದೇ ಧೋರಣೆ ಅನುಸರಿಸಿದರೂ, ಟ್ರಂಪ್ ಮತ್ತು ಪುಟಿನ್ ಧೃಢ ನಿಲುವು ತಳೆದರೆ ಉಕ್ರೇನಿನಲ್ಲಿ ಶಾಂತಿ ಸಾಧ್ಯ. ಅದರತ್ತ ನಡೆ ಆರಂಭವಾಗಿರುವಂತೆ ಕಾಣುತ್ತದೆ. ಆದರೆ ಶೃಂಗಸಭೆಯ ನಂತರದ ದಿನಗಳಲ್ಲಿ ಮಿಲಿಟರಿ–ಕೈಗಾರಿಕ ಸಂಕೀರ್ಣ ಮತ್ತು ಯುರೋ ಕೂಟದ ನಾಯಕರು ಇದಕ್ಕೆ ಅಡೆತಡೆ ಒಡ್ಡುವ ತೀವ್ರ ಪ್ರಯತ್ನದಲ್ಲಿ ತೊಡಗಿದ್ದಾರೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE August 25- 31, 2025 Price: Rs. 10/- Date of Publication: 22 August 2025 RNI No. KARKAN/2006/17926 Posted on 25-08-2025
Posted at BG PSO, BG - 560026 **Posted at Periodical Rate -** Rs. 2



ಅಲಾಸ್ಕಾದಲ್ಲಿ ಟ್ರಂಪ್–ಪುಟಿನ್ ಶೃಂಗಸಭೆ: ಉಕ್ರೇನ್ ಶಾಂತಿಯತ್ತ ನಡೆ ಸಾಧ್ಯವೇ?

ವಸಂತರಾಜ ಎನ್.ಕೆ

ಅಲಾಸ್ಕಾ ಶೃಂಗಸಭೆ ನಡೆದ ನಂತರ "ಯಾವುದೇ ಒಪ್ಪಂದಕ್ಕೆ ಸಹಿ ಹಾಕಿಲ್ಲ", "ಶಂಗಸಭೆ ವಿಫಲವಾಗಿದೆ", "ಪುಟಿನ್ ಜತೆ ಯಾವುದೇ ಒಪ್ಪಂದ ಸಾಧ್ಯವಿಲ್ಲ", "ಟ್ರಂಪ್ ಪುಟಿನ್‌ಗೆ ಮಣಿದಿದ್ದಾರೆ" ಎಂದೆಲ್ಲಾ ಯುಎಸ್ ಮತ್ತು ಯುರೋಪ್‌ನ ಸಾಮೂಹಿಕ ಮಾಧ್ಯಮಗಳು ಹೇಳಿದವು. ಆದರೆ ಶೃಂಗಸಭೆಯನ್ನು ಮತ್ತು ಅದು ಅತ್ಯಂತ ಸೌಹಾರ್ದ ರೀತಿಯಲ್ಲಿ ನಡೆದದ್ದನ್ನು, ಇಡೀ ಜಗತ್ತಿನ ಜನತೆ ಮತ್ತು ಜಾಗತಿಕ ದಕ್ಷಿಣದ ಸರಕಾರಗಳು ಸ್ವಾಗತಿಸಿವೆ ಮತ್ತು ಅದನ್ನು ಆಶಾಭಾವನೆಯಿಂದಲೇ ನೋಡಿವೆ. ಉಕ್ರೇನಿನಲ್ಲಿ ಶಾಂತಿ ಸ್ಥಾಪನೆಯ ಸಾಧ್ಯತೆಯನ್ನು ಇದು ತೆರೆದಿದೆ ಎಂದು ಭಾವಿಸಿವೆ. ಇದರರ್ಥ ಟ್ರಂಪ್ ಶಾಂತಿದೂತನೆಂದಲ್ಲ. ಅವರು ಬಹುಶಃ ವ್ಯೂಹಾತ್ಮಕ ಕಾರಣಗಳಿಗೆ ಉಕ್ರೇನ್ ಯುದ್ಧ ನಿಲ್ಲಿಸಲು ಹೊರಟಿದ್ದಾರೆ. ಆದರೆ ಶೃಂಗಸಭೆಯ ನಂತರದ ದಿನಗಳಲ್ಲಿ ಮಿಲಿಟರಿ–ಕೈಗಾರಿಕ ಸಂಕೀರ್ಣ ಮತ್ತು ಯುರೋ ಕೂಟದ ನಾಯಕರು ಇದಕ್ಕೆ ಅಡೆತಡೆ ಒಡ್ಡುವ ತೀವ್ರ ಪ್ರಯತ್ನದಲ್ಲಿ ತೊಡಗಿದ್ದಾರೆ.

ಆಗಸ್ಟ್ 15ರಂದು ಅಲಾಸ್ಕಾದಲ್ಲಿ ನಡೆದ ಟ್ರಂಪ್–ಪುಟಿನ್ ಶೃಂಗಸಭೆ ಅನಿರೀಕ್ಷಿತ ಮತ್ತು ಆಶ್ಚರ್ಯಕರ ರೀತಿಯಲ್ಲಿ ಉಕ್ರೇನ್ ಯುದ್ಧ ನಿಲುಗಡೆ ಮತ್ತು ಶಾಂತಿಯತ್ತ ನಡೆ ಆರಂಭಿಸುತ್ತಿರುವ ಸೂಚನೆಗಳಿವೆ. ಜುಲೈ28ರಂದಷ್ಟೇ ಯುಎಸ್ ಅಧ್ಯಕ್ಷ ಟ್ರಂಪ್ ರಷ್ಯನ್ ಅಧ್ಯಕ್ಷ ಪುಟಿನ್ ಅವರಿಗೆ 50 ದಿನಗಳ ಗಡುವು ಕೊಟ್ಟು, ಅಷ್ಟರೊಳಗೆ ಕದನ ವಿರಾಮ ಆಗದಿದ್ದರೆ ಇನ್ನಷ್ಟು ಆರ್ಥಿಕ ದಿಗ್ಬಂಧನವನ್ನು ಹೇರುವುದಾಗಿ ಸಾರ್ವಜನಿಕವಾಗಿ ಬೆದರಿಸಿದ್ದರು. ಅದೇ ಸಮಯದಲ್ಲಿ ರಷ್ಯದಿಂದ ತೈಲ ಖರೀದಿಸಿ ಉಕ್ರೇನ್ ಯುದ್ಧವನ್ನು ದೀರ್ಘಗೊಳಿಸುತ್ತಿರುವ ಭಾರತ, ಚೀನಾ, ಬ್ರೆಜಿಲ್‌ಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವುದಾಗಿ ಘೋಷಿಸಿದ್ದರು. ಕೆಲವೇ ದಿನಗಳಲ್ಲಿ ಅಧ್ಯಕ್ಷ ಟ್ರಂಪ್ ಅವರ ವಿಶೇಷ ರಾಯಭಾರಿ ವಿಶೇಷ ಸಂದೇಶದೊಂದಿಗೆ ಮಾಸ್ಕೊಗೆ ತೆರಳಿ ಶೃಂಗಸಭೆಗೆ ತಯಾರಿ ಆರಂಭಿಸಿದರು. ಕೆಲವೇ ದಿನಗಳಲ್ಲಿ ಅನಿರೀಕ್ಷಿತ ಮತ್ತು ಆಶ್ಚರ್ಯಕರ ರೀತಿಯಲ್ಲಿ ಶೃಂಗಸಭೆಯ ದಿನಾಂಕ (ಅಗಸ್ಟ್ 15) ಮತ್ತು ಸ್ಥಳ (ಅದೂ ಯುಎಸ್‌ನ ಅಲಾಸ್ಕಾ) ನಿಗದಿಯಾಗಿ ಬಿಟ್ಟಿತ್ತು.

"ಏಕಕ್ಷೀಯವಾಗಿ" ಶೃಂಗಸಭೆಯ ಘೋಷಣೆ ಮತ್ತು ಶೃಂಗಸಭೆಗೆ ತಮ್ಮನ್ನು ಆಹ್ವಾನಿಸದ್ದು ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ಮತ್ತು ಯುರೋ ಕೂಟದ ನಾಯಕರಲ್ಲಿ ಆತಂಕ, ಗಾಬರಿ ಮೂಡಿಸಿತ್ತು. ಉಕ್ರೇನ್ ಶಾಂತಿಗಾಗಿ ಕೆಲವು ಭೂಪ್ರದೇಶಗಳನ್ನು ಬಿಟ್ಟುಕೊಡಲು ತಯಾರಾಗಿರಬೇಕು ಎಂದು ಹೇಳಿದ್ದು ಇನ್ನಷ್ಟು ಆತಂಕ, ಗಾಬರಿಗಳಿಗೆ ಕಾರಣವಾಗಿತ್ತು. ಝೆಲೆನ್ಸ್ಕಿ ಲಂಡನ್‌ಗೆ ತೆರಳಿ ಯು.ಕೆ. ಪ್ರಧಾನಿ ಜತೆ ಪರಾಮರ್ಶೆ ನಡೆಸಿದರು. ಝೆಲೆನ್ಸ್ಕಿ ಮತ್ತು ಯುರೋ ನಾಯಕರು ತಮ್ಮೊಳಗೆ ಹಾಗೂ ಟ್ರಂಪ್ ಜತೆ ಕಾನ್ಫರೆನ್ಸ್ ಫೋನ್ ಕರೆ ಮಾಡಿದರು. ಉಕ್ರೇನ್ ಮತ್ತು ಯುರೋ ನಾಯಕರಿಲ್ಲದೆ ಉಕ್ರೇನ್ ಶಾಂತಿ ಮಾತುಕತೆ ಹೇಗೆ ಸಾಧ್ಯ? ತಕ್ಷಣದ ಕದನ ವಿರಾಮ ಆಗಬೇಕು. ಉಕ್ರೇನಿನ ಭೂಪ್ರದೇಶ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದೆಲ್ಲ ಸಾರ್ವಜನಿಕವಾಗಿಯೂ ಹೇಳಿಕೆ ನೀಡಿದರು. ಈ ಶೃಂಗಸಭೆ ಉಕ್ರೇನಿನಲ್ಲಿ ಶಾಂತಿ ಹಾದಿ ಮಾಡಿಕೊಡುತ್ತದೆಯೇ? ಅಯ್ಯೋ ಹಾಗಿದ್ದರೆ ನಮ್ಮ ಗತಿಯೇನು? ಎಂಬಂತಿತ್ತು ಅವರ ಪ್ರಲಾಪ! ಇತ್ತೀಚಿನ ಗ್ಯಾಲಪ್ ಸಮೀಕ್ಷೆಯ ಪ್ರಕಾರ ಶೇಕಡಾ 69 ಜನ ಯುದ್ಧ ಆದಷ್ಟು ಬೇಗ ನಿಲ್ಲಬೇಕು ಎಂದು ಬಯಸುತ್ತಾರೆ. ಕೇವಲ ಶೇ.24 ಜನ ಮಾತ್ರ ಉಕ್ರೇನ್ ಭೂ ಪ್ರದೇಶಗಳನ್ನು ವಾಪಸು ಪಡೆಯುವವರೆಗೆ ಯುದ್ಧ ಮುಂದುವರೆಸಬೇಕು ಎನ್ನುತ್ತಾರೆ. ಯುದ್ಧ ಆರಂಭವಾದಾಗ 2022ರಲ್ಲಿ ಈ ಸಂಖ್ಯೆ ಶೇ.73 ಇತ್ತು.

ತರಾತುರಿಯಲ್ಲಿ ಶೃಂಗಸಭೆ ಯಾಕೆ?

ಇದಕ್ಕೆ ಅನುಗುಣವಾಗಿಯೇ ಯುಎಸ್ ಮತ್ತು ಯುರೋಪ್‌ನ ಸಾಮೂಹಿಕ ಮಾಧ್ಯಮಗಳು ಅಲಾಸ್ಕಾ ಶೃಂಗಸಭೆಯ ವಿರುದ್ಧ ಪ್ರಚಾರ ಆರಂಭಿಸಿದವು. 'ಸರ್ವಾಧಿಕಾರಿ ಪುಟಿನ್ ನಂಬಲರ್ಹನಲ್ಲ'. ಯುಎಸ್‌ಗೆ ಆಹ್ವಾನ ನೀಡಿ, 'ಯುದ್ಧ ಅಪರಾಧಿ ಪುಟಿನ್'ಗೆ ಯಾಕೆ ಕುಮ್ಮಕ್ಕು ಕೊಡುತ್ತಿದ್ದೀರಿ', 'ಉಕ್ರೇನ್ ಜನ ಶಾಂತಿಗಾಗಿ ಭೂಪ್ರದೇಶ ಬಿಡುವುದಿಲ್ಲ", "ಈ ಶೃಂಗಸಭೆ ವಿಫಲವಾಗಲಿದೆ", "ಇದು ಬರಿಯ ಟ್ರಂಪ್ ನೊಬೆಲ್ ಪ್ರಶಸ್ತಿ ಖುಶಿಗೆ" – ಎಂದೆಲ್ಲ ಪ್ರಚಾರ ನಡೆಯಿತು. 'ಈ ಶೃಂಗಸಭೆ ಆರಂಭವಷ್ಟೇ', 'ಅಗತ್ಯವಿದ್ದರೆ ಎರಡನೆ ಶೃಂಗಸಭೆ ಏರ್ಪಡಿಸಬಹುದು. ಅದರಲ್ಲಿ ಝೆಲೆನ್ಸ್ಕಿ ಭಾಗವಹಿಸಬಹುದು" ಎಂದೆಲ್ಲ ತಮ್ಮ ಎಂದಿನ ಧಿಮಾಕಿನ ಮಾತು ಬಿಟ್ಟು ನಯವಾದ ಮಾತುಗಳಲ್ಲಿ ಟ್ರಂಪ್ ಹೇಳಿದರೂ ಈ ಪ್ರಚಾರ ನಿಲ್ಲಲಿಲ್ಲ.



ಅಲಾಸ್ಕಾ ಶೃಂಗಸಭೆಯನ್ನು ಯಾಕೆ ಇಷ್ಟು ತರಾತುರಿಯಲ್ಲಿ ವ್ಯವಸ್ಥೆ ಮಾಡಲಾಯಿತು? ಇದು ಕೆಲವು ಪಾಶ್ಚಿಮಾತ್ಯ ಮಾಧ್ಯಮಗಳು ಹೇಳಿದಂತೆ ಬರಿಯ ನೊಬೆಲ್ ಶಾಂತಿ ಪ್ರಶಸ್ತಿಗಾಗಿ, ಪುಟಿನ್ ಮೆಚ್ಚಿಸಲು ಟ್ರಂಪ್ ಪ್ರಯತ್ನದ ಭಾಗವಾಗಿ ನಡೆದದ್ದಲ್ಲ. ರಷ್ಯಾ ದಾಳಿಯ ವಿರುದ್ಧ ಉಕ್ರೇನ್ ಸೈನ್ಯದ ಪ್ರತಿರೋಧ ತೀವ್ರವಾಗಿ ಕುಸಿಯುತ್ತಿದೆ. ಸೈನಿಕರ, ಮದ್ದುಗುಂಡುಗಳ ಇತರ ಮಿಲಿಟರಿ ಅಗತ್ಯಗಳ ಪೂರೈಕೆಯ ತೀವ್ರ ಅಭಾವ ಕಂಡು ಬಂದಿದೆ. ಉಕ್ರೇನಿಯನ್ ಮತ್ತು ಯುರೋಪಿನ ಜನತೆಯ ಮನೋಬಲವೂ ಕುಸಿಯುತ್ತಿದೆ. ಪೂರ್ವ ಉಕ್ರೇನಿನ ರಶ್ಯಾ ಬಹುಸಂಖ್ಯಾತ ಪ್ರಾಂತ್ಯಗಳ ಮೇಲೆ ಹೆಚ್ಚು ಕಡಿಮೆ ರಷ್ಯಾದ ಸೈನ್ಯ ಪೂರ್ಣ ಹಿಡಿತ ಸಾಧಿಸಿದ್ದು, ಪಶ್ಚಿಮದತ್ತ ಸಾಗುತ್ತಿವೆ. ಟ್ರಂಪ್ ಅವರ 50 ದಿನಗಳ ಗಡುವಿನ ಒಳಗೆ ಕೆಲವೇ ವಾರಗಳಲ್ಲಿ ರಷ್ಯಾದ ಸೈನ್ಯ ಪಶ್ಚಿಮದತ್ತ ತೀವ್ರ ಮುನ್ನಡೆ ಸಾಧಿಸಿ ಇನ್ನಷ್ಟು ಆಯಕಟ್ಟಿನ ಪಟ್ಟಣಗಳನ್ನು ವಶಪಡಿಸಿಕೊಳ್ಳಬಹುದು. ಉಕ್ರೇನ್ ಜತೆ ಯುದ್ಧದ ತಳಮಟ್ಟದ ಈ ವಾಸ್ತವದ ಬಗ್ಗೆ ಟ್ರಂಪ್‌ಗೆ ನೀಡಲಾದ ವರದಿಯ ಆಧಾರದಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಹಾಗಾಗಿಯೇ ಟ್ರಂಪ್ ತನ್ನ ವಿಶೇಷ ದೂತನನ್ನು ಕಳಿಸಿ ಈ ಶೃಂಗಸಭೆಯನ್ನು ತರಾತುರಿಯಲ್ಲಿ ವ್ಯವಸ್ಥೆ ಮಾಡಿದರು.

ಅಲಾಸ್ಕಾ ಶೃಂಗಸಭೆ ನಡೆದ ನಂತರವೂ ಮತ್ತೆ "ಯಾವುದೇ ಒಪ್ಪಂದಕ್ಕೆ ಸಹಿ ಹಾಕಿಲ್ಲ", "ಶಂಗಸಭೆ ವಿಫಲವಾಗಿದೆ", "ಪುಟಿನ್ ಜತೆ ಯಾವುದೇ ಒಪ್ಪಂದ ಸಾಧ್ಯವಿಲ್ಲ", "ಟ್ರಂಪ್ ಪುಟಿನ್‌ಗೆ ಮಣಿದಿದ್ದಾರೆ"– ಎಂದೆಲ್ಲಾ ಯುಎಸ್ ಮತ್ತು ಯುರೋಪ್‌ನ ಸಾಮೂಹಿಕ ಮಾಧ್ಯಮಗಳು ಹೇಳಿದವು. ಆದರೆ ಶೃಂಗಸಭೆಯನ್ನು ಮತ್ತು ಅದು ಅತ್ಯಂತ ಸೌಹಾರ್ದ ರೀತಿಯಲ್ಲಿ ನಡೆದದ್ದನ್ನು, ಇಡೀ ಜಗತ್ತಿನ ಜನತೆ ಮತ್ತು ಜಾಗತಿಕ ದಕ್ಷಿಣದ ಸರಕಾರಗಳು ಸ್ವಾಗತಿಸಿವೆ ಮತ್ತು ಅದನ್ನು ಆಶಾಭಾವನೆಯಿಂದಲೇ ನೋಡಿವೆ. ಉಕ್ರೇನಿನಲ್ಲಿ ಶಾಂತಿ ಸ್ಥಾಪನೆಯ ಸಾಧ್ಯತೆಯನ್ನು ಇದು ತೆರೆದಿದೆ ಎಂದು ಭಾವಿಸಿವೆ. ಇದರರ್ಥ ಟ್ರಂಪ್ ಶಾಂತಿದೂತನೆಂದಲ್ಲ. ಗಾಜಾ, ವೆನೆಜುವೇಲಾ ಮತ್ತಿತರ ಪ್ರದೇಶಗಳಲ್ಲಿ ಸಾಮ್ರಾಜ್ಯಶಾಹಿ ಆಕ್ರಾಮತೆಗೆ, ಯುದ್ಧಕ್ಕೆ ಪೂರ್ಣ ಕುಮ್ಮಕ್ಕು ಕೊಡುತ್ತಿದ್ದಾರೆ. ಅವರು ಬಹುಶಃ ವ್ಯೂಹಾತ್ಮಕ ಕಾರಣಗಳಿಗೆ ಉಕ್ರೇನ್ ಯುದ್ಧ ನಿಲ್ಲಿಸಲು ಹೊರಟಿದ್ದಾರೆ.

ಅಲಾಸ್ಕಾ ಶೃಂಗಸಭೆ ಏನು ಸಾಧಿಸಿತು?

ಅಲಾಸ್ಕಾ ಶೃಂಗಸಭೆಯ ನಂತರ ಟ್ರಂಪ್ ಶೃಂಗಸಭೆಯ ಮಾತುಕತೆಗಳ ಬಗ್ಗೆ ತಿಳಿಸಲು ಝೆಲೆನ್ಸ್ಕಿ ಮತ್ತು ಯುರೋ ನಾಯಕರ ಜತೆ ದೂರವಾಣಿ ಮೂಲಕ ಮಾತನಾಡಿದರು. ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಲು ಝೆಲೆನ್ಸ್ಕಿ ಅವರನ್ನು ವಾಶಿಂಗ್‌ಟನ್‌ಗೆ ಕರೆದರು. ಯುರೋ ನಾಯಕರನ್ನು ಟ್ರಂಪ್ ಆಹ್ವಾನಿಸದಿದ್ದರೂ, ಯು.ಕೆ, ಜರ್ಮನಿ, ಇಟಲಿ ದೇಶಗಳ ಪ್ರಧಾನಿಗಳು, ಫ್ರಾನ್ಸ್ ಮತ್ತು ಯುರೋ ಕಮಿಶನ್ ಅಧ್ಯಕ್ಷ, ನಾಟೋ ಪ್ರಧಾನ ಕಾರ್ಯದರ್ಶಿ – ಇವರೆಲ್ಲ ತರಾತುರಿಯಲ್ಲಿ ವಾಶಿಂಗ್‌ಟನ್‌ಗೆ ಧಾವಿಸಿ ಈ ಸಭೆಯಲ್ಲಿ ಭಾಗವಹಿಸಿದರು. ಉಕ್ರೇನಿನಲ್ಲಿ ಶಾಂತಿಗಿಂತ ಹೆಚ್ಚಾಗಿ ಯುರೋಪಿನ ಭದ್ರತೆಯನ್ನೂ ಪರಿಗಣಿಸಬೇಕು ಎಂಬುದು ಅವರ ಕಾಳಜಿಯಂತೆ ಕಾಣುತ್ತಿತ್ತು. ಆದರೆ ಟ್ರಂಪ್ ಜತೆ ಮಾತುಕತೆಯ ನಂತರ ಭಾಗವಹಿಸಿದವರ ಹೇಳಿಕೆಗಳನ್ನು ನೋಡಿದರೆ, ಶೃಂಗಸಭೆಯಲ್ಲಿ ಈ ಕೆಳಗಿನ ಸ್ಥೂಲ ಅಂಶಗಳ ಬಗ್ಗೆ ಒಮ್ಮತ ಮೂಡಿದ ಹಾಗೆ ಕಾಣುತ್ತದೆ

* ತಕ್ಷಣ ಕದನವಿರಾಮದ ಬದಲು ಶಾಶ್ವತ ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕು.
* ಶಾಂತಿ ಸ್ಥಾಪಿಸಲು ಭೂಪ್ರದೇಶದ ವಿನಿಮಯ ಆಗಬೇಕು.
* ಉಕ್ರೇನ್ ನಾಟೋ ಸದಸ್ಯತ್ವದ ಪ್ರಯತ್ನ ಕೈಬಿಡಬೇಕು.

ಪುಟ 15 ನೋಡಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**